100TH EDITION

Azim Premji Foundation

Bayalu ಬಯಲು

Vol #4

22nd Jan 2021

CELEBRATING THE 100TH EDITION OF THE E-MAGAZINE BY KARNATAKA FIELD INSTITUTES

Table of Contents

SL No.	Title	Author	District Institute	Page No.
1	Picture abhi Baaki hai !	Peri	Bengaluru	6
2	ಕನ್ನಡ ತೇರ ಎಳೆಯೋಣ ಬನ್ನಿ	Kemparaju S	Vijayapura	8
3	ಭಾವ ಭಾವಗಳಾಚೆ...	Hameed Manjeshwar	Bengaluru	10
4	FEAR – A SURPRISING ACUMEN	Maithily K	Ballari	12
5	ಚೌಕಟ್ಟಿನಾಚೆಗಿನ ಸಿನಿಮಾ: ದಿ ಗ್ರೇಟ್ ಇಂಡಿಯನ್ ಕಿಚನ್	Chikkaveeresh SV	Bagalkot	15
6	Going Digital	Aswini Ravula	Yadgir	17
7	ಅಯ್ಯಾ.... ಗಾಂಧಿ!	Shivakumar C S	Bagalkot	19
8	Economics of the Schooling	Ravindra Jain	Mandya	21
9	दृढ़ता – एक लगन	Dr. Biradar Shivaji	Bidar	23
10	ENK: A New Ray of Hope	Shrinivas Kulkarni	Raichur	25
11	ಪ್ರಾಥಮಿಕ ಶಾಲಾ ಹಂತದ ವಿಜ್ಞಾನ ತರಗತಿಗಳಲ್ಲಿ ಪರಿಕಲ್ಪನೆಗಳ ಅರ್ಥಪೂರ್ಣ ಕಲಿಕೆಯಲ್ಲಿ, ದೈನಂದಿನ ಜೀವನದ ಸಂದರ್ಭಗಳ, ಅನ್ವಯಿಸುವಿಕೆಯ ಪಾತ್ರ	Shobha K S	Koppal	27
12	Innate number sense	Vaishnavi	Ballari	30
13	ಇನ್ನೂ ಕೆಲಸ ಬಾಕಿ ಇದೆ...	Suresh Goudar	Yadgir	31
14	ಸೂಚಕ ಅರ್ಥ ಮತ್ತು ಅರ್ಥಪೂರ್ಣ ಅರ್ಥ	Nanagouda M K	Vijaypura	33

SL No.	Title	Author	District Institute	Page No.
15	Why Art	Renuka P B	Raichur	36
16	ಶಿಕ್ಷಣ ಯಾವುದು – ಜೆ. ಕೃಷ್ಣಮೂರ್ತಿ	Nagaraju	Bagalkot	38
17	Saving an insect	Ravikumar	Ballari	40
18	ಓತ್ಪನ್ ದೀರ್ಘವನ್ನು ಕಲಿಸುವ ವಿಧಾನ	Spurthi H K	Mandya	43
19	The best dowry parents can ever give to the girl child is Education	Haalesh D B	Koppal	47
20	ಕಾಯ್ಕಿಣಿಯ ಚಾರ್‌ಮಿನಾರ್	Hemanth	Raichur	48
21	ನಾವು ಮಕ್ಕಳ ಮಟ್ಟಕ್ಕೆ ಏರುವುದು ಎಂದರೆ.....?	Sujata	Bagalkot	51
22	A TEACHER'S SINCERITY	Meghana Bassari	Ballari	55
23	ಮಂಗನಿಂದ ಮಾನವ? ಚಿಂಪಾಜಿಗಳ ಜೀವನದೊಳಗೊಂದು ಇಣುಕು ನೋಟ	Haripriya J	Mandya	58
24	ಅನಿಶ್ಚಿತತೆಯಲ್ಲಿ ಗೋಚರಿಸಿದ ದಾರಿಗಳು	Jyoti Manappanavar		64
25	ನಾವು ಬಾಲ್ಯ ಅನುಭವಿಸಬೇಕು... ನಮಗೆ ಹಕ್ಕಯಗಳಿವೆಯೇ?	Dr. Shobhana	Koppal	67
26	ಮಾವೇಲಿಯುಂ ಸಾಂತಾ ಅಪ್ಪೂಪ್ಪನುಂ	Usha	Koppal	69
27	ಭಾಷೆಯ ಕಲಿಕೆ ಎಂದರೆ ವ್ಯಾಕರಣದ ಕಲಿಕೆಯೇ – ಒಂದು ವಿಶ್ಲೇಷಣೆ	Devaraja Kodabala	Koppal	72
28	ಕಲಿಯದವರಿಂದ ಕಲಿತೆ	Mahantesh	Vijayapur	79
29	My New world called Library!!!	Akshata S	Koppal	81

It is with great pleasure that I am writing in to the Bayalu team and everyone who has been part of the long journey that has brought this magazine to its 100th Edition.

Writing is the most taxing of activities and to get our busy members to write, and so regularly write and that too for 100 editions is proof of a certain never-say-die spirit that the Karnataka Field team possesses.

I still remember the stories of the early days of Bayalu shared by Peri while walking the ramparts of the Gulbarga Fort, 6 years back.

It has been good to see the different eons of creativity, that of a free form writing and then the transition to focus areas like Foundational Literacy and Numeracy. This indicates both the fertility of imagination and an embrace of the inevitable dance of change.

Kudos to all those who were part of the journey and may this river flow into the 200th and 300th edition in times that come…

- Shreekanth Shreedharan

ಬಯಲು ಅನ್ನೋದೆ ಒಂದು ಅಭೂತಪರ್ವ ಅನುಭವ. ಮುಕ್ತತೆಯ ಸಾಗರ, ಅನುಭವ ಮತ್ತು ಅನುಭೂತಿಯ ಆಗರ. ಯಾದಗಿರಿಯಲ್ಲಿ ಚಿಕ್ಕ ಗುಂಪೊಂದು ಪ್ರಾರಂಭಿಸಿದ ಬಯಲು ಇ ಪತ್ರಿಕೆ ನಿರಂತರತೆ ಹಾಗೂ ಸ್ಥಿರತೆ ಕಾಯ್ದುಕೊಂಡು ೧೦೦ರ ಪ್ರಕಟಣೆಯ ಘಟ್ಟಕ್ಕೆ ಬಂದು ನಿಂತದ್ದೆ ದೊಡ್ಡ ಸಂಭ್ರಮ. ಅಜೀಂ ಪ್ರೇಮ್ ಜೀ ಫೌಂಡೇಷನ್ನ ನನ್ನ ಎಲ್ಲಾ ಸಹೋದ್ಯೋಗಿ ಮಿತ್ರರು ಅವರ ಆಲೋಚನೆ, ಅನುಭವಗಳನ್ನ ಬರವಣಿಗೆಯ ರೂಪ ನೀಡಿ ಬಯಲು ಪತ್ರಿಕೆಯನ್ನು ಸಮೃದ್ಧಗೊಳಿಸಿದ್ದಾರೆ. ಬಯಲು ಕೇವಲ ಒಂದು ಪತ್ರಿಕೆಯಾಗಿರದೇ ನಮ್ಮೆಲ್ಲರ ವೃತ್ತಿ ಅಭಿವೃದ್ಧಿಯ ಬಹುದೊಡ್ಡ ವೇದಿಕೆಯಾಗಿ ಹೊರಹೊಮ್ಮಿದೆ. ಈ ನಿರಂತರತೆ ಹೀಗೆ ಮುಂದುವರೆಯಲಿ, ಇನ್ನು ಹೆಚ್ಚು ಜನರಿಗೆ ತಲುಪಲಿ, ಎಲ್ಲರು ಓದುವಂತಾಗಲಿ.....

– ರುದ್ರೇಶ್ ಎಸ್, ಕಲಬುರಗಿ

ಓದುವುದು ಮತ್ತು ಮಾತನಾಡುವುದು ಒಂದು ಸಾಮರ್ಥ್ಯ, ಆದರೆ ಉತ್ತಮವಾಗಿ ಬರೆಯುವುದು ಒಂದು ಉನ್ನತ ಸಾಮರ್ಥ್ಯ. ಬರವಣಿಗೆಯ ಮೂಲಕ ಒಬ್ಬ ವ್ಯಕ್ತಿ ಮುಖ್ಯವಾಗಿ ತನ್ನ ಜ್ಞಾನ, ಅನುಭವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ಜ್ಞಾನ, ಅನುಭವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವಾಗ 'ಭಾಷಾ ಸಾಮರ್ಥ್ಯ'ವೂ ಬಹಳ ಮುಖ್ಯವಾಗಿರುತ್ತದೆ. ಒಬ್ಬ ವ್ಯಕ್ತಿ ಉತ್ತಮ ಬರವಣಿಗೆಕಾರನಾಗಲು ನಿರಂತರ ಅಧ್ಯಯನಶೀಲನಾಗಬೇಕು ಹಾಗೂ ನಿರಂತರ ತನ್ನನ್ನು ತಾನು ವಿಮರ್ಶಿಸುತ್ತಿರಬೇಕು. ಈ ರೀತಿ ವಿಮರ್ಶಿಸುವ/ವಿಶ್ಲೇಷಿಸುವ ಮೂಲಕ ವ್ಯಕ್ತಿಯು ನಿರಂತರವಾಗಿ ಬೆಳೆಯುತ್ತಿರುತ್ತಾನೆ. ಆದುದರಿಂದ ಉತ್ತಮ ವ್ಯಕ್ತಿಯಾಗಿ ಬೆಳೆಯಲು "ಬಯಲು ಮಾಸ ಪತ್ರಿಕೆಗೆ" ನಿರಂತರವಾಗಿ ಬರೆಯಬೇಕೆಂದು ಆಶಿಸುತ್ತೇನೆ.

– ಉಮೇಶ್.ಪಿ

Picture abhi Baaki hai !

- Peri

It was a month full of celebrations! It was the culmination of the celebration with this issue… and we would like to take a break. For four consecutive week we published Bayalu. Along with the publication of Bayalu… we have reviewed 100 and odd books which have been published along with Bayalu. And then were 100 articles selected from the archives, published along with the Bayalu we are planning to culminate the celebration with this issue. There will be no issue of January….

The celebrations did give us a feeling that people are interested in Bayalu. People take things seriously and do whatever is possible. If not, all these things that were planned would not have been possible and possible at this successful rate. … Archana coordinated the Book review very successfully and Raghavendra Herle did a fantastic job of putting together the 100 articles from the archives of Bayalu. The expert talk was a hit with more than 200 members jointing each talk… There has been a huge demand for the expert talk. People have liked this talk by experts. The people we got are also very interesting and hence the expert talk will be continued… we have three members already lined up for the talk. Prof. Shylaja Menon is going to talk about the foundational literacy. She will touch upon the Liril study and elaborate on the foundational literacy … the role library and books play in making the foundational literacy successful. We have Wishwa Vinyas, a well-known senior artist who will give a demonstration of drawing simple sketches… this will be a very different session with hands on training on simple sketches. Then we have a very senior critic who will speak on why, what and how he writes. He will also touch upon the larger dimensions of writing, writing for a social cause. Anil Kudambal has been instrumental in making this so popular. We are thinking of continuing it.

There are three workshops planned. One on photography, the other on art and the third one on writing. The plan was to finish all these workshops during the celebrations. But the celebrations were too heavy, and we could not do these workshops. Hence, these are planned now. Akhila is organizing the photography workshop. It has been planned in 6 sessions. The main thrust is for the photography in mobile. Supriya is planning the art workshop. It is also planned in 6 units and it is for any person who does not know art but, is interested in art. The writing

workshop is planned by Shivakumar C.S, Hameed Manjeshwar and Peri. It is to initiate people to the habit of writing. It is planned with 12 sessions. It is a 3 months course with session every week. It will start with letter writing and move towards creative writing covering all genre of writing like travelogue, portrait, reporting, documenting, story poems and article writing, These three workshops are for people who do not know it but, are interested in it.

There has been a demand to conduct an online film making course. After the writing workshop we will organize a short film making course. This will be small film making in our mobile. We have discussed with Natesh Ullal, who has agreed to conduct this course. You will remember that Natesh recently conducted a competition for teachers on science TLM Making. Many teachers participated in this competition. We will run this course soon after completing the writing workshop. If these are all the central programs, there is a discussion about the districts and blocks doing program for their members and teachers. This is going to be very interesting. There are so many people who want to do things for their colleagues and teachers … we can have all these things and much more. And the thrust now is to write something professional. For foundational literacy, for us to use in the field.

There are two basic things that we need to do in Bayalu… one is to read original documents, reports, policies, concepts, theories and re-write them in such a simple way that others can read and understand. It will motivate them to read the original articles… This will lead to action! second is to write our experiences from the field. The things that we do daily. Write about our experiences so that others can benefit from it. These types of articles will help others try something in their own area. It will help others to correct the things that they are doing. Basically, it motivates people for action! From our experiences we should be able to construct new theories. This type of a writing should lead towards theory building. That should be our aim. And for all these things Bayalu is an open field. There is nothing in Bayalu. But, anything is possible in Bayalu. It is an open space inviting you to do things. Hence, do get in to Bayalu and start doing things. All the best!

ಕನ್ನಡ ತೇರ ಎಳೆಯೋಣ ಬನ್ನಿ.

– ಕೆಂಪರಾಜು

ತೇರು ಬಂದಿದೆ ಬನ್ನಿ ಎಳೆಯೋಣ

ಜೊತೆಯಾಗಿ ಸಾಗಿ ಬದುಕೋಣ ಬನ್ನಿ

ಕನ್ನಡ ತೇರೆಂದರೆ ಬರಿ ಮರದ ತೇರಲ್ಲ

ಅಲ್ಲಿದೆ ಬದುಕು ಭಾವದ ಅನುಪಮ ಬಂಧ

ಎಳೆಯೋಣ ಬನ್ನಿ ಕನ್ನಡ ತೇರ.

ಭಾರತಾಂಬೆಯ ಹಿರಿಯ ಹೆಣ್ಣುಮಗಳು ಕನ್ನಡತಿ

ಇವಳೇ ಈ ನೆಲದ ಗಟ್ಟಿಗಿತ್ತಿ

ನೆಲಮುಗಿಲು ಆರತಿಯ ಪಾವನ ಮೂರ್ತಿಯ ತೇರು

ಬಂದಿದೆ ನಾಡಿನ ವೈಭವವ ಸಾರುತ್ತಿದೆ ನೋಡಿ

ಮಾತನಾಡುವ ಭಾಷೆ ಸಂಸ್ಕೃತಿಯ ಪಯಣದ ಹಾದಿ

ಬನ್ನಿ ಸ್ನೇಹಿತರೇ ಎಳೆಯೋಣ ಕನ್ನಡದ ತೇರ.

ಕಾವೇರಿಯಿಂದ ಮಾ ಗೋದಾವರಿಮಿರ್ಪದಾ ನಾಡೊಳ್

ಇಲ್ಲಿನ ಜನ ಅಭಿಮಾನಿಗಳುತ್ಯುಗ್ರರ್ ಎಂದು

ಸಾರಿದ ಶ್ರೀವಿಜಯನ ಮಾತನ್ನು ಎತ್ತಿತೋರಿ ಸಾಗುತ್ತಿದೆ

ಕುರಿತೋದದೆ ಕಾವ್ಯ ಪ್ರಯೋಗಿಸುವ ಜ್ಞಾನಸಂಪನ್ನರ

ನಾಡ ಜ್ಯೋತಿಯ ಮೇಘದೀಪ ಬರುತ್ತಿದೆ

ಬನ್ನಿ ಎಳೆಯೋಣ ಕನ್ನಡ ತೇರ.ಹಿರಿಯರು ಕಟ್ಟಿದ ತೇರು ಕನ್ನಡದ ದಾಸಯ್ಯನಿಂದ

ಇದಕ್ಕಿಂತಲೂ ಪೂರ್ವಜರು ಕಟ್ಟಿ ನಿರ್ಮಿಸಿದ ತೇರು

ಪ್ರಸ್ತುತ ತಲೆಮಾರಿನವರೆವಿಗೂ ಸಾಗಿ ಬಂದಿದೆ ಕನ್ನಡದ

ತೇರು ಆದರೆ ಇವತ್ತು ತೇರನ್ನು ಎಳೆಯುವುದಕ್ಕೆ

ಯಾಕೆ? ಯೋಚನೆ ನೀವು ಎಳೆಯದಿದ್ದರೇನು

ದಾರಿಬಿಡಿ ಗೆಳೆಯರೇ ತೇರು ಸಾಗಲು.

ಕನ್ನಡ ಮನಸ್ಸು ಒಗ್ಗೂಡಿಸುವ ಧೀಮಂತ ದೈತ್ಯ

ಎನ್ನ ಮನದಲೊಂದು ದುಗುಡ ತೇರು ಮುಂದಿನ

ತಲೆಮಾರಿನವರೆವಿಗೂ ಎಳೆಯಬೇಕಿದೆ ನೀವು ಕೈ

ಜೋಡಿಸಿ ಬಾಂಧವರೇ ಎಲ್ಲರೂ ಸೀಮಾತೀತೆಯನ್ನು

ಮೀರಿ ಸಾಗಿಸೋಣ ಎಲ್ಲೆಮೀರಿ ಹೊನ್ನದೀವಿಗೆಯನ್ನು

ದಾಟಿ ಸಾಗೋಣ ಬನ್ನಿ ಸ್ನೇಹಿತರೇ

ತೇರ ಸಾಗಿಸೋಣ.

Maithily

ಭಾವ ಭಾವಗಳಾಚೆ...

– ಹಮೀದ್ ಮಂಜೇಶ್ವರ್

ಇದು ಕೆಲವು ವರ್ಷಗಳ ಹಿಂದಿನ ಘಟನೆ. ಅಂದು ಕೇರಳದ ಕಾಸರಗೋಡಿನಿಂದ ಮಂಗಳೂರಿಗೆ ಬಸ್ಸಿನಲ್ಲಿ ಹೊರಟಿದ್ದೆ. ಕಾಸರಗೋಡಿನಿಂದ ಹೊರಟ ಬಸ್ಸು ಕುಂಬಳೆ ಎಂಬಲ್ಲಿಗೆ ತಲುಪುವಾಗ ಅಲ್ಲಿ ಕೆಲವರು ಬಸ್ಸು ಹತ್ತಿದರು. ಅವರಲ್ಲಿ ಒಬ್ಬರು ೪೦–೪೫ರ ಸುಮಾರಿನ ಮುಸ್ಲಿಂ ಹೆಂಗಸು. ಬುರ್ಖಾ ಹಾಕಿಕೊಂಡಿದ್ದ ಆಕೆ, ನಾನು ಕುಳಿತ ಸೀಟಿನ ಎದುರು ಸೀಟಿನಲ್ಲಿ ಬಂದು ಕುಳಿತರು. ಒಂದಿಷ್ಟು ದಡೂತಿಯಂತಿದ್ದ ಆಕೆಯ ಮುಖದಲ್ಲಿ ದರ್ಪ ಎದ್ದು ಕಾಣುತ್ತಿತ್ತು. ಅಷ್ಟಾದರೆ ಅದು ಏನೂ ಆಗುತ್ತಿರಲಿಲ್ಲ. ಆದರೆ ಆಕೆಯೊಂದಿಗೆ ಇನ್ನೊಬ್ಬ ವ್ಯಕ್ತಿಯೂ ಬಸ್ಸು ಹತ್ತಿದರು. ಸಣಕಲು ದೇಹದ ಆತನ ನಿಜ ವಯಸ್ಸನ್ನು ಅಂದಾಜಿಸುವುದು ಕಷ್ಟ ಆಗಿತ್ತು. ಕಳೆಗುಂದಿದ್ದ ಮುಖ, ಕೆದರಿದ ಕೂದಲು ಆತನನ್ನು ಪ್ರಾಯಸ್ಥನಂತೆ ಕಾಣಿಸುತ್ತಿತ್ತು. ಆತ ಅಳುಮುಖದೊಂದಿಗೆ ಬಸ್ಸು ಹತ್ತಿ ಹಿಂದಿನ ಕೊನೆಯ ಸೀಟಲ್ಲಿ ಕೂತ. ಆತ ಅಳುತ್ತಿದ್ದುದರಿಂದ ನಾವು ತಿರುಗಿ ಅವನತ್ತಿರ ನೋಡುವಂತಾಗಿತ್ತು. ಇದಾದ ಸ್ವಲ್ಪ ಹೊತ್ತಿಗೆ ಆತ ಕುಳಿತಲ್ಲಿಂದ ಎದ್ದು ಆ ಹೆಂಗಸು ಕುಳಿತ ಸೀಟಿನಲ್ಲಿ ಕುಳಿತ. ಅಳುತ್ತಲೇ ಆತ ಆಕೆಗೆ ಏನೋ ಹೇಳಲೋದ. ಆಕೆ ಗದರಿಸಿ ಸುಮ್ಮನಿರಿಸಿದಳು. ಆತ ಅಳುತ್ತಲೇ ಇದ್ದ. ಆಗ ಆಕೆ ಅವನನ್ನು ಅಲ್ಲಿಂದ ಎದ್ದು ಹೋಗಲು ಹೇಳಿದಳು. ಕೊನೆಗೆ ಆತ ಅಲ್ಲಿಂದ ಎದ್ದು ಹೋಗಿ ಚಾಲಕನ ಪಕ್ಕದ ಅಡ್ಡ ಸೀಟಿನಲ್ಲಿ ಕುಳಿತ. ಆದರೆ ಆತನ ಅಳುಮುಖ ಮಾತ್ರ ಹಾಗೇ ಇತ್ತು.

ಆತನನ್ನು ನೋಡಿ ಅಯ್ಯೋ ಪಾಪ ಅನಿಸಿತು. ನಾನೂ, ನನ್ನ ಪಕ್ಕದಲ್ಲಿ ಕುಳಿತ (ಅಪರಿಚಿತ) ವ್ಯಕ್ತಿಯೂ ಪರಸ್ಪರ ಆಶ್ಚರ್ಯದಿಂದ ಮುಖ ಮುಖ ನೋಡಿಕೊಂಡೆವು. ನನ್ನಲ್ಲಿ ಏನೇನೋ ಯೋಚನೆಗಳು ಮೂಡತೊಡಗಿದವು. ಬಲಿ ಪೀಠಕ್ಕೆ ಕೊಂಡೊಯ್ಯುವ ಬಲಿಪಶುವಿನಂತೆ ಕಾಣತೊಡಗಿದ. ಈ ಹೆಂಗಸು ಬಹಳ ಕ್ರೂರಿ ಇರಬೇಕೆಂದುಕೊಂಡೆ. ಆತ ಆಕೆಯ ಮನೆಯಲ್ಲಿ ಕೆಲಸ ಮಾಡುವ ವ್ಯಕ್ತಿ. ಆತನನ್ನು ಇನ್ಯಾವುದೋ ಆಕೆಯ ಸಂಬಂಧಿಕರ ಮನಗೆ ಕೆಲಸಕ್ಕೆ ಆಕೆ ಕರೆದುಕೊಂಡು ಹೋಗುತ್ತಿದ್ದಾಳೆ. ಆತನಿಗೆ ಅದು ಇಷ್ಟ ಇಲ್ಲ. ಆತ ಬರುವುದಿಲ್ಲ ಎಂದು ಅತ್ತು–ಕರೆದು ಕೇಳಿಕೊಂಡರೂ ಆತನ ಅಭಿಪ್ರಾಯಕ್ಕೆ ವಿರುದ್ಧವಾಗಿ ಬಲವಂತವಾಗಿ ಕರೆದುಕೊಂಡು ಹೋಗುತ್ತಿದ್ದಾಳೆ. ಈ ಹಣವಂತರ ದರ್ಪವೇ ಹೀಗೆ. ದುಬೈಯಲ್ಲಿ ದುಡಿವವರು ಮನೆಯಲ್ಲಿದ್ದರೆ ಅಲ್ಲಿಂದ ಬೇಕಾಬಿಟ್ಟಿ ದುಡ್ಡು ಬರುತ್ತದೆ. ಇಲ್ಲಿ ಇವರು ದರ್ಪ ತೋರುತ್ತಾರೆ. ಮನುಷ್ಯರ ಅಭಿಪ್ರಾಯಕ್ಕೆ ಇಲ್ಲಿ ಬೆಲೆಯೇ ಇಲ್ಲ. ಕೆಲಸಕಾರರಸ್ಥಿತಿಯೇ ಹೀಗಾಯಿತಲ್ಲ ಎಂದು ಯೋಚಿಸುತ್ತಿದ್ದೆ. ಇದೇ ಅರ್ಥದಲ್ಲಿ ನಾನೂ ನನ್ನ ಪಕ್ಕದವನೂ ಮಾತಾಡಿಕೊಂಡೆವು. ನಾನು ಯೋಚನೆ ಮಾಡಿದಂಗೇ ಅದಕ್ಕೆ ಸಮೀಪದ ಆಲೋಚನೆ ಅವನದ್ದೂ ಆಗಿತ್ತು. ಹೀಗೆ ಯೋಚಿಸುತ್ತಿರುವಾಗ ಆ ವ್ಯಕ್ತಿ ಎದುರಿನ ಸೀಟಿನಿಂದ ಎದ್ದು ಬಂದು ನಾನು ಕುಳಿತ ಹಿಂದಿನ ಸೀಟಲ್ಲಿ ಕುಳಿತ.

ಅದಾಗಲೇ ಆ ಸೀಟಲ್ಲಿ ಒಬ್ಬ ಕುಳಿತಿದ್ದ. ಆ ವ್ಯಕ್ತಿಯ ಅಳು ನಿಂತಿರಲಿಲ್ಲ. ಪಕ್ಕದಲ್ಲಿರುವವ ಆತನನ್ನು ಮಾತಾಡಿಸಲು ಪ್ರಯತ್ನಿಸಿದ. ಒಂದಷ್ಟು ಅತ್ತು ನಂತರ ಮಾತಾಡತೊಡಗಿದೆ. ಆಕೆ ನಮ್ಮ ಅಕ್ಕ. ನಮಗೆ ಅಮ್ಮ ಇಲ್ಲ. ಅಮ್ಮ ಬಹಳ ಹಿಂದೇನೆ ತೀರಿಕೊಂಡಿದ್ದರು. ಆಕೆಯ ಗಂಡ ಸೌದಿಯದಲ್ಲಿ ಕೆಲಸದಲ್ಲಿದ್ದಾರೆ. ಆರೋಗ್ಯ ಸ್ವಲ್ಪ ಸರಿಯಿಲ್ಲದ ಈ ವ್ಯಕ್ತಿಗೆ ಅಕ್ಕನನ್ನು ಕಂಡರೆ ತುಂಬಾ ಇಷ್ಟ. ಆಕೆ ಇವರನ್ನೆಲ್ಲಾ ಅಮ್ಮನಿಗಿಂತ ಹೆಚ್ಚಾಗಿ ಸಾಕಿದ್ದರು. ತಮ್ಮನಿಗಾಗಲೀ ಮನೆಯ ಇತರರಿಗಾಗಲೀ ಯಾವುದೇ ತೊಂದರೆಯಾಗದಂತೆ ನೋಡಿಕೊಂಡಿದ್ದಳು. ಈಗ ಆಕೆ ದುಬೈಗೆ ಹೋಗುತ್ತಿದ್ದಾಳೆ. ಈ ದಿನ ಶಿವಮೊಗ್ಗಕ್ಕೆ ಹೋಗಿ, ಅಲ್ಲಿಂದ ಮೂರನೇ ದಿನ ಮುಂಬೈ ಮೂಲಕ ದುಬೈಗೆ ಹೋಗುವವಳಿದ್ದಳು. ಆದರೆ ಆಕೆ ದುಬೈಗೆ ಹೋದರೆ ನಮ್ಮನ್ನು ನೋಡಿಕೊಳ್ಳುವವರು ಯಾರು ಎಂಬುದು ಆ ವ್ಯಕ್ತಿಯ ಚಿಂತೆ. ದೇವರಂತಹವಳು ನಮ್ಮ ಅಕ್ಕ, ಆಕೆ ಹೋದರೆ ನಾವು ಅನಾಥರಾಗಿ ಬಿಡುತ್ತೇವೆ ಎಂದು ಮತ್ತಷ್ಟು ಜೋರಾಗಿ ಅಳತೊಡಗಿದ.

ಒಂದು ಕ್ಷಣಕ್ಕೆ ನಾನು ಅವಕ್ಕಾದೆ. ಆ ವ್ಯಕ್ತಿ ವಾಸ್ತವವಾಗಿ ಅಳುತ್ತಿದ್ದ ಕಾರಣ ತಿಳಿಯುವ ಮೊದಲೇ ನಾನು ಆಕೆಯ ಬಗ್ಗೆ ಒಂದು 'ಇತಿಹಾಸ' ಬರೆದು ಬಿಟ್ಟಿದ್ದೆ. ದರ್ಪಿಷ್ಟೆ, ಕ್ರೂರಿ ಎಂದೆಲ್ಲಾ ಬಿರುದುಗಳನ್ನು ನೀಡಿದ್ದೆ. ಆಕೆಯ ಮುಖದಲ್ಲಿ ಇತ್ತೋ ಇಲ್ಲವೋ ಆದರೆ ಅದು ದರ್ಪದಿಂದ ಕೂಡಿರುವಂತೆ ಕಂಡುಕೊಂಡಿದ್ದೆ. ಆಕೆ ನಿಜದಲ್ಲಿ ಏನು ಆಗಿದ್ದಳೋ ಅದಕ್ಕಿಂತ ತದ್ವಿರುದ್ಧವಾದ ರೀತಿಯಲ್ಲಿ ಆಕೆಯ ವ್ಯಕ್ತಿತ್ವವನ್ನು ಚಿತ್ರಿಸಿದ್ದೆ. ನಮ್ಮ ನಮ್ಮ ಭಾವನೆಗಳಲ್ಲಿ ನಾವು ಅಂದುಕೊಳ್ಳುವುದಕ್ಕಿಂತ ಆಚೆಗೆ ನಿಜವಾದ ಭಾವನೆಗಳು ಸ್ಥಿತೀಕರಿಸಿರುತ್ತದೆ ಎಂಬ ಬಗ್ಗೆ ಒಳೆಯಲೇ ಇಲ್ಲ. ಅಥವಾ ಆ ತರದ ಯೋಚನೆಗೆ ಹೋಗಲೇ ಇಲ್ಲ ಅನಿಸುತ್ತದೆ. ನಿಜವಾಗಿಯೂ ನಾನು ನನ್ನ ಬಗ್ಗೆ ನಾಚಿಕೆಪಟ್ಟು ಬಹಳ ದಿನಗಳ ಕಾಲ ವ್ಯಥೆಪಟ್ಟಿದ್ದೆ.

ಇವತ್ತಿನ ಸ್ಥಿತಿಯಲ್ಲಿ, ಪ್ರತಿಯೊಂದನ್ನೂ ತಿರುಚಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಕಥೆಕಟ್ಟುವ ಸಂದರ್ಭದಲ್ಲಿ ಈ ಘಟನೆ ನನ್ನನ್ನು ಮತ್ತೆ ಕಾಡತೊಡಗಿತು. ನಾವು ನಮ್ಮ ಮನಸ್ಸಿಗೆ ಬಂದ ಹಾಗೆ ಘಟನೆಗಳನ್ನು ನೋಡುವುದಕ್ಕಿಂತ, ವಿಶ್ಲೇಷಣೆ ಮಾಡುವುದಕ್ಕಿಂತ ಅದರ ಸತ್ಯದ ಹಿನ್ನಲೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗುವುದು ಈ ರೀತಿಯ ಅನ್ಯರನ್ನು ಅಕಾರಣವಾಗಿ ಅಪರಾಧಿ ಮಾಡುವುದುನ್ನು ತಪ್ಪಿಸಲು.

FEAR – A SURPRISING ACUMEN

- Maithily K

The first thing that strikes my mind on hearing the word fear is scare and a perplexed sort of expression. According to me fear is something associated with the anticipation of an outcome that could not be accepted by someone else. The term someone differs concerning the context of situations. It could be my parents at home, teachers at school and sometimes friends and siblings too. As a child, I was a scary-cat or sometimes cowardly too. I was always afraid of being scolded by my mother and sometimes my father too. It was a similar case in the school too but of course, the intensity was less. I was afraid of my Mathematics teacher then. But I had a very friendly relationship with the rest of the teachers. I was not spontaneous in answering during my Mathematics classes. So, I was most prone to be scolded or sometimes even being beaten. To overcome this, I tried to solve the exercises beforehand from my home as a practice. But here too I was rebuked by my parents for the same reason that I do not answer spontaneously. I did not answer because I did not know the answer. I had so many questions but was afraid that I would be once again beaten. Such instances made me feel that being scared by or scared of is the better way to produce a good result. But I failed to realize that my learnings being joyous in other subjects lasted for longer periods when compared to the so-called learnings of Mathematics.

The persistence of such instances in many situations built a strong concept in my mind. I still have a fear of reaching the expectations of others. But this time my fear is a little matured. Fear of fulfilling the expectations of my parents as a daughter, expectations of my younger sister as an elder one, expectations of my professors and lecturers as an ideal student, expectations from my friends, many more expectations here and there.

After joining the Azim Premji Foundation, I got an opportunity to be a part of one of the research studies, **'Fear in School – from teachers' viewpoint.'** It helped me acquire literal knowledge about fear. Fear is an emotion i.e. is exclusively governed by hormonal activities, related chemical messengers. Fear, even though emotion is a form of psychological as well as physiological stress, to address this stress, human physiology has developed certain mechanisms. And that is a release of the hormone adrenaline which stimulates the further cascade. It triggers the

fight or flight mechanism i.e. to fight against or escape the stress. A significant thing to be noticed here is that any type of stress directly affects the learning process. The increased concentration of cortisol (a hormone released during the cascade of stress mechanism) destroys the neurons (cells in the brain). This affects memory which thereby affects learning, as learning is interpreting experiences and expressing them. More precisely thinking process will be interrupted with the destruction of neurons. This is the ultimate reason behind a less productive result with stress when compared to the result produced without stress or in a joyous environment.

This knowledge has to be firmly planted in the understandings of our teachers. Their understandings about fear must be given a chance to be restructured or reframed. As per my experiences during school visits and the research study, teachers have a notion about fear. They state that fear is necessary for a school environment. It reminds us of our responsibility. To my surprise, I learnt that teachers visualize fear as a **positive punishment**. Although, punishment is presented as a negative practice, yet expected to be received in the style of **optimistic perception**. This must be changed as **stress hampers learning**. Teachers must be made to realize that fear is a form of stress, as teachers are the catalysts of the learning process.

A good evidence of this were visible in our children during lockdown and post lockdown. I could learn this through my participation in the study on Loss of Learning in children during COVID-19 lockdown. The study was rolled out for children of grade 2 to 6, who were in grade 1 to 5 in the academic year 2019-20, against competencies of grades 1 to 5 respectively for Kannada and Mathematics. The study hypothesized that there is loss in learning of children as they were away from schools during COVID-19 lockdown. During the study I encountered that the hypothesis is true in most of the children. However, there were a few children who showed an elevated learning level when compared with the baseline assessment (their learning status before lockdown) against certain competencies. To quote an example, a boy of grade 3 was identified to be a moderate performer in the baseline assessment while his current learning level stated as a high performer for the opted subjects across all the grade 2 competencies.

On interacting with the kid and the teacher I found that the boy's family owns a small petty shop, thus he had enough space to interact with the customers. This helped him in enriching his knowledge and understanding the utility of Kannada and Math in daily life. It subsequently was

visible while sharing his responses for each question. Similar was the case with other children too who reflected their improved learnings in some or the other competencies. While, tracking further I encountered that it is their homely practices that assisted them, like, most of our children during school closure have helped their parents in their household or occupations, like rearing cattle, petty shops, craft works, etc. accordingly, those children showed a hike in relevant oral, written and arithmetic competencies.

While analyzing this by myself I could state that it is the freedom offered to the child or the happiness enjoyed by the children in doing something. It is the opportunities availed by children that helps them enrich their competencies. There is no space for fear in this course as they are not afraid of being judged by anyone as they are confident about their expressions in their forte. As a facilitator this acquisition is the most valuable experience I could enjoy.

ಚೌಕಟ್ಟಿನಾಚೆಗಿನ ಸಿನಿಮಾ: ದಿ ಗ್ರೇಟ್ ಇಂಡಿಯನ್ ಕಿಚನ್

– ಚಿಕ್ಕವೀರೇಶ ಎಸ್.ವಿ. ಇಳಕಲ್

ಇಡೀ ಸಿನಿಮಾ ನೋಡಿದರೆ ನಿಮಗೆಲ್ಲೂ ಪಾತ್ರಗಳಿಗೆ ಹೆಸರು ಇರುವುದು ಕಾಣುವುದಿಲ್ಲ. ಯಾಕೆಂದರೆ ಇದು ನಮ್ಮ ನಿಮ್ಮ, ನಮ್ಮದೇ ಕುಟುಂಬದ ಸಿನಿಮಾ. ೧೦೦ ನಿಮಿಷದ ಈ ಚಿತ್ರ ನೋಡುವಾಗ ನಮ್ಮ ಕುಟುಂಬ ಹಾಗು ನಮ್ಮ ಮುಖಗಳೇ ನಮಗೆ ಕಾಣುತ್ತಾ ಹೋಗುತ್ತೆ. ನಿಮ್ಮನ್ನು ಇಲ್ಲಿ ಭಾವೋದ್ವೇಗಗೊಳಿಸಲಿಕ್ಕೆ ದೃಶ್ಯಗಳಿಗೆ ಹಿನ್ನಲೆ ಸಂಗೀತವನ್ನು ಬಳಸುವುದಿಲ್ಲ. ಹೀರೋ ಹೊಡೆದಾಗ ೪–೬ ಜೀಪುಗಳು, ವಿಲೆನ್‌ಗಳು ಮೇಲಕ್ಕೂ ಹಾರುವುದಿಲ್ಲ, ಉದ್ದ ಉದ್ದದ ಪಂಚಿಗ್ ಸಂಭಾಷಣೆ ಹೇಳುವುದಿಲ್ಲ ಯಾಕಂದರೆ ನಮ್ಮ ಸುತ್ತವೇ ನಡೆವ ವಾಸ್ತವದ ಕಥೆ:. ಅಂತಹ ಅಪರೂಪದ ಸಿನಿಮಾ ದಿ ಗ್ರೇಟ್ ಇಂಡಿಯನ್ ಕಿಚನ್.

ಮೂವಿ: ದಿ ಗ್ರೇಟ್ ಇಂಡಿಯನ್ ಕಿಚನ್

ಭಾಷೆ: ಮಲಯಾಳಂ (ಇಂಗ್ಲಿಷ್ subtitle)

ನಿರ್ದೇಶಕರು: ಜಿಯೋ ಬೇಬಿ

ಮುಖ್ಯ ಪಾತ್ರ: ಸೂರಜ್, ನಿಮಿಷ

Platform: Nee stream

ಮೊದಲ ೩–೪ ದೃಶ್ಯಗಳಲ್ಲೇ ಡಾನ್ಸ್ ಟೀಚರ್ ಒಬ್ಬರು ಖುಷಿಯಿಂದ ಅಪರಿಚಿತ ಸಂಪ್ರದಾಯಸ್ತ ಕುಟುಂಬದ ಸೊಸೆಯಾಗಿ ಹೊಸ ಜೀವನಕ್ಕೆ ಕಾಲಿಡುತ್ತಾಳೆ. ಹೊಸ ಮನೆಯಲ್ಲಿ ಹೆಂಡತಿಯಾಗಿ, ಸೊಸೆಯಾಗಿ ದಿನಚರಿ ಆರಂಭಗೊಳ್ಳುತ್ತದೆ. ಎಲ್ಲಾ ಭಾರತೀಯ ಹೆಣ್ಣುಮಕ್ಕಳಂತೆ ಬೆಳಿಗ್ಗೆ ನಸುಕಿನಲ್ಲೇ ಎದ್ದು ಕಸ ಹೊಡೆದು, ನೆಲ ಸಾರಿಸಿ ಬೆಳೆಗೆದ್ದು whatsapp ಮೆಸೇಜ್ ಸ್ಕ್ರಾಲ್‌ಮಾಡಿ, ನ್ಯೂಸ್ ಪೇಪರ್ ಓದುತ್ತಾ ಕುಳಿತ ಮಾವನಿಗೂ ಬ್ರಷ್ ಪೇಸ್ಟ್ ಕೊಟ್ಟು ನಂತರ ಮಾವನಿಗೂ ಹಾಗೂ ವ್ಯಾಯಾಮ ಮಾಡುತ್ತಾ ಕುಳಿತ ಗಂಡನಿಗೂ ಬಿಸಿ ಕಾಫಿ ಕೊಟ್ಟು, ತರಕಾರಿ ತೊಳೆದು, ಕತ್ತರಿಸಿ, ಮಾವನಿಗೆ ಒಂದು ತರಹದ, ಗಂಡನಿಗೆ ಇನ್ನೊಂದು ತರಹದ ಅಡುಗೆ ಮಾಡಿ, ಅವರಿಗೆ ಬಡಿಸಿ ನಂತರ ಅವರು ಉಳಿಸಿ ಹೋದಾ ಟೇಬಲ್ ಮೇಲೆ ಬಿಸಾಡಿದ ಎಂಜಲನ್ನು ಬಳಿದು, ಗಂಡನಿಗೆ ಕೆಲಸಕ್ಕೆ ಹೋಗಲು ಬಾಕ್ಸ್ ರೆಡಿ ಮಾಡಿ ಕೈಯಲ್ಲಿ ಇಟ್ಟು, ಮಾವನಿಗೆ ಹೊರಗಡೆ ಹೋಗಲು ಚಪ್ಪಲಿ ರೆಡಿ ಮಾಡಿ ನಂತರ ಅಡುಗೆ ಮಾಡಿದ ಪಾತ್ರೆಗಳನ್ನು ತೊಳೆದು ಸಿಂಕ್ ಅನ್ನು ಕ್ಲೀನ್ ಮಾಡಿ, ಗ್ಯಾಸ್ ಕ್ಲೀನ್ ಮಾಡಿ ಮತ್ತೆ ಮಧ್ಯಾಹ್ನದ ಊಟಕ್ಕೆ ತಯಾರಿ ಹೀಗೆ ಅವಳ ದಿನಚರಿ ಮುಂದುವರೆಯುತ್ತದೆ. ಇದರಲ್ಲೇನು ಸಷಲ್ ಅನ್ಕೊಂಡ್ರಾ ? ಅದೇ, ಮೇಲೆ ಹೇಳಿದ ಹಾಗೆ ಇದು ವಾಸ್ತವದ ಕತೆ. ಇಡೀ ದೇಶದ ಮಹಿಳೆಯರ ದಿನಚರಿಯ ಹೊರತುಪಡಿಸಿ ಏನನ್ನೂ ತೋರಿಸದಿದ್ದರೂ, ನಿಮ್ಮ ಗಮನವನ್ನು ಸೆಳೆಯುತ್ತದೆ. ಯಾಕಂದರೆ ನಿಮ್ಮ ಮನೆಯಲ್ಲೇ ಇರುವ, ನೀವು ನೋಡಿರದ, ಸೋರುವ ಸಿಂಕ್‌ಗಳು, ಉಳಿದ ಆಹಾರದ ಎಂಜಲು ತಟ್ಟೆಗಳು, ಆಹಾರ ದಿನದ ಬ್ಲಾಕ್ ಆಗಿ ತುಂಬಿದ ಆಹಾರದ ಸಿಂಕ್‌ಗಳು, ವಾಸನೆ ಸೂಸುವ ಡಸ್ಟ್ ಬಿನ್ಗಳು, ಒಲೆ ಮತ್ತು ಅದರ ಬಿಸಿ , ಕಿಚನ್ ಅಲ್ಲೇ ತಮ್ಮ ಜೀವನ ಸವೆಸುವ ಹೆಣ್ಣು ಮಕ್ಕಳ ಹಿಂಸೆ, ತೊಂದರೆ ಮತ್ತು ತಾಪತ್ರಯ, ಮುಖಚರ್ಯೆ, ಅವಳ ಸಮಾಧಿಯಾಗುತ್ತಿರುವ ಆಸೆ ಆಸಕ್ತಿ, ಗೊಂದಲ

ಮುಂತಾದವುಗಳನ್ನು ನಿರ್ದೇಶಕ ಜಿಯೋ ಬೇಬಿ ಅವರು ಬೇರೆ ಬೇರೆ ದೃಷ್ಟಿಕೋನಗಳಲ್ಲಿ, ಕ್ಯಾಮೆರಾದ ವಿವಿಧ ಕೋನಗಳಲ್ಲಿ ತೋರಿಸುವ ರೀತಿ ವಿಶೇಷ. ಕಿಚನ್ ರೂಮ್ ಅನ್ನು ಹೊಸರೀತಿಯಲ್ಲಿ ಹಾಗೂ ಪ್ರತಿ ಇಂಚನ್ನು ತೋರಿಸುವ ಪ್ರಯತ್ನ ಮಾಡುತ್ತಾ ಅದರಲ್ಲಿ ಯಶಸ್ವಿ ಆಗುತ್ತಾರೆ. ಯಾವುದೇ ಮಹಿಳೆ ಯಾವುದೊ ಹಿನ್ನಲೆ ಮಹಿಳೆಯಾಗಿರಲಿ, ಯಾವುದಾದರು ಒಂದಲ್ಲದೆ ಒಂದು ದೃಶ್ಯ ಅವರ ಜೀವನಕ್ಕೆ ಸಂಭಂದಿಸಿದ್ದಾಗಿರುತ್ತದೆ. ಅದೆಲ್ಲವನ್ನು ತೋರಿಸುವ ರೀತಿ ಇಲ್ಲಿ ಮಹಿಳೆಯರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲಿಕ್ಕೆ ಅಲ್ಲ; ನಮ್ಮ ಮನ ಕಲಕಲಿಕ್ಕೆ, ಪ್ರಶ್ನೆ ಹುಟ್ಟಿಸಲಿಕ್ಕೆ, ಪಿತೃ ಪ್ರಭುತ್ವದ ಬುಡವನ್ನು ಅಲ್ಲಾಡಿಸಲಿಕ್ಕೆ ಅನಿಸುತ್ತದೆ. ಇಲ್ಲೆಲ್ಲೂ ನಿರ್ದೇಶಕರು ಭೋಧನೆ ಮಾಡಿಕೊಡದೆ, ವಾಸ್ತವ ಚಿತ್ರಗಳನ್ನು ತೋರಿಸುತ್ತಲೇ ಯಾವುದೇ ಹಿನ್ನಲೆ ಸಂಗೀತವಿಲ್ಲದೆ ಭಾವನೆ ವ್ಯಕ್ತಪಡಿಸಲು ದೇಹ ಭಾಷೆ ಮಾತ್ರ ಬಳಸುತ್ತಾರೆ.

ಬೇರೆ ಚಿತ್ರಗಳು ತೋರಿಸುವಂತೆ ಹೆಣ್ಣನ್ನು ಕರುಣಾಮಯಿ, ತ್ಯಾಗಮಯಿ, ಎಲ್ಲಾ ಕೆಲಸವನ್ನು ನಿರ್ವಹಿಸುವ ಸಹನಾಮಯಿ ಅಂತ ತೋರಿಸದೇ ಎಲ್ಲಾ ಕೆಲಸಗಳು ಅವಳ ಮೇಲೆ ಹೇರಲ್ಪಡುತ್ತಿದೆ ಎಂದು ತೋರಿಸುತ್ತೆ. ಇಲ್ಲಿ ಗಂಡು ಕೂಡ ಹಿಂಸೆ ಮಾಡುವುದಿಲ್ಲ. ಕೋಪ ಮಾಡಿಕೊಳ್ಳುವುದಿಲ್ಲ ಆದರೆ ಮೃದುವಾಗಿ ಎಲ್ಲಾ ಹೇರುತ್ತಾನೆ ಉದಾಹರಣೆಯಾಗಿ ಹೇಳುವುದಾದರೆ, ಡಾನ್ಸ್ ಟೀಚರ್ ಆಗಿ ಜಾಬ್‌ಗೆ ಅಪ್ಲೈ ಮಾಡುವುದನ್ನು ನಯವಾಗಿ ನಿರಾಕರಿಸುತ್ತಾರೆ. ಕಥಾ ನಾಯಕ ಮನೆಯೊಳಗೆ ಮತ್ತು ಮನೆ ಹೊರಗೆ ತನ್ನ ಟೇಬಲ್ manners ವ್ಯತ್ಯಾಸದ ಬಗ್ಗೆ ಪ್ರಶ್ನಿಸಿದಾಗ ನಿಯಂತ್ರಿತ ಕೋಪ ಪ್ರದರ್ಶಿಸಿ ಕ್ಷಮೆ ಕೇಳಿಸಿಕೊಳ್ಳುತ್ತಾನೆ.

ಈ ಸಿನಿಮಾ ಬರಿ ಪಿತೃ ಪ್ರಭುತ್ವದ ಬಗ್ಗೆ ಮಾತಾಡದೆ ಇದರ ಜೊತೆ ರಾಜಕೀಯ, ದರ್ಮ, ಮುಟ್ಟು ಮತ್ತು ಅಶುದ್ದತೆ, ಸೆಕ್ಸ್ ಈ ಕುರಿತ ಮನುಸ್ಸು ಮಟ್ಟುವ ದೃಶ್ಯಗಳನ್ನು ಪೋಣಿಸಿದೆ. ಇದರ ಜೊತೆ ಕ್ಲೈಮಾಕ್ಸ್ ದೃಶ್ಯದ ಪ್ರತಿ ಫ್ರೇಮ್ ನಲ್ಲೂ ನೂರು ಅರ್ಥ ಕೊಡುತ್ತದೆ. ಈ ಎಲ್ಲಾ ದೃಶ್ಯಗಳು ನಮ್ಮ ಒಳಗಿರುವ ಲಿಂಗಬೇಧ ಮತ್ತು ನೀರೀಕ್ಷೆಗಳನ್ನು ಮರುಯ-ೋಚನೆ ಮಾಡುವಂತೆ ಮಾಡುತ್ತದೆ. ಮನೆ ಕೆಲಸಗಳನ್ನು ಯಾರು ಮಾಡಬೇಕು? ನಾವೇಕೆ ಮನೆಕೆಲಸಗಳಿಗೆ ಮಹಿಳೆಯ ಜೊತೆ ನಿಲ್ಲಬಾರದು? ಮೂಲಭೂತ ಎಲ್ಲಾ ಕೌಶಲಗಳನ್ನು, ಲಿಂಗವನ್ನು ಮೀರಿ ಯಾಕೆ ಕಲಿಯಬಾರದು? ಅಡುಗೆ ಹಿಂದಿನ ಶ್ರಮಗಳೇನು? ನಾವು ಇಂತಹುದೇ ಅಡುಗೆ ಬೇಕು ಎಂದು ಡಿಮ್ಯಾಂಡ್ ಮಾಡುವುದು ಸರಿಯಾ? ಇಂತಹ ಎಲ್ಲಾ ಪ್ರಶ್ನೆಗಳನ್ನು ಈ ಪುಟ್ಟ ಚಿತ್ರ ನಮ್ಮಲ್ಲಿ ಹುಟ್ಟು ಹಾಕುತ್ತದೆ. ಇದು ಪಿತೃ ಪ್ರಭುತ್ವದ ಬಗ್ಗೆ ಬಂದ ತುಂಬಾ ಉತ್ತಮ ಚಿತ್ರ ಮಾತ್ರ ಹೇಳಬಲ್ಲೆ. ಇಂತಹ ಪ್ರಯೋಗಗಳನ್ನು ನಮ್ಮ ಸಮಾಜದ ಮದ್ಯೆ ಜೀವಂತವಾಗಿಟ್ಟುಕೊಳ್ಳಬೇಕು. ಸಾವಿರ ಕೂಗಿಗೆ ಒಂದು ಕಣ್ಣು ತೆರೆದರು ಸಾಕಲ್ಲವೇ?

Going Digital

- Aswini Ravula

Digital learning has become the catch phrase in the Covid era. As ancillaries, cyber security, gender gap in digital access, lack of access…etc came into light. Online education is not just about standing in front of the web cam and reading out the lesson or instructions and receiving them at the other end of the screen. The above-mentioned aspects are very much part of it, in fact the important aspects. It is the right time to channelize our focus on digital literacy.

Cyber security is one of the major concerns of parents in the case of online teaching. They are choosing to send their child to the school amid pandemic than access internet unattended. When it comes to girls this fear is even more intense. The only solution that the parents could think of is to compromise on enormous exposure for the sake of their child's safety. One of the aspects of this fear is cyber bullying. The fear that their child/children get bullied by someone else digitally and the other aspect is they fall prey to unproductive and addictive things like games, unwanted videos, social media and get diverted from their learning process. Though there are many other aspects of cyber security, these are relevant in the present scenario and in case of children.

Gender gap in digital access is the most concerning thing to know. Only 21% females have access to mobile internet. Girls are the ones that are most affected due to online learning. There is question of chosen access. It is an open truth that society chooses its sons' education over its daughters'. So, where there is only one device available the boy gets it. The second aspect is taboo attached to girls using the mobile phone or accessing internet. It is a strongly etched in the minds of many people that a girl gets wayward or becomes victim of cyber crimes and it would become a mark on her. The social norms are such that people strongly believe a boy gets spoilt if he doesn't go out and see the world and a girl gets spoilt if she steps out and sees the world. The same saying is getting applied to use of internet as well.

Access or availability of digital infrastructure is a luxury for many students across the globe, not just India. We have been seeing the online education being the future of education and many educational institutions campaigning the availability of Digi learning as an advantage for their students. The paradox is the same schools or institutions that tried to gain profits the mantra of

digital learning couldn't succeed in providing the same effectively. This is a point for us to think and find answers for many questions. Are we ready to go digital? What is needed to make it effective? How to make sure that this doesn't emerge as another point of social division and aspect of social status? Is Digi learning really the must? Is use of mobile or internet the only measure of a student's good future? Are the digital tools easing out the things or complicating them?

Be it cyber security or social taboos or access challenges we usually try to find solution from the victims end and try to tell them how to defend themselves against the odds, threats and challenges. This is only the half work. The major work to be done is on the end of the person that is doing the harm. Parents have an interesting logic. Our child won't do anything wrong it is always some other child or someone from some other family. If all the parents are of this stand then where does these cyber criminals come from? They do exist on the same planet as we are, same society, same street and could be in the same house. It is the responsibility of the parents to identify these trends in their children and find the cure at the earliest. If a daughter of some family is becoming prey for cyber crime, it could be that a son from your family is becoming a predator. Identify the predators not the prey. Take action at the inflictors end not on the victim's end should be taught to parents as part of digital literacy. So is the case with access. We tried giving devices to those who don't have it, but we couldn't tell the schools to not to rush on making education a digital good. The time is not ripe to go after new trends, it is time for us to introspect, correct and strengthen the existing system and then move ahead to catch up the new trend or new tool. A question arises 'should we deprive our children of new trends, digital is the future, are you proposing that we go back instead of progressing ahead?' The answer is when we aim for something we are not properly equipped for; we end up creating few some social layers. The proposal is not to go back, but to go ahead constructively and with proper awareness and the right pace with right knowledge not simply with data and apps.

Before going digital on education, education of the digital is needed. If we don't know how to use a tool in the right way, we end up becoming victims to it rather than mastering it and taking advantage of it. The aspects of how to use, why to use, when to use and to what extent should be taught before starting to use any tool. The findings on the online learning during Covid show the need for digital literacy and digital etiquette than digital access.

ಅಯ್ಯಾ.... ಗಾಂಧಿ!

– ಶಿವಕುಮಾರ ಸಿ ಎಸ್

ಅಯ್ಯಾ ಗಾಂಧಿ ನೀನೊಬ್ಬ

ಇಲ್ಲಿ ಹುಟ್ಟಬೇಕಿತ್ತು

ಹುಟ್ಟಿ,

ಸಾಯಬೇಕಿತ್ತು!

ಎಲ್ಲೆಲ್ಲೂ ತಾಕುವ ನಿನ್ನನ್ನೇ ನೂಕುವ

ಕೊನೆಯಿರದ ಗೇಲಿಗೆ ಎದೆಯೊಡ್ಡಿ ಗುಂಡಿಗೆ

ನೋಯಲು ಬೇಯಲು ನೀನಿಲ್ಲಿ ಹುಟ್ಟಬೇಕಿತ್ತು ಮತ್ತೆ,

ಶಾಂತಿ ಮಂತ್ರವ ಜಪಿಸಿದ

ನಿನ್ನರಿಯಲಾಗದ ನಮ್ಮಜ್ಞಾನಕೆ

ಸಿಲುಕಿ ಸಾಯಬೇಕಿತ್ತು!

ಅಯ್ಯಾ ಗಾಂಧಿ

ಟಾಕೀಸಿನ ಸೀಟಿನ ಹಿಂದಿನ ಮುಂದಿನ

ಬಾಲ್ಕನಿಯ ಬೆನ್ನಿನ ಕ್ಲಾಸುಗಳ ಹಂಗಿಗೆ

ಅಗ್ಗದ ರೇಟಿಗೆ ಹೆಸರಾಗಲು ಸೀಟಿಗೆ

ಜವ್ವನದ ಹೈಕಳ ಗಮ್ಮತ್ತಿನ ಸಿಳ್ಳೆಗೆ

ಗೇಲಿಯಾಗಲು

ನೀನಿಲ್ಲಿ ಹುಟ್ಟಲೇ ಬೇಕಿತ್ತು ಮತ್ತೆ,

ಎಷ್ಟೋ ಬೆಳೆದ ಲಕ್ಷ ಪ್ರತಿಮೆಗಳ ಕೆಳಗೆ

ಇಸ್ಪೀಟಿನಡ್ಡ ಗುಡ್ಡೆ ಸಿಗ(ರೇಟು)ಗಳ ಬೂದಿಯೋ

ಪುಕಾರುಗಳ ಬೆಂಕಿಯೋ ಆಗಿ ಕರಗಲು ಸಾಯಲೂ

ಬೇಕಿತ್ತು.

ಹಿಡಿದ ಪೊರಕೆಯ ಚಾಚಿ

ನಮ್ಮೆದೆಯ ಕಸವ ಬಾಚಿ

ನಿನ್ನ ಕಾರುಣ್ಯ ದೀವಟಿಕೆಯ

ತೆರದು ಜಗದಗಲ ದಿವ್ಯವೇ ಆಗಲು

ನೀನಿಲ್ಲಿ ಹುಟ್ಟುಬೇಕಿತ್ತು

ಮತ್ತೆ,

ಚರಕ ಚಿತ್ತದಿ ಹರಿಯ ಚರಣಕೆರಗಿ

ನಮ್ಮಾಹುತಿಗೊರಗಿ

ಸತ್ತಂತಿಹ ನಮ್ಮ ನಡುವೆ

ನಿತ್ಯವೂ ಬದುಕಿರಲು

ನೀನಿಲ್ಲಿ ಹುಟ್ಟಬೇಕಿತ್ತು

ಮತ್ತೆ ಸಾಯಲೂ ಬೇಕಿತ್ತು!

Economics of the schooling

- Ravindra Jain

The liberalization of Indian economy in 1990 has shown the way for economic prosperities in India, and our private sector companies have grown manifold to become the key driver of the economy. After liberalization, due to stern competitions, few old but legacy companies disappeared, and many new companies brought a fresh air to the Indian Economy. In a market based-free economy, the innovation, ability to take risks, and entrepreneurial culture becomes the bedrock for the survival of the companies.

I was born in the time, in which, except few smaller European countries, most socialist countries either became dictatorial or weathered away to civil war. Over the century, the free market attracted many to take risk, and make money. In addition, India was also growing above the typical 'Hindu rate of growth' after liberalization, I also keep supporting a case for benevolent-just- well-regulated liberalization in the country.

But two sectors in which I would want a larger-substantial contribution of government, i.e. education and health. Since I'm working in the education sector, I would be in a better position to explain 'why large-scale participation of private players in education' is simply futile but also a burdensome for parents.

I have been more convinced than ever that 'giving a quality education is the super expensive business in the world'. Quality has a bigger cost in education. Let's take a hypothetical example here. Assume a government primary school having a 4 teacher (with average salary of 40,000/ month) and 60 students. Here, if we do basic math, the salary cost that the government bears on behalf of every student in a school of 60 students is 32000 per annum. I haven't added the cost of quality mid-day meal, the teacher training, the recurring infrastructure expenditure, books and bags, scholarships, administrative cost that the government provides on a yearly basis. If we add all these areas of expenses for a school of 60 children, everyone would agree that education is a super expensive sector that the government is committed to give it either in free or with a bare minimum fee.

The above mathematical calculations prove that providing a quality education is obviously possible either by the government which uses the taxpayers' money or by the institutions, Foundations, Trusts which are philanthropic in nature. If a private player runs a school with collecting affordable fees, then, I would believe that the quality is seriously compromised. Because, one cannot appoint or retain a quality-trained teacher by rewarding handsomely.

All of us know that the government and few public-spirited organizations can only afford to give a quality education. But, due to some structural-inherent problems in the government schooling system (such as single teacher schools, and lack good teacher education infrastructure etc.), we are not able to advocate in a way we wanted to on government schooling. But if the recommendation of National Policy of Education,2020 is implemented in letter and spirit, I have no doubt that parents would take their children to enroll in government schools.

दृड़ता – एक लगन

- डॉ. बिरादार शिवाजी

श्याम का समय था, करीब 5-30 बच चुके थे सूरज ढलने ही वाला था। सब लोग अपना-अपना काम निपटाकर घर निकले। वैसे मैं और मेरे साथी गाड़ी पर घर वापस आ रहे थे। इसी बीच मेरी नज़र रस्ते के बाजू में बसी झोपड़ी पर गयी। तब मैंने थोड़ा और गौर करके देखा तो रस्ते के किनारे पे एक बच्चा बैठा था। जो कि अपने हाथ में कुछ वस्तु लेकर बड़े ही शांत ढंग से बैठा था। जिसे देख मैंने अपनी गाड़ी रुका दी और बच्चे के करीब जाने लगे करीब जाने के बाद बच्चे को देखा तो पता चला कि वह पढ़ाई कर रहा है। मैं आवक रह गया! मैंने थोड़े देर तक उसे देखते रहा और कुछ पल के बाद उसके पास गया और आवाज़ दी ये बेटा...पहली आवाज़ में वह सुना नहीं फिर मैंने उसके कंधे पर हाथ रखकर पूछा बेटा क्या कर रहे हो? तब जाकर वह बोला सर मैं पढ़ रहा हूँ।

तब मैं समझ गया कि यह कितनी लगन से पढ़ रहा है, इसपर कोई आवाज़ या किसी शोर-शराबे का फर्क नहीं पढ़ रहा था।

फिर मैं थोड़ी देर रुक, उससे बातचीत शुरू की। (यह पूरी बाते कन्नड भाषा में चली)

आप कौनसी कक्षा में पढ़ते हो ?

सर, मैं 3 री कक्षा में पढ़ता हूँ।

फिर मैंने पूछा बेटा आपको ये आवाज डिस्टर्ब नहीं करती क्या?

तब उसका जवाब था कि नहीं।

(तब मैं समझ गया कि उसकी लगन और पढ़ने के प्रति जो जुनून है वह दिख रहा था।)

फिर मैंने उसे कहाँ कि अप कौनसे स्कूल जाते हो ?

उसने कहा कि, सरकारी पाठशाला जो उनके बस्ती से थोड़े से दूर पर थी।

थोड़ी देर के बाद उसके माता-पिता आयें और हम अजनबी को देखकर पूछने लगे कि साब आप टीचर है न? कैसा है मेरा बेटा कुछ पढ़ लिख पाता है न?

तब मैंने कहाँ हाँ, बहुत होशियार है आपका बेटा। देखों न अब स्कूल भी शुरुआत नहीं हुआ है ! पर यह अपने-आप पढ़ रहा है किसी कि परवा न कर, आस-पास शोर है। मगर ये साब को भूलकर यह पढ़ रहा है ये आगे जाकर बहूत अच्छा इंसान बनेगा। माता का उत्तर था, पाता नहीं सर क्या बनेगा पर कुछ पढ़-लिखेगा तो बहुत अच्छा होगा। हम वडार समाज के लोगों का न कोई गाँव हैं, न घर... न ठिकाना। जहां काम वहाँ हमारा घर। पर अब हम इसे अच्छा सा पढ़ाएंगे। मैंने उन कुछ सलाह-मशवरा कर पढ़ाई के महत्व को बताते हुए आगे प्रस्थान किया।

मैं सोचने लगा कि अगर कोई अपने तन-मन-धन से कुछ करना चाहता है तो वो उसे पूरा कर के ही रहता है। चाहे वो किसी भी क्षेत्र में क्यों न हो। न उसे कोई दीवार, भाषा या कोई शोर-शराबा रोक नहीं सकतें।

उस बच्चे का लगन यह उसके पढ़ने के प्रति इच्छा को दर्शाता है। पर उसकी यह लगन मेरे मन पर कई सारे प्रश्नो को छोड़ गयी। जैसे मैंने अध्यापकों के साथ चर्चा करते वक्त कई सारे प्रश्नो से पिछले कई अनुभवों पाएँ थे, जिनमें बहुत सारे प्रश्न समस्याओं पर ही थें। जो इस बच्चे की लगन ने पलभर में तोड़ दिये। अगर हम सच्चे मन से कोई भी काम करने की कोशिश करेंगे तो एक दिन हम जरूर सफल बनेंगे। चाहे वह सरकारी स्कूली शिक्षा के साथ का कार्य का जिम्मा हो या और कोई क्षेत्र हो। हमारा प्रयत्न और हमारी लगन हमें जरूर सफल बनाएँगे। बस मन में सच्चा विश्वास और लगन हो बस...

ENK: A New Ray of Hope

- Srinivas Kulkarni

We all know that English teaching & learning in govt schools needs lot of improvement in terms of content/pedagogy & perspective about teaching English language in teachers. Teacher English proficiency is also the need of the hour in most of the schools. In this context, ENK (English Nali Kali for 1st 2nd and 3rd standards in govt schools of Karnataka has emerged as a new ray of hope in teaching and learning of English language for both teachers as well as learners as a second language. ENK works as a resource material for teachers also to gain basic proficiency in English speaking with children and colleagues. It is certainly useful curriculum for children as its content and pedagogy is based on the principles of acquiring a second language as it is focusing of contextualized simple rhymes/Total physical response instructions, language games, conversation sight words & storytelling etc. Themes adopted in ENK are real life connected to children and contextualized as well. Teachers cards are well written with detailed step by step instructions for teachers to implement the process in the classroom.

During my school visits of last 3 & half years and teachers' engagements, teachers were expressing the need of Nali kali cards for English language. This was a need for many teachers from many years as cards were designed for First language kannada /Maths & EVS only and not for English language. Nali Kali Children had grade wise English textbooks which needed much improvements in various aspects. I had the opportunity of attending the first district level ENK workshop of Raichur district in Raichur DIET Campus in the beginning of 2020. Interesting fact is that most of the ENK content and pedagogy related aspects are discussed in detail in our English handbook written for foundation members to work with English teachers like Rhymes/Story Telling/TPR/Sight words etc.

ENK beautifully works on the fact that listening & speaking exposure is foundational to move towards reading and writing of English language as English language is not widely spoken in the children and teachers' surroundings we work with.

As a resource person in English language it is extremely important for me to understand this ENK Kit by studying at individual level/attending ENK workshops organized by the department in our block/discussing with Dept RPs etc. and slowly taking part in facilitating small sessions during

these dept organized workshops to support new Resource persons from the dept. This is also a very good opportunity to meet many teachers in one place, observe their interest to understand ENK and develop English language which in turn helps us to work with such teachers continuously by making appropriate cohorts. This is also good place to give orientation about APF work & support in new blocks we are working and build good rapport with them in the future.

I have attended 3 ENK workshops so far in my block. This has helped me to understand the ENK kit to good extent and identify around 30 teachers who completed this workshop with whom I can work continuously from now on under ENK. I have started teacher engagements in this direction by creating a WhatsApp group of these identified ENK teachers. I conducted one webinar recently about 'ENK Rhymes teaching' as a refresher for those ENK participated teachers. I also gave a task for teachers at the end of my session to complete and share with me in whats app by working with children in teaching the ENK Rhymes. Many teachers voluntarily took this task and shared the video of the ENK Rhyme activity conducted with their children in school. They were asked to follow the process as mentioned in the ENK Rhyme card. This can be seen as a teacher tracking aspect post our engagement with teachers.

To conclude this was much needed module for socially and economically disadvantaged govt schools' children to acquire the empowering language in a scientific approach.

ಪ್ರಾಥಮಿಕ ಶಾಲಾ ಹಂತದ ವಿಜ್ಞಾನ ತರಗತಿಗಳಲ್ಲಿ ಪರಿಕಲ್ಪನೆಗಳ ಅರ್ಥಪೂರ್ಣ ಕಲಿಕೆಯಲ್ಲಿ, ದೈನಂದಿನ ಜೀವನದ ಸಂದರ್ಭಗಳ, ಅನ್ವಯಿಸುವಿಕೆಯ ಪಾತ್ರ

– ಶೋಭಾ ಕೆ ಎಸ್

ಗಂಗಾವತಿ ಬ್ಲಾಕ್‌ನ ಸುಮಾರು ೪೫೦ಕ್ಕೂ ಹೆಚ್ಚು ವಿಜ್ಞಾನ ಶಿಕ್ಷಕರನ್ನು ಬ್ಲಾಕ್‌ನ ೫ ವಲಯಗಳ ಸಮಾಲೋಚನೆ ಸಭೆಗಳಲ್ಲಿ ವಿಜ್ಞಾನದ ಪರಿಕಲ್ಪನೆಗಳ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಡುತ್ತಾ ಪರಿಚಯಿಸಿಕೊಳ್ಳುವುದಕ್ಕೆ ಸಾಧ್ಯವಾಗಿದ್ದು ಒಂದು ಖುಷಿಯ ಸಂಗತಿ. ಪ್ರತಿ ಸೆಷನ್ಸಗಳ ನಂತರ ತರಗತಿಗಳಿಗೆ, ಈ ಪರಿಕಲ್ಪನೆಗಳನ್ನು ತಗೆದುಕೊಂಡು ಹೋಗುವ ಪ್ರಯತ್ನಗಳಾಗಬೇಕು ಎಂದಾಗಲೆಲ್ಲ, ಶಿಕ್ಷಕರಿಂದ ಬರುತ್ತಿದ್ದ ಸಿದ್ಧ ಉತ್ತರ ಪ್ರಯೋಗಾತ್ಮಕ ತರಗತಿಗೆ ಬೇಕಾದ ವ್ಯವಸ್ಥೆಗಳು ಸಮರ್ಪಕವಾಗಿ ಇಲ್ಲವಾದ್ದರಿಂದ ವಿಜ್ಞಾನದ ಪರಿಕಲ್ಪನೆಗಳನ್ನು ಸರಳವಾಗಿ ಕಟ್ಟಿಕೊಳ್ಳುವುದಕ್ಕೆ ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ ಎನ್ನುವುದು.ಮುಂದಿನ ಬಾರಿಯ ಸುಗಮಗಾರಿಕೆಗೆ ಮೇಲಿನ ವಿಷಯಗಳನ್ನೇ ಆಧರಿಸಿದ ಸೆಷನ್ ಪ್ಲಾನ್ ಮಾಡಿಕೊಂಡು, ಆಮ್ಲ ಮತ್ತು ಪ್ರತ್ಯಾಮ್ಲಗಳು ಎಂಬ ವಿಷಯ ವಸ್ತುವನ್ನು ಆರಿಸಿಕೊಂಡೆ.

ತರಗತಿ ಕೊಣೆಯಲ್ಲಿ ಈ ವಿಷಯವನ್ನು ತಗೆದುಕೊಂಡು ಹೋಗುವ ಬೇರೆ ಬೇರೆ ಬೋಧನಾ ವಿಧಾನಗಳೇನು? ಈ ನಿಟ್ಟಿನಲ್ಲಿ ತರಗತಿ ಕೋಣೆಯಲ್ಲಿ ಅವರು ಮಾಡಿದ ಪ್ರಯತ್ನಗಳ ಬಗ್ಗೆ ಚರ್ಚಿಸಿದಾಗ ಪೂರಕವಾದ ಆಸಿಡ್ (ಆಮ್ಲ) ಮತ್ತು ಬೇಸ್ (ಪ್ರತ್ಯಾಮ್ಲಗಳು) ಹಾಗು ಸೂಚಕಗಳು ಇಲ್ಲದ ಕಾರಣ ಕೇವಲ ಥಿಯರಿಯನ್ನೇ ಹೇಳಿದ ಶಿಕ್ಷಕರ ಉದಾಹರಣೆಗಳೆ ಹೆಚ್ಚಿದ್ದವು.

ಆಮ್ಲ ಮತ್ತು ಪ್ರತ್ಯಾಮ್ಲಗಳು ಪರಿಕಲ್ಪನೆಯನ್ನು ಮಕ್ಕಳ ದಿನನಿತ್ಯದ ಜೀವನಕ್ಕೆ ಅನ್ವಯಿಸುವ ಹಾಗೆ ಅರ್ಥ ಮಾಡಿಸೋದು ಹೇಗೆ? ಎಂದು ಶಿಕ್ಷಕರನ್ನು ಕೇಳುತ್ತಾ, ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ತಿಳಿದುಕೊಳ್ಳುವುದರಿಂದ ತಮಗೇನು ಉಪಯೋಗ? ಎಂದು ಯಾರಾದರೂ ಮಕ್ಕಳು ತಮ್ಮನ್ನು ಪ್ರಶ್ನಿಸಿದ್ದಾರೆಯೇ ಎಂದಾಗ, ಬಹುತೇಕರ ಮೌನ ಇಲ್ಲಾ ಎನ್ನುವ ಉತ್ತರವನ್ನು ಕೊಟ್ಟಂತಾಗಿತ್ತು.

೧೦–೧೨ ಶಿಕ್ಷಕರ ೪ ಗುಂಪುಗಳನ್ನಾಗಿ ಮಾಡಿ, ೭೦ಕ್ಕೂ ಹೆಚ್ಚು ಪದಾರ್ಥಗಳನ್ನು ಈ ತಂಡಗಳಿಗೆ ವಿಭಾಗಿಸಿ ಹಂಚಲಾಯತು.

ಪ್ರತಿ ತಂಡವು ತಮಗೆ ನೀಡಿದ ಪದಾರ್ಥಗಳ pH ಮೌಲ್ಯವನ್ನು, ಸೂಚಕಗಳ ಮೂಲಕ ಪತ್ತೆ ಹಚ್ಚಬೇಕು ಹಾಗು ದಿನ ನಿತ್ಯದ ಜೀವನಕ್ಕೆ ಇದರ ಅನ್ವಯ ಹೇಗೆ ಅನ್ನುವುದನ್ನ, ಎಲ್ಲರೊಂದಿಗೆ ಹಂಚಿಕೊಳ್ಳಲು ಹೇಳಲಾಯಿತು.

ಇಲ್ಲಿ ಪ್ರಮುಖವಾಗಿ ನಾಲ್ಕು ಗುಂಪುಗಳಿಗೆ ನೀಡಿದ ವಸ್ತುಗಳು ಹೀಗಿದ್ದವು: ತಂಡ ಒಂದಕ್ಕೆ ಹಣ್ಣು, ತರಕಾರಿಗಳು ಮತ್ತು ಅಡುಗೆಯಲ್ಲಿ ಬಳಸುವ ಸಾಂಬಾರ್ ಪದಾರ್ಥಗಳು, ಎರಡನೆಯ ಗುಂಪಿಗೆ ತಂಪು ಪಾನೀಯಗಳು, ಬೇಕರಿ ಪದಾರ್ಥಗಳು, ಹಾಗು ಸಕ್ಕರೆ, ಕಾಫಿ ಮತ್ತು ಟೀ ಪುಡಿ ಮತ್ತು ಹಾಲು ಮೂರನೆಯ ತಂಡಕ್ಕೆ, ಶುಚಿತ್ವಕ್ಕೆ ಬಳಸುವ

ಪದಾರ್ಥಗಳಾದ ಸೋಪ್, ಶ್ಯಾಂಪೂಗಳು, ಶುಚಿಕಾರಕ ವಸ್ತುಗಳು, ಮತ್ತು ನಾಲ್ಕನೆಯ ತಂಡಕ್ಕೆ ತಮ್ಮ ಶಾಲೆಯ ವಾತಾವರಣದಲ್ಲಿರುವ ಮಣ್ಣಿನ ಮಾದರಿಗಳು, ಕುಡಿಯುವ ನೀರು, ಗಿಡಗಳ ಎಳೆಗಳ ಸಾರ ಶಾಲಾ ಅಡುಗೆ ಮನೆಯಲ್ಲಿ ತಯಾರಿಸಿದ ಅನ್ನ, ಸಾಂಬಾರ್ ಮತ್ತು ಸಿದ್ಧ ಹಾಲಿನ ಪುಡಿಯನ್ನು ನೀಡಲಾಗಿತ್ತು.

ಪ್ರತಿಯೊಂದು ಗುಂಪಿನ ಶಿಕ್ಷಕರು ತಮ್ಮ ಗುಂಪಿಗೆ ಬಂದ ವಸ್ತುಗಳ ದ್ರಾವಣವನ್ನು ತಯಾರಿಸಿಕೊಂಡು, ಇದರಲ್ಲಿ pH ಸೂಚಕ ಕಾಗದವನ್ನು ಪ್ರತಿ ವಸ್ತುಗಳ ದ್ರಾವಣದಲ್ಲಿ ಅದ್ದಿ, pH ಮೌಲ್ಯವನ್ನು ಕಂಡುಹಿಡಿದು, ಅದರ ಪಟ್ಟಿಯನ್ನು ತಯಾರು ಮಾಡಿ, ತಮ್ಮ ಗುಂಪಿನ ಅನುಭವಗಳನ್ನು ಉಳಿದ ಶಿಕ್ಷಕರೊಂದಿಗೆ ಹಂಚಿಕೊಳ್ಳುವಂತೆ ತಿಳಿಸಲಾಯಿತು.

ಪ್ರತಿ ಗುಂಪಿನ ಶಿಕ್ಷಕರು ಮಂಡನೆಯನ್ನು ಮಾಡುತ್ತ, ತಮಗಾದ ಸ್ವಯಂ ಅನುಭವದ ಕಲಿಕೆ ತುಂಬಾ ಚೆನ್ನಾಗಿತ್ತು, ಪ್ರಯೋಗಕ್ಕೆ ಬಳಸಿದ ಪದಾರ್ಥಗಳೆಲ್ಲವೂ ನಮ್ಮೆಲ್ಲರ ದೈನಂದಿನ ಜೀವನಕ್ಕೆ ಸಂಬಂಧಿಸಿದ್ದರಿಂದ (ನೀರು, ಮಣ್ಣು, ಹಾಲು, ಸೋಪ್‌ಗಳು, ಟೂತ್‌ಪೇಸ್ಟ್, ಇತ್ಯಾದಿ) ಹಾಗು ಬಳಕೆಯಾಗುವುದರಿಂದ, ಪ್ರತಿಯೊಂದು ವಸ್ತುವಿನ pH ಮೌಲ್ಯವನ್ನು ಕಂಡು ಹಿಡಿಯುವ ಕುತೂಹಲ ನಮ್ಮನ್ನು ಕೊನೆಯವರೆಗೆ ಇದರಲ್ಲಿ ತೊಡಗಿಸುಕೊಳ್ಳುವಂತೆ ಮಾಡಿತ್ತು. ಈ pH ಮೌಲ್ಯಗಳು ಆಮ್ಲೀಯತೆ ಹಾಗು ಪ್ರತ್ಯಾಮ್ಲೀಯತೆಯನ್ನು ಸೂಚಿಸುವ ಹಾಗು ಆರೋಗ್ಯದ ಮೇಲೆ ಅದರಿಂದಾಗುವ ಅಡ್ಡ ಪರಿಣಾಮಗಳನ್ನು ಕಂಡು ಹಿಡಿಯುವುದು ಕೂಡ ಮುಖ್ಯವಾಗಿತ್ತು ಎಂದು ಶಿಕ್ಷಕರು ಹಂಚಿಕೊಂಡರು. ಶಿಕ್ಷಕರ ತೊಡಗಿಸಿಕೊಳ್ಳುವಿಕೆ ಎಷ್ಟಿತ್ತೆಂದರೆ ಊಟದ ವಿರಾಮವನ್ನು ಬೇಗನೆ ಮುಗಿಸಿ ಬಂದು, ಉಳಿದ ತಂಡಗಳು ಪತ್ತೆ ಹಚ್ಚಿದ pH ಮೌಲ್ಯಗಳನ್ನು ತಿಳಿದುಕೊಳ್ಳುವ ಹಾಗು ತಾವು ಪತ್ತೆ ಹಚ್ಚಿದ pH ಮೌಲ್ಯಗಳು ನಿರ್ಧಾರಿತ ಎಷ್ಟಿರಬೇಕು? ಇಲ್ಲದಿದ್ದರೆ ಏನಾಗುತ್ತದೆ ಎನ್ನುವ ಕುತೂಹಲ ತೋರಿಸಿದ್ದು ಕೂಡ ವಿಶೇಷವೆನಿಸಿತ್ತು. ಪ್ರತಿಯೊಂದು ಪದಾರ್ಥಗಳಿಗೂ ತಮ್ಮದೇ ಆದ ನಿರ್ಧಾರಿತ pH ಮೌಲ್ಯವಿರುತ್ತದೆ, ಅವುಗಳ ಬಳಕೆಯನ್ನು ಮಾಡುವಾಗ pH ಮೌಲ್ಯದ ಬಗ್ಗೆ ತಿಳಿದುಕೊಳ್ಳುವ ಅಗತ್ಯತೆಯನ್ನು ಉದಾಹರಣೆಗಳೊಂದಿಗೆ ವಿವರಿಸಲಾಯಿತು.

ತಂಪು ಪಾನೀಯಗಳು ತಂದೊಡ್ಡುವ ಆಮ್ಲೀಯತೆಯನ್ನು, ನೀರು ಹಾಗು ಮಣ್ಣಿನ pH ಮೌಲ್ಯಗಳು ತಟಸ್ಥವಾಗಿರಬೇಕು ಮತ್ತು ಕೆಲವು ಹಣ್ಣು ತರಕಾರಿಗಳು ದೇಹಕ್ಕೆ ಪ್ರತ್ಯಾಮ್ಲೀಯ ಗುಣವನ್ನು ಹೇಗೆ ನೀಡಬಲ್ಲವು ಎಂಬುದರ ಬಗ್ಗೆ ಚರ್ಚೆಯನ್ನು ಮಾಡಲಾಯಿತು.

ಇಲ್ಲಿ ಮುಖ್ಯವಾಗಿ ಆಮ್ಲ ಮತ್ತು ಪ್ರತ್ಯಾಮ್ಲಗಳ ಪರಿಕಲ್ಪನೆಯನ್ನು, ಸುಲಭವಾಗಿ ಸಿಗುವ ದೈನಂದಿನ ವಸ್ತುಗಳನ್ನು ಬಳಸಿಕೊಂಡು, ಹೇಗೆ ಅದು ದಿನ ನಿತ್ಯದ ಜೀವನಕ್ಕೆ ಅನ್ವಯವಾಗುತ್ತದೆ ಎನ್ನುವುದನ್ನು ತೋರಿಸಿಕೊಳ್ಳುವ ಉದ್ದೇಶವು ಸಫಲವಾಗಿದ್ದು, ವಿಜ್ಞಾನದ ತರಗತಿಗಳು ಈ ರೀತಿಯ ಕುತೂಹಲ ಹಾಗು ದಿನ ನಿತ್ಯದ ಜೀವನಕ್ಕೆ ಅನ್ವಯಿಸುವಿಕೆಯನ್ನು ನಾವು ಅನುಸರಿಸಿದರೆ ಸಹಜವಾಗಿಯೇ ಮಕ್ಕಳೂ ಕೂಡ ಕಲಿಕೆಯಲ್ಲಿ ತೊಡಗಿಕೊಳ್ಳಲು ಸಾಧ್ಯ,

ಈ ಪ್ರಯತ್ನಗಳನ್ನು ತರಗತಿ ಕೋಣೆಯಲ್ಲಿ ಬಳಸಿ ಅನುಭವಗಳನ್ನು ಹಂಚಿಕೊಳ್ಳಲು ತಿಳಿಸಿ ಕಾರ್ಯಾಗಾರವನ್ನು ಮುಗಿಸಿದೆವು. ನಂತರದ ದಿನಗಳಲ್ಲಿ ಸುಮಾರು ೨೦ಕ್ಕೂ ಹೆಚ್ಚು ಶಿಕ್ಷಕರು ತಮ್ಮ ತರಗತಿಯಲ್ಲಾದ ವಿಶಿಷ್ಟ

ಅನುಭವಗಳನ್ನು ಹಂಚಿಕೊಂಡಾಗ, ಮೊದಲ ಸಣ್ಣ ಪ್ರಯತ್ನ ಒಳ್ಳೆಯ ಪ್ರತಿಕ್ರಿಯೆಯನ್ನು ನೀಡಿದ್ದು ಸಮಾಧಾನವಾಗಿತ್ತು.

ಪ್ರಯೋಗಾತ್ಮಕ ಕಲಿಕೆಯ ನಂತರ ಮಕ್ಕಳು ಹಂಚಿಕೊಂಡ ವಿಶಿಷ್ಟ ಅನುಭವಗಳು ಹೀಗಿದ್ದವು. ಆಸಿಡ್‌ಗಳೆಂದರೆ ಚಲನಚಿತ್ರಗಳಲ್ಲಿ ತೋರಿಸಿದ ಹಾಗೆ ಹಾನಿಕಾರಕ ಅಂದುಕೊಂಡಿದ್ದೆ, ಅದರಿಂದ ಉಪಯೋಗಗಳು ಇದೆ, ಎಂದು ಗೊತ್ತಾಯಿತು. ರೈತ ಕುಟುಂಬದ ವಿದ್ಯಾರ್ಥಿನಿಯೊಬ್ಬಳು ಮಣ್ಣಿನ ಫಲವತ್ತತೆಗೆ pH ಮೌಲ್ಯಮುಖ್ಯ ಎಂಬುದು ಗೊತ್ತಾಗಿದೆ, ತನ್ನಹೊಲದ ಮಣ್ಣನ್ನು ತಂದು ಪರೀಕ್ಷೆ ಮಾಡಬಹುದಾ ಎಂದು ಕೇಳಿದ್ದು. ವಿಜ್ಞಾನದ ಪ್ರಯೋಗಗಳನ್ನು, ಗುಂಪುಗಳಲ್ಲಿ ಪ್ರಯೋಗಗಳನ್ನು ಮಾಡುತ್ತ ಕಲಿತ ಮಕ್ಕಳ ಸಂತೋಷ ಒಳ್ಳೆಯ ತರಗತಿಯನ್ನು ಮಾಡಿದ ಸಮಾಧಾನ ತಂದುಕೊಟ್ಟಿತು ಎಂದು ಶಿಕ್ಷಕಿ ಶಿಲ್ಪಾ ಹಂಚಿಕೊಂಡಿದ್ದು, ವಿಜ್ಞಾನದ ಪರಿಕಲ್ಪನೆಗಳು ದಿನ ನಿತ್ಯದ ಜೀವನದಲ್ಲಿ ಹಾಸುಹೊಕ್ಕಾಗಿದೆ, ಮಕ್ಕಳಲ್ಲಿ ವೈಜ್ಞಾನಿಕತೆಯನ್ನು ಬೆಳೆಸುವಲ್ಲಿ ಈ ಪರಿಕಲ್ಪನೆಗಳನ್ನು ದಿನನಿತ್ಯದ ಜೀವನದ ಉದಾಹರಣೆಗಳೊಂದಿಗೆ ಹೊಂದಿಸುವುದು ತುಂಬಾ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎನ್ನುವುದು ಶೈಕ್ಷಣಿಕ ಸುಗಮಕಾರರಾಗಿ ನಾವು ಹೆಚ್ಚು ಒತ್ತು ಕೊಡಬೇಕಾಗಿದೆ ಎನ್ನುವುದನ್ನು ಕಂಡುಕೊಳ್ಳಲು ಸಾಧ್ಯವಾಯಿತು.



Chaitravati

Innate number sense

- Vaishnavi

Numbers are symbolic depiction of a quantity of any objects. We use these symbols to keep an account of any quantities or numericities. Numbers are the symbols that we use in our daily life to quantify, approximate a set of objects. Having an inherent ability to quantify and relate it to symbols is called number sense. Number sense also refers to the intuitive understanding of quantity. Number sense is not just about numbers but is to relate, compare, estimate the quantities along with tagging a number to quantities and to a verbal form.

Humans are not the only species who are prudent about number sense. Many animals have sense of numbers, but it is very primitive visuospatial nonverbal approximate sense of quantity i.e. numbers. Number sense can be seen in primitive species like ants. They can count/ quantify till 20 numericities based duration and magnitude of the value. Mosquitofishes which can identify school of fishes when increased by two folds. Guppies can identify group of 4 fishes, reptiles use number sense to count number of their eggs. Primates can count numbers below 10. There are instances where primates are trained to count above and can also comprehend the symbols associated with the quantity. Even in human babies can quantify numbers smaller than 5.

Number sense is not highly intellectual trait but it is more rudimentary. Humans used number sense for survival, just like the humans are instinctively able to distinguish colours and quantities. Hunters and gatherers used number sense to estimate, compare or the number of fruits or animals in herd or birds in a flock. This basic approximation limited to smaller numbers. For example, humans can distinguish 4 oranges and 5 oranges. But humans cannot distinguish between 14 oranges and 15 oranges.

Studies estimated 32% of inherited number sense is genetical. Which means some part of our number sense is innate and rest is acquired through our surroundings. This can lead us to another question why and how we developed these many mathematical concepts. The answer lies in social and cultural evolution that humans gone through. Basic number sense was enough for our survival. But as we evolved, we had complex problems and hence evolved intricate mathematical concepts. Number sense is not product of human brain. But we could evolve elaborate mathematical concepts.

ಇನ್ನೂ ಕೆಲಸ ಬಾಕಿ ಇದೆ...

– ಸುರೇಶ್ ಎಸ್ ಗೌಡರ್

ಮಾರ್ಚ ತಿಂಗಳ ಸಂದರ್ಭ, "ಹೊ..ಅಲ್ಲಿ ಪೊಸಿಟಿವ್ ಬಂತಂತೆ", "ಈ ಜಿಲ್ಲೆಯಲ್ಲಿ ಇಬ್ಬರಿಗೆ ಬಂತಂತೆ", ಹೀಗೆ ಎಲ್ಲ ರಾಜ್ಯಗಳ ಹೆಸರುಗಳನ್ನು ಕೇಳುವಷ್ಟರಲ್ಲಿ ನಮ್ಮ ಕಲಬುರ್ಗಿಯಲ್ಲೇ ಪ್ರಥಮ ಕರೋನಾ ಪೊಸಿಟಿವ್ ಕೇಸ್‌ನಿಂದಾದ ವ್ಯಕ್ತಿಯ ಸಾವು, ನಮ್ಮನ್ನು ಮತ್ತಷ್ಟು ಆತಂಕಕ್ಕೆ ದೂಡಿದ್ದು ಯಾರೂ ಮರೆತಿರಲಾರರು.

ಈ ಭಯ, ಆತಂಕದ ಕ್ಷಣಗಳು ಸಮುದ್ರದ ಏರಿಳಿತದಂತೆ ಸಾಗಿ ಸಮಾಧಾನದ ಶಾಂತ ಸ್ಥಿತಿಗೆ ಬರುವಷ್ಟರಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಅಗಷ್ಟೇ ಬಂದಾಗಿತ್ತು. ಶಾಲಾ ಮಕ್ಕಳ ಭೇಟಿಗಾಗಿ ಕಾಯ್ದಿದ್ದ ಶಿಕ್ಷಕರಿಗೆ ವಿದ್ಯಾಗಮ ಒಂದು ವಿಭಿನ್ನ ವೇದಿಕೆಯನ್ನೊದಗಿಸಿತು.

ಶಾಲಾ ಶಿಕ್ಷಣವನ್ನು ತರಗತಿಯಾಚೆಗಿನ ಸಂದರ್ಭ ಮತ್ತು ಸನ್ನಿವೇಶಗಳಿಗೆ ಕನೆಕ್ಟ್ ಮಾಡಬೇಕು ಹಾಗೂ ತರಗತಿಯಾಚೆಗಿನ ಸಂದರ್ಭಗಳನ್ನು ತರಗತಿ ಪ್ರಕ್ರಿಯೆಯೊಳಗೆ ಸಂಬಂಧೀಕರಿಸಿ ಹೆಳಿದರೆ ಉತ್ತಮ ಎಂದು ಆಗಾಗ ನಡೆಯುತ್ತಿದ್ದ ಕಾರ್ಯಗಾರಗಳಲ್ಲಿ ಹೇಳುತ್ತಿದ್ದುದು ಸಮರ್ಪಕವಾಗಿ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಅದು ಅನುಷ್ಠಾನಕ್ಕೆ ಬಂದಿದ್ದು ಈಗಲೇ ಅನ್ನಿಸಿತ್ತು. ಏಕೆಂದರೆ ಮಕ್ಕಳಿಗೆ ಪಠ್ಯ ಪುಸ್ತಕಳಿಲ್ಲದೆ, ಎಲ್ಲ ಮಕ್ಕಳು ತಾವು ದಿನ ನಿತ್ಯ ಆಟವಾಡುತ್ತಿದ್ದ ದೇವಸ್ಥಾನದ ಪ್ರಾಂಗಣ, ಅಥವಾ ದೊಡ್ಡ ಮರದ ನೆರಳಿಗೆ ಶಿಕ್ಷಕರೇ ಬಂದು ಕಲಿಕಾ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿದ್ದು ಅವರಿಗೆ ಖುಷಿಯೋ ಖುಷಿ. ಮಕ್ಕಳು ತರಗತಿಯಾಚೆಗಿನ ಪರಿಸರದಲ್ಲಿ ಪಠ್ಯ ಪುಸ್ತಕಗಳಿಗೇ ಕಟ್ಟುಬೀಳದೆ ೩ ಗಂಟೆಗಳ ವರೆಗೆ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿದ್ದು ಅಭಿನಂದನಾರ್ಹ

ಇವೆಲ್ಲದಕ್ಕಿಂತ ಮುಖ್ಯವಾಗಿ, ಈ ಸಂದರ್ಭದಲ್ಲೇ ನಡೆದ ಎರಡು ಘಟನೆಗಳು ನನ್ನನ್ನು ಮತ್ತೆ ಮತ್ತೆ ಯೋಚಿಸುವಂತೆ ಮಾಡಿದ್ದು! ಎಂದಿನಂತೆ ವಿದ್ಯಾಗಮ ಪ್ರಕ್ರಿಯೆ ನಡೆಯುತ್ತಿದ್ದ ಸುರಪುರ ತಾಲೂಕಿನ ಸೂಗೂರಿ ಗೆ ಭಟಿ ನೀಡಿದ ಸಂದರ್ಭ, ಗ್ರಾಮದ ಮಧ್ಯದಲ್ಲಿದ್ದ ದೇವಸ್ಥಾನದ ಅಂಗಳದ ಮರದ ನೆರಳಿನಲ್ಲಿ ಶಾಲಾ ಶಿಕ್ಷಕರಾದ ರೇಣುಕಾ ಮತ್ತು ಮಕ್ಕಳು ತುಂಬಾ ಉತ್ಸಾಹದಿಂದ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದರು. ಕೆಲವು ಮಕ್ಕಳು ಮಾತ್ರ ಅದೇ ಅಂಗಳದ ಇನ್ನೊಂದು ಮೂಲೆಯಲ್ಲಿ ತಮ್ಮ ಸುತ್ತಮುತ್ತಲು ಏನು ನಡೆಯುತ್ತಿದೆ ಎಂದು ತಿಳಿಯದೇ ಆ ಪ್ರಕ್ರಿಯೆಯ ಭಾಗವಾಗಲು ದೂರದಿಂದಲೇ ಪ್ರಯತ್ನಿಸುತ್ತಿರುವುದನ್ನು ಕಂಡೆ. ಕುತೂಹಲ ಮತ್ತು ಸಂಶಯದಿಂದ ಶಿಕ್ಷಕರನ್ನು ಏಕೆ ಆ ಮಕ್ಕಳನ್ನು ಬೇರೆ ಕೂಡಿಸಿದ್ದು? ಎಂದು ಕೇಳಿದೆ. ರೇಣುಕಾ ಶಿಕ್ಷಕರು ತುಂಬಾ ಬೇಜಾರು ಮತ್ತು ಸಂಕೋಚದಿಂದ ಅವರು ಎಸ್.ಸಿ ಸಮುದಾಯದ ಮಕ್ಕಳು, ಊರಿನ ಸಮುದಾಯದವರು ಆ ಮಕ್ಕಳನ್ನು ಒಳಗಡೆ ಕರೆದುಕೊಳ್ಳಲು ಬಿಡುತ್ತಿಲ್ಲ, ಇತ್ತಕಡೆ ಶಾಲೆಯಲ್ಲಿ ಪ್ರಕ್ರಿಯೆ ನಡೆಸುವಹಾಗಿಲ್ಲ, ಇದನ್ನು ಹೊರತುಪಡಿಸಿ ಬೇರೆ ಸ್ಥಳಾವಕಾಶವೇ ಈ ಊರಲ್ಲಿ ಇಲ್ಲ ಏನು ಮಾಡುವುದು ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಇಷ್ಟೆ ಅಲ್ಲ ಇಬ್ಬರು ಮಹಿಳಾ ಶಿಕ್ಷಕರಿರು ಕೆಲಸ ಮಾಡುತ್ತಿದ್ದು ಅವರ ತಿಂಗಳ ಋತುಚಕ್ರದ ಸಂದರ್ಭದಲ್ಲೂ ದೇವಸ್ಥಾನದೊಳಗೆ ಹೋಗಬೇಡಿ ಎಂದು

ಕಟ್ಟುಪಾಡು ವಿಧಿಸಿದ್ದು, ನಮ್ಮ ಮನಸಿಗೆ ತುಂಬಾ ಆಘಾತವನ್ನುಂಟು ಮಾಡಿತ್ತು.

ಇತ್ತಕಡೆ ಅಧಿಕಾರಿಗಳ ಅಸಹಕಾರ ಮತ್ತು ಊರಿನವರ ಮಾತನ್ನೂ ದಿಕ್ಕರಿಸಲು ಸಾಧ್ಯವಾಗದ ಸ್ಥಿತಿಯಲ್ಲಿ ತಮ್ಮ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಕರಿಗೆ ಹೇಗೆ ಮಾರ್ಗದರ್ಶನ ಮಾಡಬೇಕು? ಯಾವುದನ್ನು ಮೊದಲು ಮಾಡಬೇಕು? ಯಾರ ಸಹಕಾರ ಪಡೆಯಬೇಕು? ಸಮುದಾಯಕ್ಕೆ ಅರಿವು ಮೂಡಿಸಬೇಕಾ ಅಥವಾ ಮುಂದೊಂದು ದಿನ ಸಮುದಾಯದ ಭಾಗವಾಗುವ ಮಕ್ಕಳಿಗೆ ಅದರ ಕುರಿತು ಅರಿವು ಮೂಡಿಸಬೇಕಾ? ಎಂಬ ಗೊಂದಲಗಳಿಗೆ ಯೋಚಿಸುತ್ತಿರುವಷ್ಟರಲ್ಲಾಗಲೇ ವಿದ್ಯಾಗಮ ಪ್ರಕ್ರಿಯೆಯೂ ನಿಂತು ಹೋಗಿತ್ತು.

ಸಂವಿಧಾನದ ಆಶಯಗಳ ದೇಗುಲವಾದ ಶಾಲೆ ಹಾಗು ಅಲ್ಲಿನ ಶಿಕ್ಷಕರು ಸಮತೆ, ಸಮಾನತೆಗಳ ಅನುಷ್ಟಾನದ ಮೂಲಕ ಸಮಾಜಿಕ ಏಕತೆಯನ್ನು ತರುವ ಮಹತ್ತರ ಜವಬ್ದಾರಿಯನ್ನು ಹೊಂದಿದ್ದಾರೆ, ಊರಿನ ಜವಬ್ದಾರಿಯುತ ಗ್ರಾಮ ಪಂಚಾಯತಿ ಸದಸ್ಯರ ಮತ್ತು ಪ್ರಮುಖರ ಸಹಕಾರ ಪಡೆದು ಇಂತಹ ಸಮಾಜಿಕ ಪಿಡುಗುಗಳನ್ನು ದೂರವಾಗಿಸುವ ಮಹತ್ತರ ಜವಬ್ದಾರಿ ಪ್ರತಿಯೊಬ್ಬರದ್ದಾಗಿದೆ. ಅದಕ್ಕಾಗೆ ಅನ್ನಿಸಿತು ಕೇವಲ ಕಲಿಕಾ ಪ್ರಗತಿಯಾದರೆ ಸಾಲದು "ಜವಬ್ದಾರಿಯುತ, ಉತ್ಪಾದಕ ಮತ್ತು ಸಂವೇದನಾಶೀಲ ಬೇರೆಯವರ ಬಗ್ಗೆ ಕಾಳಜೀಯುಳ್ಳ ವ್ಯಕ್ತಿಗಳ (ಸುರಪುರ) ಸಮಾಜವನ್ನು" ನಿರ್ಮಾಣಮಾಡುವ ಕೆಲಸ ಇನ್ನೂ ಬಾಕಿ ಇದೆ ಎಂದು.

“ಸೂಚಕ ಅರ್ಥ ಮತ್ತು ಅರ್ಥಪೂರ್ಣ ಅರ್ಥ”

– ನಾನಾಗೌಡ. ಎಮ್. ಕೆ.

ಭಾಗಲಕೋಟೆ ಮತ್ತು ವಿಜಯಪುರ ಮೆಂಬರ್‌ಗಳಿಗೆ ಸಾಮಾರ್ಥ್ಯಾಭಿವೃದ್ಧಿ ಭಾಗವಾಗಿ ಕನ್ನಡವನ್ನು ಮೊದಲ ಆದ್ಯತೆಯಾಗಿ ತಗೆದುಕೊಂಡು ಶಿಕ್ಷಕರ ಜೋತೆ ಕೆಲಸ ಮಾಡುವ ಮೆಂಬರ್‌ಗಳಿಗೆ ಗಣಿತ ವಿಷಯದ ಮೂರು ದಿನದ ಕಾರ್ಯಾಗಾರವನ್ನು (೨೦೨೧ ಜನವರಿ ೦೭, ರಿಂದ ೦೯ ರವರೆಗೆ) ವಿಜಯಪುರ ಜಿಲ್ಲಾ ಸಂಸ್ಥೆಯಲ್ಲಿ ಹಂಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರದ ಒಂದು ಅಧಿವೇಶನದಲ್ಲಿ ಗುಣಾಕಾರದ ಬಗ್ಗೆ ಚರ್ಚೆ ನಡೆದಾಗ....

ವಿಮಾನವೊಂದು ಪ್ರತಿ ನಿಮಿಷಕ್ಕೆ ೧೫ ಕಿ.ಮೀ ಕ್ರಮಿಸುತ್ತದೆ. ಹಾಗಾದರೆ, ಅದೇ ವಿಮಾನವು ೪ ನಿಮಿಷದಲ್ಲಿ ಚಲಿಸುವ ದೂರವೆಷ್ಟು?

ಈ ಪ್ರಶ್ನೆ ಕೇಳಗಿನ ಯಾವ ಗುಣಾಕಾರದ ವಿಧಕ್ಕೆ ಸೇರುತ್ತದೆ ಎಂದು ಕೇಳಲಾಯಿತು.

ಅ. ಸಮಾನ ಗುಂಪುಗಳು: (Equal grouping)

ಆ. ದರ: (Rate).

ಇ. ಉದ್ದ ಅಡ್ಡ ಸಾಲುಗಳಲ್ಲಿ ಜೋಡಿಸುವಿಕೆ: (Array).

ಈ. ಸಂಯೋಜಿಸಿದ ಗುಣಲಬ್ಧ: (Cartesian product).

ಮೆಂಬರ್‌ಗಳು ತಮ್ಮಗೆ ತಿಳಿದಿರುವುದನ್ನು ಹೇಳಿದರು ಕೊನೆಯದಾಗಿ ಸುಗಮಕಾರರು ಮೇಲಿನ ಪ್ರಶ್ನೆಯು ದರ (Rate) ವಿಧಾನದ ಗುಣಾಕಾರದ ಪ್ರಶ್ನೆಯಾಗಿದೆ ಎಂದು ಹೇಳಿದರು. ಕೆಲವು ಮೆಂಬರ್‌ಗಳಲ್ಲಿ ಗೊಂದಲ ಉಂಟಾಯಿತು ಕಾರಣ ಇಷ್ಟೆ ದರವೆಂದರೆ ವಸ್ತುಗಳ ಬೆಲೆ ಎಂದು ತಿಳಿದಿರುವುದರಿಂದ ನಂತರ ಸುಗಮಕಾರರು ಗಣಿತದಲ್ಲಿ ಬಳಸುವ ದರ ಮತ್ತು ಎಕನಾಮಿಕ್ಸ್‌ನಲ್ಲಿ ಬಳಸುವ ದರಕ್ಕು ವ್ಯತ್ಯಾಸವಿದೆ ಎಂದು ವಿವರಿಸಿ ಹೇಳಿದರು.
ಭಾಷೆಯಲ್ಲಿ ಬಳಸುವ ಪದಗಳು ಸೂಚಕ ಅರ್ಥ ಮತ್ತು ಅರ್ಥಪೂರ್ಣ ಅರ್ಥ ಹೊಂದಿರುವುದನ್ನು ತೀಳಿಯುವುದು ಬಹಳ ಮುಖ್ಯವಗುತ್ತದೆ. ಅಂದರೆ ಶಬ್ಧಶಃ ಅರ್ಥ ಮತ್ತು ಯಾವ ಸಂದರ್ಭದಲ್ಲಿ ಆ ಪದ ಬಳಸಲಾಗಿದೆ ಹಾಗೂ ವಿಷಯಗಳು ಅಂತ ಬಂದಾಗ ವಿಷಯಗಳಿಗೆ ಅನುಗುಣವಾಗಿಯೇ ಅರ್ಥ ಮಾಡಿಕೊಳ್ಳಬೇಕು ಇಲ್ಲದಿದ್ದರೆ ವಿಷಯ ಮತ್ತು ಸಂದರ್ಭ ಅಪಾರ್ಥವಾಗಿ ಹೋಗುತ್ತವೆ ಅದಕ್ಕೆ ಹೇಳೊದು ಮಾತು/ಶಬ್ಧ ಕತ್ತಲಾಗಬಾರದು. ನಮ್ಮ ಗಣಿತ ಹ್ಯಾಂಡ ಬುಕ್‌ನಲ್ಲಿ “ಆರಂಭಿಕ ಗಣಿತ ಶಿಕ್ಷಣ” – ಕಲಿಸುವ ಪ್ರಕ್ರಿಯೆ ಹೇಗಿರಬೇಕು ಎಂದು ELPS ಸೂತ್ರದ ಅಡಿ ವಿವರವಾಗಿ ಚರ್ಚೆ ಮಾಡಲಾಗಿದೆ.

E-experience – ಅನುಭವ

L-language – ಭಾಷೆ

P-Pictures – ಚಿತ್ರ

S-symbols – ಚಿನ್ಹೆ

ಅದರಲ್ಲಿ ಭಾಷೆ ಹಾಗೂ ಭಾಷೆ ಬಳಸುವ ಸನ್ನಿವೇಶ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿ ವಿಷಯವು ಅದರದೆ ಆದ ಭಾಷೆ ಹೊಂದಿರುತ್ತದೆ. ನಾವು ಹಾಸ್ಪೀಟಲ್‌ಗೆ ಹೋದಾಗ ಡಾಕ್ಟರ್ ರಿಪೋರ್ಟ ಬಗ್ಗೆ ನಮ್ಮಗೆ ೫–೧೦ ನಿಮಿಷ ಮಾತನಾಡುತ್ತಾರೆ ಅವರ ಮುಂದೆ ನಾವು ತಲೆ ಹಾಕುತ್ತವೆ ಆದರೆ ನಿಜ ಸ್ಥಿತಿ ಎಂದರೆ ಡಾಕ್ಟರ್ ಬಳಸಿರುವ ಕೆಲವು ಪದಗಳು ನಮಗೆ ತಿಳಿದಿರುವುದೆ ಇಲ್ಲ. ಇದು ಎಲ್ಲ ವಿಭಾಗದಲೂ ಅಷ್ಟೆ ಇಂಜಿನಿಯರ್, ಮೆಕ್ಯಾನಿಕ, ಸಾರಿಗೆ, ರೈತ, ಮಾರ್ಕೆಟ್ ಇತ್ಯಾದಿ ಸಂದರ್ಭದಲ್ಲಿ ಅವರುಗಳು ಬಳಸಿರುವ ಎಷ್ಟೋ ಪದಗಳು ನಮಗೆ ಅರ್ಥವಾಗಿರುದಿಲ್ಲ ಅಥವಾ ನಮಗೆ ಬೇಕಾದ ಹಾಗೆ ಅರ್ಥೈಸಿಕೊಂಡುಬಿಡುತ್ತೆವೆ ಇದರಿಂದ ವಿಷಯದ ಅರ್ಥ ಮಾಡುಕೊಳ್ಳುವುದರಲ್ಲಿ ಹಿಂದೆ ಬಿಳುತ್ತೆವೆ.

ಭಾಷೆ ಬಳಕೆಯು ಮಗುವಿಗೆ ಅರ್ಥವಾಗುವ ಹಾಗೆ ಮತ್ತು ಹಿತವಾಗಿ ಬಳಸುವುದು ತುಂಬಾ ಮುಖ್ಯವಾಗುತ್ತದೆ. ಮಕ್ಕಳಿಗೆ ನಾವು ಯಾವ ವಿಷಯದ ಚರ್ಚೆ ಮಾಡುತ್ತವೆ ಮೊದಲು ಆ ವಿಷಯದಲ್ಲಿ ಬಳಸುವ ಪದಗಳ ಅರ್ಥಪೂರ್ಣ ಅರ್ಥ ಹೇಳುವುದು ಅಥವಾ ಅವುಗಳ ಬಗ್ಗೆ ಚರ್ಚೆ ಮಾಡುವುದು ಒಳಿತು.

ಭಾಷೆ ವಿಷಯಕ್ಕೆ ಅನುಗುಣವಾಗಿ, ಸಂದರ್ಭಕ್ಕೆ ಅನುಗುಣವಾಗಿ, ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುವುದು ಮತ್ತು ಬೆಳವಣಿಗೆ ಹೊಂದುವುದನ್ನು ನಾವು ಅರಿತು ಶಿಕ್ಷಕರೊಂದಿಗೆ, ಮಕ್ಕಳೊಂದಿಗೆ ಚರ್ಚೆ ಮಾಡುವುದು ಸೂಕ್ತ. ಮಗು ಭಾಷೆಯ ಮೇಲೆ ಹಿಡಿತ ಹೊಂದಿದರೆ ಗಣಿತ, ಪರಿಸರ ಅಧ್ಯಯನ ಇತ್ಯಾದಿ ವಿಷಯಗಳ ಅರ್ಥೈಸಿಕೊಳ್ಳುವಿಕೆ ಸುಲಭವಾಗುವುದು.

ನಲಿ–ಕಲಿ **ಕನ್ನಡ** ವಿಷಯದಲ್ಲಿ ಬಳಸಿರುವ 'ಸಲಗ' (ಆನೆ), ಚಂಬು (ಚರಿಗೆ), ಘಠಾ (ಮಡಿಕೆ,ಗಡಿಗೆ), ಹಣ (ರೋಕ್ಕ), ಬಿಂದಿಗೆ (ಕೊಡಾ), ಪೋಲು (ಹಾಳು), ಇಕ್ಕೆಲು (ಎರಡು ಕಡೆ), ವರಹ (ಹಂದಿ), ಇರುಳ (ರಾತ್ರಿ), ಪೈರು (ಬೆಳೆ), ಒಬ್ಬಟ್ಟು (ಹೊಳಿಗೆ) **ಗಣಿತ** ವಿಷಯದಲ್ಲಿ ಬಳಸಿರುವ ಪರಂಗಿ (ಪೆರು ಹಣ್ಣು), ಬಲೂನ (ಪೂಗ್ಗಾ), ದ್ರವ (ನೀರಿನ ಸ್ಥಿತಿ), ಹಸಗಲ್ಲು (ಹಾಸಿದ ಕಲ್ಲು/ಕೇಳಗಿನ ಕಲ್ಲು) ಇತ್ಯದಿ ಪದಗಳು ಕೆಲವು ಜಿಲ್ಲೆಗಳ ಮಕ್ಕಳಿಗೆ ಅರ್ಥವಾಗುವುದು ಸ್ವಲ್ಪ ಕಷ್ಟ. ಪ್ರಾದೇಶಿಕವಾಗಿ ಬಳಸುವ ಇಂತಹ ಪದಗಳನ್ನು ಶಿಕ್ಷಕರು ಮಕ್ಕಳಿಗೆ ಚಿತ್ರ ಹಾಗೂ ಆ ಪ್ರದೇಶದಲ್ಲಿ ಅದಕ್ಕಿರುವ ಇನ್ನೊಂದು ಪದ ಬಳಸಿ ಹೇಳುವುದು ಉತ್ತಮ.

ನಲಿ–ಕಲಿ ಅಥವಾ ಇತರ ತರಗತಿಗಳನ್ನು ಒಬ್ಬರೆ ಶಿಕ್ಷಕರು ಬೋಧಿಸುವಾಗ ಕನ್ನಡ, ಗಣಿತ, ಪರಿಸರ ಅಧ್ಯಯನ, ವಿಜ್ಞಾನ ಹಾಗೂ ಸಮಾಜ ವಿಜ್ಞಾನದಲ್ಲಿ ಬಳಕೆಯಗುವ ಒಂದೇ ಪದ ವಿಷಯವಾರು ಬೇರೆ ಬೇರೆ ಅರ್ಥ ಹೊಂದುವುದನ್ನು ಅರಿತಿರಬೇಕು ಅಲ್ಲದೆ ಅರ್ಥಪೂರ್ಣ ಅರ್ಥ ಹೇಳುವುದನ್ನು ಪ್ರಾರಂಭಿಕ ಹಂತದಲ್ಲಿ ಮರೆಯಬಾರದು.

ಪ್ರಾರಂಭಿಕ ಹಂತದಲ್ಲಿ ಮಕ್ಕಳಿಗೆ ಇಂತಹ ಭಾಷಾ ಅನುಭವಗಳನ್ನು ನಾವು ಒದಗಿಸಿದರೆ ಭಾಷೆಯ ಮೇಲೆ ಮಕ್ಕಳು ನಿಯಂತ್ರಣ ಸಾಧಿಸುವುದರೊಂದಿಗೆ ಸಂತೋಷದಿಂದ ಕಲಿಕೆಯಲ್ಲಿ ಪಾಲ್ಗೊಳುವವರು. ಮಕ್ಕಳು ಪದಗಳ ಅರ್ಥಪೂರ್ಣ ಅರ್ಥ ಗ್ರಹಿಸುತ್ತಾ ಹೋದರೆ ಕಲಿಕೆಯ ವೇಗವು ಹೆಚ್ಚಾಗುವುದು. ಇದು ಇತರ ವಿಷಯಗಳ ಕಲಿಕೆಯನ್ನು ಆಸಕ್ತಿದಾಯವಾಗಿ ಮಾಡುತ್ತದೆ. ಅಲ್ಲದೆ ಸಾಮಾಜಿಕ ಸಂಬಂಧ ಘಟ್ಟಿಗೊಳಲು ಉತ್ತಮ ಹಾಗೂ ಸೃಜನಶೀಲ ಭಾಷೆ ಬಳಸುವುದನ್ನು ಕಲಿಯುತ್ತಾರೆ. ಶಿಕ್ಷಕರು ತರಗತಿಗಳಲ್ಲಿ ಸಮರ್ಥವಾಗಿ ಭಾಷಾ ಬಳಕೆ ಮಾಡುವುದರಿಂದ ಭಾಷಾ ಉದ್ದೇಶಗಳನ್ನು ಹಾಗೂ ಇತರ ವಿಷಯಗಳ ಉದ್ದೇಶಗಳನ್ನು ಪೂರೈಸಬಹುದು.

WHY ART?

- Renuka P B

Art is the most authentic way to educate a child. Art is a magical strategy to develop or makeover the child's mentality for learning. It's a hidden talent. Art should be recognized, nurtured and to be given space for their expression. Every child chooses its own way of art to specify its need or even fulfill its dream. Hence school, parents and even community should allow every child to come up with their own style of art. Art is the only tool which can perfectly gage a child's inbuilt capacity or its potential. Art must be encouraged in every child's early education. Art is the strongest means of communication skill which enhances the child's socioemotional values. And it makes easy to learn unknown aspects. Art itself has a great power which can make an individual very creative and can take an individual to its supreme level of creativeness.

Art will give life to an individual and it will act as a big strength to lead one's life. Art gives happiness and memorable in every individual's life and it has its own weightage in teaching and learning process. Art is a science of education which has power to mould the child's mentality in terms of learning hence, every child should be motivated and taught to lead its life artistically.

Maithily

ಶಿಕ್ಷಣ ಯಾವುದು – ಜೆ. ಕೃಷ್ಣಮೂರ್ತಿ

– ನಾಗರಾಜು

ಸಾಮಾನ್ಯವಾಗಿ ಶಿಕ್ಷಣವು ಮನುಷ್ಯನ ಮನಸ್ಸಿನ ಬದಲಾವಣೆ ಮತ್ತು ಹೊಸ ಸಂಸ್ಕೃತಿಯ ಕಟ್ಟುವಿಕೆಯಲ್ಲಿ ವಹಿಸುವ ಪಾತ್ರ ಬಹು ದೊಡ್ಡದು. ಆದರೂ ಪ್ರಚಲಿತವಿರುವ ಶಿಕ್ಷಣ ಕ್ರಮ ಮತ್ತು ಪದ್ಧತಿಯನ್ನು ಕುರಿತು ಹಲವಾರು ಪ್ರಶ್ನೆಗಳು ಎದ್ದಿವೆ. ಈಗ ನಾವು ಒಪ್ಪಿಕೊಂಡಿರುವ ಶಿಕ್ಷಣದ ಮಾದರಿ, ವ್ಯಕ್ತಿ ಮತ್ತು ಸಾಮಾಜದ ಸಂಕೀರ್ಣವಾದ ವ್ಯವಸ್ಥೆಗೆ ಅರ್ಥಪೂರ್ಣ ಸಂಬಂಧವನ್ನು ಕಲ್ಪಿಸುವುದರಲ್ಲಿ ವಿಫಲವಾಗಿದೆ. ಏಕೆಂದರೆ ಪ್ರಸ್ತುತ ಹೆಚ್ಚುತ್ತಿರುವ ಪರಿಸರದ ಬಿಕ್ಕಟ್ಟು, ಬಡತನ, ಕ್ರೌರ್ಯ ಇವೆಲ್ಲವು ಮನುಷ್ಯ ಸ್ಥಿತಿಯ ವಾಸ್ತವವನ್ನು ಎದುರಿಸುವಂತೆ ಒತ್ತಾಯಿಸುತ್ತವೆ. ಆದ್ದರಿಂದ ಶಿಕ್ಷಣವನ್ನು ಕುರಿತು ನಮ್ಮ ಗ್ರಹಿಕೆಗಳನ್ನು ಬದಲಾಸಿಕೊಳ್ಳುವುದು ಅಗತ್ಯವೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ಜೆ. ಕೃಷ್ಣಮೂರ್ತಿಯವರ ವಿಚಾರಗಳು ಮುಖ್ಯವೆನಿಸುತ್ತವೆ. ಏಕೆಂದರೆ ಕೃಷ್ಣಮೂರ್ತಿಯವರು ಹೊಂದಿರುವ ಶಿಕ್ಷಣದ ಪರಿಕಲ್ಪನೆಯೇ ಬೇರೆ. ಅವರ ಪ್ರಕಾರ, ಕೇವಲ ಶಿಕ್ಷಣದ ಕ್ರಮವನ್ನು ಮಾತ್ರವಲ್ಲದೆ ಅದರೊಟ್ಟಿಗೆ ಮನುಷ್ಯನ ಮನಸ್ಸು ಮತ್ತು ಜೀವನದ ಗುಣಮಟ್ಟವನ್ನೇ ಬದಲಾವಣೆಗೆ ಒಳಪಡಿಸಲು ಬಯಸುತ್ತವೆ.

ಜೆ. ಕೃಷ್ಣಮೂರ್ತಿಯವರ ಈ ವಿಚಾರಗಳು ಶಿಕ್ಷಣದ ಕುರಿತು ನಮ್ಮಲ್ಲಿರುವ ಕಲ್ಪನೆಯ ಬೇರುಗಳನ್ನು ಅಲುಗಿಸುವುದರ ಜೊತೆಗೆ ನಿರ್ದಿಷ್ಟ ಸಂಸ್ಕೃತಿಗಳ ಗಡಿಗಳನ್ನು ಮೀರಿ, ಹೊಸ ನಾಗರಿಕತೆ, ಹೊಸ ಸಮಾಜದ ನಿರ್ಮಾಣಕ್ಕೆ ಅಗತ್ಯವಾದ ಮೌಲ್ಯಗಳನ್ನು ನಿರೂಪಿಸುತ್ತವೆ. ಅವರ ಪ್ರಕಾರ ಶಿಕ್ಷಣವು ಪುಸ್ತಕಗಳಿಂದಷ್ಟೇ ಅಲ್ಲದೆ, ನೋಡುವುದರಿಂದ, ಕೇಳುವುದರಿಂದ, ಪುಸ್ತಕಗಳು ಏನು ಹೇಳುತ್ತವೆ; ಅವುಗಳಲ್ಲಿ ಸತ್ಯ ಮತ್ತು ಮಿಥ್ಯಾಂಶವೆಷ್ಟು? ಎಂದೆಲ್ಲ ವಿವೇಚಿಸುವುದರಿಂದಲೂ ದೊರಕುತ್ತದೆ. ಇವೆಲ್ಲ ಶಿಕ್ಷಣದ ಭಾಗವೇ ಆಗಿವೆ ಎಂದು ನಿರೂಪಿಸಲು ಹೊರಡುತ್ತವೆ.

ಶಿಕ್ಷಣದ ಗುರಿ ಪರೀಕ್ಷೆ, ಪದವಿ, ಮಡದಿ–ಮಕ್ಕಳು, ವ್ಯಾಪಾರ–ವ್ಯವಹಾರ, ಇಷ್ಟೇ ಅಲ್ಲ. ಶಿಕ್ಷಣವು ಇದರಾಚೆ ಇನ್ನೂ ವಿಸ್ತಾರವಾಗಿ ಹರಡಿಕೊಂಡಿದೆ. ಅದರಲ್ಲಿ ಹಕ್ಕಿಗಳ ಗುಂಜಾರವ ಕೇಳುವುದು, ಬಾನ ಸೌಂದರ್ಯ ಸವಿಯುವುದು, ಬಗೆಬಗೆಯ ಪ್ರಕೃತಿಯನ್ನು ನೋಡುವುದು, ಹಕ್ಕಿಗಳ ಕಿಲಕಿಲ ನಾದವನ್ನು ಕೇಳುವುದು, ನಿರಭ್ರ ಆಕಾಶದಲ್ಲಿ ತಾರೆಗಳನ್ನು ಮತ್ತು ಸೂರ್ಯನನ್ನು ನೋಡುವುದು, ಗಿಡ ಗಂಟೆಗಳ ಬೆಟ್ಟ ಬಯಲುಗಳ ಅದ್ವಿತೀಯ ಸೌಂದರ್ಯ ಸವಿಯುವುದು, ಇವೆಲ್ಲವನ್ನು ಅನುಭವಿಸುವುದು, ಇವುಗಳೊಟ್ಟಿಗೇ ಬದುಕುವುದು, ಇವೆಲ್ಲವು ಶಿಕ್ಷಣವೇ ಆಗಿವೆ. ಆದ್ದರಿಂದ ನಮ್ಮ ಶಾಲೆಗಳಲ್ಲಿ ಮಗುವಿಗೆ ಇದೆಲ್ಲದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ.

ಶಿಕ್ಷಣ, ಶಾಲೆಯ ಅಂಗವಾಗಿ ಮಗುವು ನಿರ್ದಿಷ್ಟ ಕೌಶಲಗಳನ್ನು ಅಧ್ಯಯನ ಮಾಡುವಾಗ ಸ್ವಂತ ಆಲೋಚನೆ, ಭಾವನೆ ಮತ್ತು ಕ್ರಿಯೆಗಳ ಬೆಳವಣಿಗೆಯನ್ನು ಸಾಧಿಸುವಂತಾಗಬೇಕು. ಇದರಿಂದ ಮಗು ಸ್ವ–ವಿಮರ್ಶೆ, ಪರಿಶೀಲನೆಯ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತದೆ. ಇದರ ಜೊತೆಗೆ ಮಗುವಿನಲ್ಲಿ ಅಖಂಡವಾದ ಗ್ರಹಿಕೆ, ವಿವೇಚನೆ ಮತ್ತು

ಕ್ರಿಯಾಶೀಲತೆಗಳು ಪಕ್ವಗೊಂಡು ಮನುಷ್ಯ ಮನುಷ್ಯರ ಸಂಬಂಧ, ಮನುಷ್ಯ ಮತ್ತು ನಿಸರ್ಗದ ಸಂಬಂಧ ಹಾಗೂ ಮನುಷ್ಯ ಮತ್ತು ಅವನು ನಿರ್ಮಿಸಿರುವ ಉಪಕರಣಗಳ ನಡುವೆ ಇರುವ ಸಂಬಂಧ ಇವೆಲ್ಲಗಳ ಒಂದು ಹದವನ್ನು ಪಡೆದುಕೊಳ್ಳುವಂತಾಗಬೇಕು ಹಾಗೂ ಕಲಿಕೆಯನ್ನು ಒಟ್ಟಾಗಿ ನೋಡುವಂತಾಗಬೇಕು. ಎಂಬುದು ಅವರ ಚಿಂತನೆಯ ಪ್ರಧಾನ ಕಾಳಜಿ.

Saving an insect

- Ravi Kumar

Having grown up and lived in limited space I never had an opportunity to observe the diversity of flora and fauna or explore the nature. For last one and half year I have been roaming into the fields, climbing the hills, and walking in the paths less traveled. During my nature walks I usually come across many creatures: Birds, animals, and insects. After celebrating the joys of observing the colorful and amazing birds for a long time my interest now shifted towards insects when I photographed a red insect. Its color pattern and design had made me mesmerized for a long time. Hence, even insects joined my list of interests.

My house is situated beside a place with full of bushes and huge trees. And that small grove is home for many creatures (including insects). Though my owner netted the windows of the house some insects manage to enter the house and get trapped inside. I was helpless as they were small in size and fast in escaping. I was afraid that, if I used any objects to save them, they might get crushed as they were delicate. I just wished for their luck. Most of the time I just saw them fly and fly inside the house and die on the floor.

One day I found a huge insect walking on the net of the window of my kitchen. I never saw such a big insect in my life. Moreover it was beautiful. Its body was huge but the wings were too small. I wondered how those wings carried such a huge body. It somehow got into the house and unable to go out now as the windows are netted. I observed it carefully. It has a yellow abdomen with black stripes on it. Its wings were yellow too. Its head was big but looked weak. I did not know its name also. It was walking slowly on the nets. I thought it needed my help. I took my hands near it. it was calm I thought I can easily catch it and take it to main door and leave it in the open but it flew away when my hands reached nearer to it. It went up and there was no chance I could catch it. I wished for it lucky escape and engaged in my work.

At night I saw it again in the hall which has the door. It looked very tired and was not moving. I felt pity on it and decided that I must leave it in the open. I went near it and took my hand it near it and drew back immediately. It did not move. I thought I did not have any energy left to move or fly. I observed it carefully to check where I could hold it safely. I did not want to hold its body as my grip might crush it. Then I found its wings away from its body which could be easy to

hold so that I would not struggle.

"I will obediently stay silent and calm. It will understand that I'm actually helping it to get out of this room by moving it out by holding its wings." I thought and went ahead with my plan. "This should work. This will be grateful to me for its whole life saving it." I felt proud.

I kept the door open and put an obstacle to it in an advance so that I would not close when I would be carrying out my mission. Then I brought my index finger and thumb together of both hands and silently reached the insect with utmost concentration. The target was the wings. I must straightly went for them and held both the wings with my both hands at a time. Immediately, not even a second late, I felt my finger were in great pain. I understood that this insect actually stings. I scolded myself for helping it but I still held its wings. It stung me again. The pain increased. I did not understand whether it was biting me with its mouth or its tail. I did not loosen the grip. My fingers were becoming numb. I darted towards the door. It stung me again making the pain unbearable. I kept my hands stretched front and went towards the dark visible from inside. I reached the door and left it in the dark. I did not see whether it fell down or flew away. I rushed to the sink and put my fingers under the running tap. The pain was unbearable. My palms were getting numb. Only pain could be felt nothing else. I tried to endure it but could not. I had shaken my hands, put ice on it, put the fingers in my mouth, and walked from here to there to get rid of the pain. My mind kept on thinking about my hand being paralyzed. I heard somewhere, long back, that to get the right antidote, you should know the type of the poison.

"Forget about the poison I did not even know the name of the insect that stung me." I told myself.

First I had to find the name of that tiny attacker and then search for the antidote. I typed -a big insect with small wings and big butt. Many results came. One read like this – insects with big abdomens.

"Oh it's not butt, its abdomen ah. Thanks to that insect I actually learned a new word." I appreciated myself for taking advantage of the situation.

I modified my phrasing of the words and searched – what do you call a yellow color striped big insect with big abdomen and tiny wings? (I did not forget the question mark because I should

not confuse Google.) I wished google would connect me with a doctor than giving me confusing results. Hundreds of insects with same description. I was losing the insect. After laboring for more than half an hour with my paining fingers I actually forgot how 'my' insect looked like. Now there was no point in finding the name of the insect. Then I thought of calling my friends who studied biology. But it's already late at night. "I have to fight this war by myself." I motivated myself. And at last, I decided to stay strong and wait to see whether my paralyses or not. Slowly I fell asleep. When I woke up my fingers were still paining but now I had the courage. I called up my friend. He told me the pain would reduce in one or two day if gave some rest to the hand. After two days my pain vanished and I completely forgot about it. Since then, I'm not helping any insect or bird in danger without wearing a gloves or protecting my hands with a cloth.

ಒತ್ತಕ್ಷರ ದೀರ್ಘವನ್ನು ಕಲಿಸುವ ವಿಧಾನ

– ಸ್ಫೂರ್ತಿ ಹೆಚ್.ಕೆ

ಸಾಮಾನ್ಯವಾಗಿ ಕನ್ನಡ ವಿಷಯ ಎಂದ ಕೂಡಲೇ ಮಕ್ಕಳಿಗೆ ಅದನ್ನು ಕಲಿಯುವುದು, ಓದುವುದು, ಬರೆಯುವುದು ಮತ್ತು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂಬ ಮನೋಭಾವವನ್ನು ನಾವೆಲ್ಲರೂ ಹೊಂದಿರುತ್ತೇವೆ. ಕನ್ನಡದಲ್ಲಿರುವ ಅಕ್ಷರಗಳು ವಿಭಿನ್ನವಾಗಿರುವುದರ ಜೊತೆಗೆ ಅವುಗಳನ್ನು ಉಚ್ಚರಿಸಿದಾಗ ಬರುವ ಶಬ್ದ, ಕಾಗುಣಿತ, ಒತ್ತಕ್ಷರ, ಸಂಯುಕ್ತಾಕ್ಷರಗಳು ಹೀಗೆ ಹಲವಾರು ಕಾರಣಗಳಿಂದ ಕನ್ನಡ ಕಲಿಯುವುದು ಸುಲಭವಲ್ಲ ಎನಿಸುತ್ತದೆ.

ಆದರೆ ನಮ್ಮ ನಲಿ–ಕಲಿ ತರಗತಿಗಳು ವಿಭಿನ್ನ ಪರಿಕಲ್ಪನೆಯಿಂದ ಮಕ್ಕಳಿಗೆ ಚಿತ್ರ ಸಹಿತ ಮತ್ತು ಚಟುವಟಿಕೆ ಆಧಾರಿತದ ಮೂಲಕ ಕಲಿಕೆಯನ್ನು ಸುಲಭಗೊಳಿಸುತ್ತದೆ. ಮಕ್ಕಳಿಗೆ ಅಕ್ಷರ ಅಥವಾ ಪದಗಳನ್ನು ದೃಶ್ಯೀಕರಣದ ಮೂಲಕ ಕಲಿಯುವಾಗ ಅವರ ಮನಸ್ಸಲ್ಲಿ ಧೀರ್ಘಕಾಲ ಉಳಿಯುತ್ತದೆ. ಪ್ರತಿಯೊಂದು ಅಕ್ಷರ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲಿಸಲು ಹಲವಾರು ಚಿತ್ರಾಧರಿತ ಕಾರ್ಡ್‌ಗಳನ್ನು ಬಳಸಿರುವುದರಿಂದ ಸಂತಸ ವಾತಾರಣದಿಂದ ಮಕ್ಕಳು ತಮ್ಮನ್ನು ತಾವು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಸಹಕರಿಸಿದೆ.

ಈ ಒಂದು ದಿಶೆಯಲ್ಲಿ ಒತ್ತಕ್ಷರ ಅಥವಾ ಒತ್ತಕ್ಷರ ದೀರ್ಘವನ್ನು ಕಲಿಸುವಲ್ಲಿ ಇರುವ ಕಾರ್ಡ್‌ಗಳಿಗೆ ಇನ್ನಿತರ ಚಟುವಟಿಕೆಗಳನ್ನು ಬಳಸಿಕೊಂಡರೆ ಕಲಿಕೆಗೊಂದು ಅರ್ಥ ಮತ್ತು ಅವುಗಳ ನಡುವೆಯಿರುವ ಸಂಬಂಧವನ್ನು ಗಟ್ಟಿಗೊಳಿಸಲು ಹಾಗೂ ಮಕ್ಕಳಿಗೆ ಅದರ ಬಗ್ಗೆ ಮತ್ತಷ್ಟು ಸ್ಪಷ್ಟವಾಗಿ ಪರಿಕಲ್ಪನೆಯನ್ನು ಮೂಡಿಸಬಹುದು. ಇದನ್ನು ಒಂದು ಉದಾಹರಣೆಯೊಂದಿಗೆ ವಿವರಿಸಲು ಪ್ರಯತ್ನಿಸಿದ್ದೇನೆ.

ಏಣಿ–೨ (ನಲಿ–ಕಲಿ, ತರಗತಿ–೨), ಮೈಲಿಗಲ್ಲು –೩ರ ಒತ್ತಕ್ಷರ **"ಒತ್ತನ್ ಧೀರ್ಘ (್ೋ)"**– ಇದರ ಕುರಿತಾಗಿ ಇರುವ ನಲಿ–ಕಲಿ ಕಾರ್ಡ್‌ಗಳು, ಅಭ್ಯಾಸ ಪುಸ್ತಕ, ಕನ್ನಡ ಹ್ಯಾಂಡ್ ಬುಕ್/ಕೈಪಿಡಿಯನ್ನು ಓದಿ ಅರ್ಥೈಸಿಕೊಂಡು ಇದಕ್ಕೆ ಪೂರಕವಾಗಿರುವಂತಹ ಬೇರೆ ಯಾವ ಚಟುವಟಿಕೆಗಳನ್ನು ಹಾಕಬಹುದೆಂದು ಆಲೋಚಿಸಿದೆ. ನಂತರ, ನೇರವಾಗಿ ಒತ್ತಕ್ಷರವನ್ನು ಬರೆಸುವ ಕಾರ್ಡ್‌ಗಿಂತ ಮುಂಚೆ ಮಕ್ಕಳಿಗೆ ಅವುಗಳನ್ನು ಉಚ್ಚರಿಸಿದಾಗ ಯಾವ ರೀತಿಯ ಶಬ್ದ ಬರುತ್ತದೆ, ಎಷ್ಟು ಸಮಯ ಉಚ್ಚಾರಣೆಗೆ ತೆಗೆದುಕೊಳ್ಳುತ್ತವೆ ಮತ್ತು ಹಿಂದಿನ ಮೈಲಿಗಲ್ಲು–೨ರ ಸಹಾಯದಿಂದ ಪ್ರಸ್ತುತ ಮೈಲಿಗಲ್ಲು–೩ನ್ನು ಕಲಿಸಲು ಉಪಯುಕ್ತವಾಗುತ್ತದೆ ಎನಿಸಿತು.

ಏಣಿ–೨, ಮೈಲಿಗಲ್ಲು –೩ರ ಒತ್ತಕ್ಷರ **"ಒತ್ತನ್ ಧೀರ್ಘ (್ೋ)"** ಕಲಿಸಲು ಇರುವ ಕಾರ್ಡ್‌ಗಳ ಸಂಖ್ಯೆ ಮತ್ತು ಪ್ರಸ್ತುತ ಯಾವ ಚಟುವಟಿಕೆಗಳಿವೆ ಎಂದು ನೋಡುವುದಾದರೆ ಕೆಳಗಿನಂತಿದೆ,

೧.**೨೭ನೇ ಕಾರ್ಡ್– ಪೂರ್ವಸಿದ್ಧತಾ ಹಂತ**: ಈ ಹಂತದಲ್ಲಿ ಮೊದಲು ಪೂರ್ವಭಾವಿ ಚಟುವಟಿಕೆಯಾಗಿ **"ಒತ್ತನ್ ಧೀರ್ಘ"** ದಿಂದ ಕೂಡಿರುವ ಸರಳ ಸಂಭಾಷಣೆಯ ನರಿ ಮತ್ತು ಬೆಕ್ಕಿನ ಕಥೆಯನ್ನು ನೀಡಲಾಗಿದೆ.

೨.೨೮ನೇ ಕಾರ್ಡ್– ಕಲಿಕಾ ಪೂರಕ ಹಂತ: ಈ ಮೈಲಿಗಲ್ಲಿನ ಕಲಿಕಾಪೂರಕ ಹಂತದಲ್ಲಿ 'ಚಿತ್ರವನ್ನು ಹೆಸರಿಸು' (ಡೋಲು, ಟೋಪಿ, ಕೋಗಿಲೆ, ಜೋಕಾಲಿ) ಎಂಬ ಚಟುವಟಿಕೆಯ ಮೂಲಕ ಕಲಿಕೆಗೆ ಪೂರಕ ವಾತಾವರಣವನ್ನು ನಿರ್ಮಿಸಲು ಅನುವು ಮಾಡಿಕೊಡಲಾಗಿದೆ.

೨೮ನೇ ಕಾರ್ಡ್‌ನ ಜೊತೆಗೆ ಕೆಳಗೆ ನೀಡಿರುವ ಚಟುವಟಿಕೆಗಳನ್ನು ಸೇರಿಸಿಕೊಂಡು ಮಾಡಿಸುವುದರಿಂದ ಮಕ್ಕಳಿಗೆ ತಾವು ಏನನ್ನು ಕಲಿಯುತ್ತಿದ್ದೇವೆ ಎಂಬುದರ ಪರಿಕಲ್ಪನೆಯನ್ನು ಮೂಡಿಸುವುದು.

ಚಟುವಟಿಕೆ ೧

"ಓತ್ವನ್ ದೀರ್ಘ" ವನ್ನು ಪರಿಚಯಿಸಲು ಮಕ್ಕಳಿಗೆ ಪರಿಚಿತವಾಗಿರುವ ಈ ಪದ್ಯವನ್ನು ಅಭಿನಯದ ಮೂಲಕ ಹಾಡಿಸುವುದು. – **"ಊಟಕೆ ಬಾರೋ ತಿಮ್ಮ"**

ಶಿಕ್ಷಕರು ಮತ್ತು ಮಕ್ಕಳು ಹಾಡನ್ನು ಹಾಡಿದ ನಂತರ ಅದನ್ನು ಬೋರ್ಡ್‌ನ ಮೇಲೆ ಮಕ್ಕಳಿಗೆ ಕಾಣುವ ರೀತಿಯಲ್ಲಿ ಬರೆಯುವರು ಮತ್ತು "ಓತ್ವನ್ ದೀರ್ಘ" ಬಂದಿರುವ ಅಕ್ಷರ/ಪದಗಳನ್ನು ಶಿಕ್ಷಕರು ಗುರುತು ಮಾಡುವರು.

ಚಟುವಟಿಕೆ ೨

ಈ ಚಟುವಟಿಕೆಯ ನಂತರ ಮಕ್ಕಳಿಗೆ ಕೆಲವೊಂದು ಸರಳ ಅಕ್ಷರಗಳಿಂದ ಕೂಡಿದ ಓತ್ವನ್ ದೀರ್ಘವಿರುವ ಪದಗಳನ್ನು ನೀಡಿ ಓದಲು ಹೇಳುವುದು ಅಥವಾ ಕೇವಲ ಚಿತ್ರವನ್ನು ನೀಡಿ ಅವುಗಳ ಹೆಸರನ್ನು ಮಕ್ಕಳೇ ಹೇಳುವಂತೆ ಪ್ರೇರೆಪಿಸುವುದು. ಮಕ್ಕಳು ಹೇಳಿದ ಪದಗಳನ್ನು ಶಿಕ್ಷಕರು ಬೋರ್ಡ್‌ನ ಮೇಲೆ ಹೇಳಿಕೊಂಡು ಬರೆಯುವಾಗ ಮಕ್ಕಳ ಗಮನವನ್ನು ಕೇಂದ್ರೀಕರಿಸಬೇಕು.

ಉದಾಹರಣೆ –

ಮೊಲ	**ಮೋಡ**
ಗೊರವ	**ಗೋಪಿ**
ಕೊಳಲು	**ಕೋಗಿಲೆ**
ದೊರೆ	**ದೋಸೆ**
ಮೊಸಳೆ	**ಮೋಸ**
ಕೊಡ	**ಕೋಟೆ**

⇒ ಮಕ್ಕಳಿಗೆ ಈ ಪದಗಳನ್ನು ಓದಿಸಿದಾಗ ಅವರು ಆ ಪದಗಳ ಉಚ್ಚಾರಣೆಯಲ್ಲಿ ಆಗುವಂತಹ ಸಮಯ ಮತ್ತು ಶಬ್ದಗಳ ವ್ಯತ್ಯಾಸವನ್ನು ಗ್ರಹಿಸಲು ಮತ್ತು ತಿಳಿಯಲು ಸಾಧ್ಯವಾಗುವುದು. ಇದರಿಂದ ಮಕ್ಕಳು ಬೇರೆ ಒತ್ತಕ್ಷರವಿರುವ ಪದಗಳನ್ನು ಓದುವಲ್ಲಿ ಮತ್ತು ಬರೆಯುವಲ್ಲಿ ಆಗುವಂತಹ ತಪ್ಪುಗಳನ್ನು ಸರಿ ಪಡಿಸಬಹುದು.

⇒ ಇದಾದ ನಂತರ ಮಕ್ಕಳಿಗೆ ಓತ್ವನ್ ದೀರ್ಘವಿರುವ ಅಕ್ಷರಗಳು ಮತ್ತು ವ್ಯಂಜನಗಳಿರುವ ಪ್ಲಾಶ್ ಕಾರ್ಡ್‌ಗಳನ್ನು ನೀಡಿ, ಪದಗಳನ್ನು ರಚಿಸಲು ಹೇಳುವುದು.

⇒ ಇಲ್ಲಿ ಮಕ್ಕಳು ಪದಗಳನ್ನು ಸರಿಯಾಗಿ ಹೊಂದಿಸಬಹುದು/ ಹೊಂದಿಸದೇ ಇರಬಹುದು. ಇದಕ್ಕೆ ಪೂರಕವಾಗಿ ಶಿಕ್ಷಕರು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಸೂಚನೆಗಳನ್ನು ನೀಡಬೇಕು.

- ಯಾವ ಯಾವ ಅಕ್ಷರವನ್ನು ತೆಗೆದುಕೊಂಡಿರುವೆ?
- ಆ ಅಕ್ಷರಗಳನ್ನು ಕೂಡಿಸಿದಾಗ ಯಾವ ಪದ ಬಂದಿತು?
- ಅದನ್ನು ಓದಿ ಹೇಳಿರಿ. ಇತ್ಯಾದಿ.

⇒ ಮಕ್ಕಳಿಂದ ಬರುವ ಪ್ರತಿಕ್ರಿಯೆಯ ಆಧಾರದ ಮೇಲೆ ಅವರಿಗೆ ಮತ್ತೊಂದು ಬಾರಿ ವಿವರಣೆಯ ಮೂಲಕ ಚಟುವಟಿಕೆಯನ್ನು ಮಾಡಿಸಿ, ಕಲಿಸಬೇಕಾಗಿರುವ ಅಕ್ಷರದ ಪರಿಕಲ್ಪನೆಯನ್ನು ಮಕ್ಕಳಿಗೆ ಅರ್ಥಮಾಡಿಸುವುದು.

ಚಟುವಟಿಕೆ ೩

ಮೇಲಿನ ಚಟುವಟಿಕೆಯ ನಂತರ ಮಕ್ಕಳಿಗೆ "ಓತ್ವನ್ ದೀರ್ಘ" ದಿಂದ ಕೂಡಿರುವ ಸರಳ ವಾಕ್ಯಗಳಿರುವ ಕಥೆಯನ್ನು ಮಕ್ಕಳಿಗೆ ಓದಿ ಹೇಳಿ ಅದರಲ್ಲಿ " ೀ ೂ" ದಿಂದ ಕೂಡಿರುವ ಪದಗಳನ್ನು ಗುರುತು ಮಾಡಲು ಮಕ್ಕಳಿಗೆ ಹೇಳಬೇಕು. ನಂತರ ಮಕ್ಕಳಿಗೆ ಕಥೆಯಲ್ಲಿರುವ ಪದಗಳನ್ನು ಓದಲು ಮತ್ತು ಬರೆಯಲು ಹೇಳುವುದು.

ಉದಾಹರಣೆ– "ಡೋಲು ಮತ್ತು ಚೋಟುವಿನ ಆಟದ ಸಮಯ" ಹಾಗೂ "ಚಂದಿರ ಮತ್ತು ಟೋಪಿ" (ಪ್ರಥಮ್ ಪಬ್ಲಿಕೇಶನ್ ಪುಸ್ತಕಗಳು) ಕಥೆಯನ್ನು ಹೇಳುವ ಸಂದರ್ಭದಲ್ಲಿ ಮತ್ತು ಕಥೆ ಹೇಳಿದ ನಂತರ ಶಿಕ್ಷಕರು ಅದಕ್ಕೆ ಪೂರಕವಾಗಿರುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳುವ ಮೂಲಕ ಅವರ ಗಮನವನ್ನು ಕೇಂದ್ರೀಕರಿಸಬೇಕಾಗುವುದು ಅವಶ್ಯಕವಾಗಿರತ್ತದೆ.

೩. **೨೯ನೇ ಕಾರ್ಡ್‌ನಲ್ಲಿನ ಸ್ವರ ಚಿಹ್ನೆಯನ್ನು ಪರಿಚಯ** ಮಾಡಿಸಿ, ವ್ಯಂಜನಾಕ್ಷರಗಳಿಗೆ ಸೇರಿಸಿ ಓದುವುದು ಮತ್ತು ಬರೆಯುವುದು.

* ೨೯ನೇ ಕಾರ್ಡ್‌ನ ಚಟುವಟಿಕೆಯನ್ನು ಮಾಡಿಸುವುದರೊಂದಿಗೆ ಕೆಳಗಿನ ಚಟುವಟಿಕೆಯನ್ನು ಸಹ ಮಾಡಿಸುವ ಮೂಲಕ ಮಕ್ಕಳಿಗೆ ಒತ್ತಕ್ಷರವನ್ನು ಸ್ಪಷ್ಟವಾಗಿ ಕಲಿಯಲು ಸಹಕರಿಸುವುದು.

⇒ ಮಕ್ಕಳಿಗೆ ಓತ್ವನ್ ದೀರ್ಘವಿರುವ ಸ್ವರ ಚಿಹ್ನೆಯ ಪರಿಚಯವಾದ ಮೇಲೆ, ಅವುಗಳಿಗೆ ಒಂದೊಂದು ಪದವನ್ನು ರಚಿಸಲು ಅಕ್ಷರಗಳ ಬಿಲ್ಲೆ/ ಪ್ಲಾಶ್ ಕಾರ್ಡ್‌ನ್ನು ಕೊಡುವುದು.

⇒ ಇದರಿಂದ ಮಕ್ಕಳಿಗೆ ಓತ್ವನ್ ದೀರ್ಘ ಇರುವ ಪದಗಳನ್ನು ರಚಿಸುವರು ಮತ್ತು ಬೇರೆ ಕಡೆ ಬಂದಿರುವ ಪದಗಳನ್ನು ಗುರುತಿಸಿ ಓದುವರು ಮತ್ತು ಅರ್ಥಮಾಡಿಕೊಳ್ಳುವರು.

೪. **೩೦ನೇ ಕಾರ್ಡು**– ಡೋಲು, ಟೋಪಿ, ಕೋಗಿಲೆ, ಜೋಕಾಲಿ – ಈ ಪದಗಳಿರುವ ಸನ್ನಿವೇಶ ರಚನೆಯ ಪರಿಚಯದ ನಂತರ ಸನ್ನಿವೇಶದ ಕುರಿತು ಮಾತುಕತೆಯನ್ನು ಮಾಡಿಸುವುದು.

೫. **೫ನೇ ಕಾರ್ಡ್**– ಸಾಧನ ಕಾರ್ಡ್ ಬಳಸುವ ಪೂರ್ವದಲ್ಲಿ ಸನ್ನಿವೇಶ ರಚನೆ ಓದಿದ ಮೇಲೆ ಕಾರ್ಡಿನಲ್ಲಿನ ಪದಗಳನ್ನು ಓದುವುದು ಮತ್ತು ಬರೆಯುವುದು.

೬. **೬ ಮತ್ತು ೬ಃ** – ಅಭ್ಯಾಸ ಪುಸ್ತಕದಲ್ಲಿ ಪದ ರಚನೆ, ಚಿತ್ರ ನೋಡಿ ಪದ ಬರೆಯುವ ಚಟುವಟಿಕೆ.

೭. **೭ನೇ ಕಾರ್ಡ್** – ಚಿತ್ರ ಸಹಿತ ವಾಕ್ಯವನ್ನು ನೋಡಿಕೊಂಡು ಓದುವುದು.

೮. **೮ ಮತ್ತು ೮ಃ** – ಅಭ್ಯಾಸ ಪುಸ್ತಕದಲ್ಲಿ ಚಿತ್ರನೋಡಿ ವಾಕ್ಯ ಸರಿಪಡಿಸಿ ಬರೆ, ಪದ ಹುಡುಕಿ ಬರೆಯುವುದು.

೯. **೯ನೇ ಕಾರ್ಡ್** – ಪದ ಶಬ್ದ ಆಟ.

ಈ ಮೇಲಿನ ಎಲ್ಲಾ ಕಾರ್ಡ್‌ಗಳನ್ನು ಹಾಗೆಯೇ ಬಳಸಿ ಮಕ್ಕಳಿಗೆ ಓತ್ವನ್ ದೀರ್ಘದ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ ಕಲಿಸಬಹುದು.

ಈ ರೀತಿಯಾಗಿ ಕಾರ್ಡ್‌ಗಳಲ್ಲಿರುವ ಕೆಲವೊಂದು ಸೂಕ್ಷ್ಮ ಅಂಶಗಳನ್ನು ಗಮನಿಸಿ, ಅವುಗಳಿಗೆ ಪೂರಕವಾದ ಚಟುವಟಿಕೆಗಳನ್ನು ತಮ್ಮ ತರಗತಿಯಲ್ಲಿ ಮಾಡಿಸಿ ಮಕ್ಕಳಿಗೆ ಕಲಿಸಿದಾಗ ಯಾಂತ್ರಿಕ ಕಲಿಕೆಯಾಗದೇ ನೈಜ ಕಲಿಕೆಯಾಗುತ್ತದೆ. ಮಕ್ಕಳಿಗೆ ಅವರು ಯಾವ ವಿಷಯವನ್ನು ಕಲಿಯುತ್ತಿದ್ದೇವೆ, ಹೇಗೆ ಕಲಿಯುತ್ತಿದ್ದೇವೆ, ಹಿಂದಿನ ಮತ್ತು ಮುಂದಿನ ಕಾರ್ಡ್‌ಗಳಿಗೆ ಹೇಗೆ ಸಂಬಂಧವಿದೆ ಎಂಬುದನ್ನು ತಿಳಿಸಿಕೊಟ್ಟಾಗ ಕನ್ನಡ ಅಥವಾ ಆರಂಭಿಕ ಭಾಷೆ ಸುಲಭವಾಗುತ್ತದೆ.

The best dowry parents can ever give to the girl child is Education

- Halesh D B

Education is the key that unlocks an infinite number of doors. It is the uplifting force that empowers us to set out sights higher.

The dowry system is deeply enrooted in Indian Society in such way that parents of girl child feel that it's their foremost priority to give dowry so that her future life will be well contended and joy-full. Dowry is not just a financial benefit but it is the matter of dignity. A false notion is assured that offering dowry while getting married makes her to lead life in a dignified and luxurious manner.

It has been rightly said, ***the hand that rocks the cradle can also rules the world***. It means mother plays a very great influence over the lives of her children and is able to mold their thoughts and character.

Parent should understand that if they give dowry it will give financial strength to husband of their daughter. But in spite of dowry if parents spend that amount on her education, it will strengthen her future life so that she can create her own destiny. They should edify their girl child to catch the fish, instead of eating the fish.

If you educate a man, you educate an individual. But if you **educate** a **woman**, you **educate** a nation. When girls are educated, their countries will become stronger and more prosperous. One parent, one change, one initiation can change the life of your daughter.

Let your lifetime savings could not give worry in the form of dowry.

ಕಾಯ್ಕಿಣಿಯ ಚಾರ್‌ಮಿನಾರ್

– ಹೇಮಂತ್ ಲಿಂಗಸುಗೂರು

ಜಯಂತ ಕಾಯ್ಕಿಣಿ ಅಂದ ಕೂಡಲೇ ಕನ್ನಡ ಚಲನಚಿತ್ರದ ಒಂದಷ್ಟು ಸುಮಧುರ ಗೀತೆಗಳು ನೆನಪಾಗುತ್ತವೆ. "ನೀ ಸನಿಹಕೆ ಬಂದರೆ ಹೃದಯದ ಗತಿಯೇನು", "ಈ ಸಂಜೆ ಯಾಕಾಗಿದೆ ನೀನಿಲ್ಲದೆ", "ಕಾಗದದ ದೋಣಿಯಲಿ ನೀ ಕೂರುವಂತ ಹೊತ್ತಾಯಿತೆ" ಹೀಗೆ ಅನೇಕ ಹಾಡುಗಳು ನೆನಪಿನಂಗಳದಲ್ಲಿ ಬಂದು ಹೋಗುವುದು ಸಹಜ. ಕಾಯ್ಕಿಣಿಯ ಕಥೆಗಳನ್ನು ಓದುತ್ತಾ ಹೋದಾಗ ಅವರ ವಿದ್ವತ್ತು, ಸಾಹಿತ್ಯ ಕೃಷಿ, ಪದ ಬಳಕೆಯಲ್ಲಿನ ಚಮತ್ಕಾರ ಓದುಗನಿಗೆ ವಿಶೇಷ ಅನುಭವವನ್ನು ನೀಡದೆ ಇರಲಾರದು. ಹಾಗಂತ ಕಾಯ್ಕಿಣಿಯ ಸಾಲುಗಳು ಸುಲಭವಾಗಿ ದಕ್ಕತಕ್ಕಂತಹವುಗಳಲ್ಲ. ಅದಕ್ಕೊಂದು ತನ್ಮಯತೆಯ, ತಲ್ಲೀನತೆಯ ಓದಿನ ಅಗತ್ಯವಿದೆ. ಎಷ್ಟೋ ಸಂದರ್ಭಗಳಲ್ಲಿ ಕೆಲವೊಂದು ಸಾಲು/ ಪ್ಯಾರಗಳನ್ನು ಪುನಃ ಪುನಃ ಓದಿ ಅರ್ಥೈಸಿಕೊಳ್ಳಬೇಕಾದ ಪ್ರಮೇಯವು ಬಾರದೆ ಇರದು ಎಂದು ಹೇಳಲಾಗುವುದಿಲ್ಲ.

ಇಂದು ನಾನು ಹೇಳಹೊರಟಿರುವುದು ಜಯಂತ್ ಕಾಯ್ಕಿಣಿಯವರ ಕಥಾಸಂಕಲನ ಚಾರ್‌ಮಿನಾರ್‌ನ ಕುರಿತಾಗಿ. ಚಾರ್‌ಮಿನಾರ್ ಕತೆಗಳು ಈ ಕಥಾಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿವೆ. ಚಾರ್ ಮಿನಾರ್ ಎಂಬ ಪುಸ್ತಕದ ಶೀರ್ಷಿಕೆಯನ್ನು ನೋಡಿ ನಾಲ್ಕು ಕತೆಗಳಿರಬಹುದೆಂದು ನಾನು ಮೊದಲು ಭಾವಿಸಿದ್ದೆ. ಆದರೆ ಚಾರ್‌ಮಿನಾರ್ ಎಂಬುದು ಇಲ್ಲಿನ ಕಥೆಗಳಲ್ಲಿ ಒಂದಾಗಿದೆ. ಇತರ ಕಥೆಗಳಿಗಿಂತ ಹೆಚ್ಚು ಆಪ್ತವಾಗುವ ನೈಜ ಬದುಕನ್ನು ತೆರೆದಿಡುವ ಕಥೆ ಇದಾಗಿದ್ದು ಅದಕ್ಕೆ ಈ ಪುಸ್ತಕಕ್ಕೆ ಚಾರ್‌ಮಿನಾರ್ ಎಂಬ ಶೀರ್ಷಿಕೆಯನ್ನು ನೀಡಿರಬಹುದು ಎಂಬುದು ನನ್ನ ಊಹೆ. ಸಾಮಾನ್ಯವಾಗಿ ಪುಸ್ತಕದ ಅರ್ಪಣೆಯನ್ನು ಕವಿ/ಕತೆಗಾರರ ತಂದೆ/ತಾಯಿಗೋ ಅಥವಾ ಆಪ್ತ ಸ್ನೇಹಿತರಿಗೋ, ಕುಟುಂಬವರ್ಗದವರಿಗೋ, ಪುಸ್ತಕವನ್ನು ಬರೆಯುವಲ್ಲಿ ನೆರವಾದರಿಗೋ ಅರ್ಪಿಸುವುದು ಸಾಮಾನ್ಯ ಆದರೆ ಇಲ್ಲಿನ ಅರ್ಪಣೆಯೇ ವಿಶೇಷ ಎಂಬುದು ಅದನ್ನು ಕಂಡಾಗ ನಮಗನಿಸುತ್ತದೆ. ಅದು ಹೇಗಿದೆ. "ವಿಳಾಸ ಸರಿ ಇರದೆ ಪ್ರತಿ ಅಂಚೆಕಛೇರಿಯಲ್ಲೂ ಬಟವಾಡೆಯಾಗದೆ ಉಳಿಯುವ ಅನಾಥ ಕಾಗದಗಳಿಗೆ".

ಈಗ ಈ ಚಾರ್‌ಮಿನಾರ್ ಕಥಾ ಸಂಕಲನದಲ್ಲಿನ 'ಮಧುಬಾಲಾ' ಕತೆಯ ಕುರಿತು ಮಾತನಾಡುತ್ತಾ ಹೋಗೋಣ.

ಇಲ್ಲಿ ಏಕಾಂತ ಭಾವೆ ಎಂಬುವವನು ಕಥಾನಾಯಕ. ಈತ ಗೋವಾಕ್ಕೆ ತೆರಳುವ ಸಂದರ್ಭದಲ್ಲಿ ಅವನು ಹಿಂದಿನ ಗೋವಾದ ನೆನಪುಗಳನ್ನು, ಅಲ್ಲಿನ ಮಧುಳನ್ನೂ, ಅಲ್ಲಿನ ಆ ಜೀವನವನ್ನು ಮೆಲುಕು ಹಾಕುವ ಸಂದರ್ಭದೊಂದಿಗೆ ಪ್ರಯಾಣದ ಚಿತ್ರಣವನ್ನು ಇಲ್ಲಿ ಹೆಣೆಯಲಾಗಿದೆ. ಟ್ರಕ್ಕೊಂದರಲ್ಲಿ ಪ್ರಾರಂಭವಾಗುವ ಪ್ರಯಾಣ ಮತ್ತು ಕಥೆ ಎರಡೂ ಮುಗಿಯುವುದು ಕ್ಯಾಸಲ್‌ರಾಕ್ ರೈಲ್ವೆ ನಿಲ್ದಾಣದಲ್ಲಿ.

ಮಧು/ ಮಧುಬಾಲಾ ಗೋವಾದ ಗೋಲ್ಡನ್ ಡ್ರಾಗನ್ ಬಾರಲ್ಲಿ ಕ್ಯಾಬರೆ ಡ್ಯಾನ್ಸ್ ಮಾಡುವವಳು. ಇದು ಅವಳ ಹೆಸರು ಹೇಗೋ ಹಾಗೆಯೇ, ಅಲ್ಲಿ ಇವರುಗಳನ್ನು ಬಾರಿನ ಮಧುಬಾಲೆಯರು ಎಂದೇ ಕರೆಯಲಾಗುತ್ತಿತ್ತು. ಕಾಮಿನಿ ಎಂಬುವವಳು ಇಲ್ಲಿ ಕಾಣುವ ಮತ್ತೊಂದು ಪಾತ್ರ. ಅವಳು ಮಧುವಿನ ಜೊತೆಯಲ್ಲಿ ಇದೇ ವೃತ್ತಿಯಲ್ಲಿ

ತೊಡಗಿಕೊಂಡಿರುವವಳು.

ಏಕಾಂತನ ಪ್ರಯಾಣದಲ್ಲಿನ ಸನ್ನಿವೇಶಗಳ ಚಿತ್ರಣದ ಒಂದಷ್ಟು ಸಾಲುಗಳನ್ನು ಇಲ್ಲಿ ಯಥಾವತ್ತಾಗಿ ಹಂಚಿಕೊಳ್ಳುತ್ತೇನೆ. ಆ ಸಾಲುಗಳು ನಮಗೆ ಅಷ್ಟು ಆಪ್ತವಾಗುತ್ತವೆ ಎಂಬುದು ನನ್ನ ಭಾವನೆ.

"ರಣ ಮಧ್ಯಾಹ್ನದಲ್ಲಿ ಇಡೀ ಡೀಸಲ್ ಬಂಕೇ ಹೊತ್ತಿಕೊಂಡು ಉರಿಯುತ್ತಿರುವಂತೆ ಇತ್ತು".

ಬಸ್ಸುಗಳು ಊಟಕ್ಕೆ ನಿಲ್ಲಿಸಿದಾಗ "ಕೆಲವು ನಾಜೂಕಾದ ಹೆಂಗಸರು ತಮ್ಮ ತಮ್ಮ ಗಂಡಂದಿರ ಕೈಗೆ ತಮ್ಮ ಕೈ ಬ್ಯಾಗು ಕೊಟ್ಟು ಕಣ್ಣಲ್ಲೇ ಅವರಿಗೆ ಸನ್ನೆಯಲಿ ತಿಳಿಸಿ 'ಹೆಂಗಸರಿಗೆ ಮಾತ್ರ' ಕಡೆಗೆ ನಡೆದರು".

"ಹಗಲೊಂದು ರಾತ್ರಿಯೊಳಗೆ ತಿವಿದು ನುಗ್ಗಿದಂತೆ ಧಡೂತಿ ವೋಲ್ವೋ ತನ್ನೆಲ್ಲ ಸರಕು, ತೂಕ, ಬಣ್ಣ, ಬಳುಕು ವೇಗದೊಂದಿಗೆ ಒಂದು ಸೂಕ್ಷ್ಮ ಪಲ್ಲಟದ ಸಂಭ್ರಮದಿಂದ ಸುರಂಗದೊಳಗೆ ಕಣ್ಮರೆಯಾಯಿತು". ಈ ಸಾಲುಗಳು ನನಗೆ ವಿಶಿಷ್ಟವೆನಿಸಿದವು, ಅದಕ್ಕಾಗಿ ಇಲ್ಲಿ ಹಂಚಿಕೊಂಡೆ. ಈಗ ಕಥೆಯನ್ನು ಮುಂದುವರೆಸೋಣ.

ಏಕಾಂತ್ ಅತ್ತರಿನ (ಕಟ್ಟಿಗೆ) ಕಂಪನಿಯಲ್ಲಿ ಅತ್ತರುಗಳನ್ನು ನಾನಾ ನಮೂನೆಯ ಪ್ರಕಾರಗಳ ಪರಿಮಳವನ್ನು ಮೂಸಿ ಪರೀಕ್ಷೆ ಮಾಡುವ ಉದ್ಯೋಗ ಮಾಡುತ್ತಿದ್ದ. ಈ ಕಥೆಯಲ್ಲಿ ಏಕಾಂತ್ ಕ್ಯಾಸಲ್‌ರಾಕ್‌ಗೆ ಹೋದದ್ದು, ಅಲ್ಲ ಮಧುಬಾಲಾಳೊಂದಿಗೆ ಕಳೆದ ದಿನಗಳ ಕುರಿತಾದ ಕನಸಿನ ಚಿತ್ರಣ ಮೂಡಿಬಂದಿದೆ.

ಒಮ್ಮೆ ಮಧೂಳ ಬರ್ಥಡೇ ದಿನ ಏಕಾಂತ್ ಅವಳನ್ನು ಹೊರಗಡೆ ಕರೆದುಕೊಂಡು ಹೋಗಲು "ನಾಳೆ ಸುಮ್ಮನೆ ಅಡ್ಡಾಡೋಣ"– ಅಂತ ಹೇಳಿದ್ದೇ ಮಧು ಯಾವ ನಖರಾ ಇಲ್ಲದೆ "ಸತ್ಯನಾರಾಯಣ ಪೂಜೆಗೆ ಬನ್ನಿ" ಅಂತ ಯಾರಾದರೂ ಕರೆದಾಗ ಪ್ರತಿಕ್ರಿಯಿಸುವಂತೆ ಸರಳವಾಗಿ– "ಖಂಡಿತ ಎಲ್ಲಿ, ಎಷ್ಟು ಗಂಟೆಗೆ" ಎಂದು ಕೇಳಿದಳು. ಹೀಗೆ ಹೊರಟ ಅವರ ಪ್ರಯಾಣ "ಲಾಸ್ಟ್ ಸ್ಟಾಪ್‌ಗೆ ಟಿಕೆಟ್ ತಗೊಳೋಣ... ನಡುವೆಲ್ಲಾದರೂ ಇಳಿಯಬೇಕೆನಿಸಿದರೆ ಇಳಿಯೋಣ" ಎಂದು ಹೊರಟಿತು. "ರಾತ್ರಿ ಕಳ್ಳಿಯಂತೆ ಯಾರ್ಯಾರದೋ ಬಂದೋ ಬಸ್ತಿನಲ್ಲಿ ಸುತ್ತಾಡಿ ಸುಸ್ತಾಗಿದೆ... ಹೀಗೆ ಖಿಲ್ಲಂ ಖಿಲ್ಲಾ ಬಸ್ಸಲ್ಲಿ ಟಿಕೆಟ್ ತಗೊಂಡು ಓಡಾಡುವುದರಲ್ಲಿ ಎಂಥ ಸಮಾಧಾನ ಇದೆ ಅಲ್ವಾ?" ಎಂದಳು. ಮಧೂ, ರಸ್ತೆಯಲ್ಲಿ ಸಿದ್ದಿ ವಿನಾಯಕನ ದೇವಸ್ಥಾನ ಕಂಡು ಅವಳ ಸ್ನೇಹಿತೆ ಕಾಮಿನಿಯ ಮಾತು ಇಲ್ಲಿ ಪ್ರಸ್ತಾಪ ಮಾಡಿದಳು. "ಏಯ್... ನಿಮ್ಮೂರಿನ ಯಾವುದೋ ಗುರುತು ಪರಿಚಯ ಇಲ್ಲದ ದೇವರನ್ನು ಕಟ್ಕೊಂಡು ಏನಾಗಬೇಕೊ ನನಗೆ? ನನ್ನ ದೇವರು ನನ್ನ ಜೊತೆ ಈ ಡ್ಯಾನ್ಸ್ ಬಾರಿಗೆ ಬರ್ತಾನೆ, ನನ್ನ ಜೊತೆ ಕುಣಿತಾನೆ. ದೇವಸ್ಥಾನ, ಗಿವಸ್ಥಾನ ಬೇಡ ಅವನಿಗೆ. ಪರ್ಸಲ್ಲಿ ಇಟ್ಕೊಂಡ್ರೆ ಇರ್ತಾನೆ, ಆ ಪರ್ಸನ್ನು ಬ್ಲೌಸಲ್ಲಿ ಇಟ್ಕೊಂಡ್ರಂತು ಇನ್ನೂ ಭದ್ರ ಅವ. ನಮ್ಮ ನಮೂನೆ ದಿನಗೂಲಿ ಮಾಡೋ ದೇವ್ರೆ ನಮಗೆ ಬೇಕು, ಬಿಸಿನೆಸ್ ಮಾಡೋ ದೇವ್ರು ಬೇಡಪ್ಪ" ಎಂದು ದೇವರ ಹೆಸರಿನಲ್ಲಿ ದುಡ್ಡು ಕೇಳಲಿಕ್ಕೆ ಬಂದ ಸೇಠ್‌ಗೆ ಕಾಮಿನಿ ಬೈದು ಕಳುಹಿಸಿದ ಪ್ರಸಂಗ ಇಲ್ಲಿ ಬಂದಿದೆ. ದೇವರ ಹೆಸರಿನಲ್ಲಿ ನಡೆಯುವ ಹಗಲು ದರೋಡೆ, ಮೋಸ ಇಲ್ಲಿ ಬಹಳ ಸೂಚ್ಯವಾಗಿ ಪ್ರಸ್ತಾಪಗೊಂಡಿದೆ.

ಮಧು ಏಕಾಂತ್ ಇಬ್ಬರು ಹಾಜಿಅಲಿ ಸಮುದ್ರತೀರದ ಬಳಿ ಬಸ್ ಇಳಿಯುತ್ತಾರೆ. ಈ ಹಾಜಿಅಲಿ ದರ್ಗಾ ಒಂದು

ಸ್ವಯಂ ಪೂರ್ಣ ನಡುಗಡ್ಡೆ. ಅಲ್ಲಿನ ಬಿಕ್ಷುಕರ ಸ್ಥಿತಿ, ನೀರು ಬಂದಾಗ ಅವರ ಪಾಡು, ಕಳೆದ ತಾಯಿಯನ್ನು ಇಲಿರುವ ಇತರ ವೃದ್ಧರಲ್ಲಿ ಕಾಣುವ ಸ್ನೇಹಿತೆಯ ನೆನಪು ಇವೆಲ್ಲಾ ಇಲ್ಲಿ ವ್ಯಕ್ತವಾಗಿದೆ. ಒಮ್ಮೆ ಮುದುಕಿಯೊಬ್ಬಳು, ಕ್ಯೂ ಬೇಟ ನಿನ್ನ ತಾಯಿ ಸಿಗಲಿಲ್ಲವೇ ಎಂದವಳೇ ನನ್ನ ಕೈ ಹಿಡಿದು, ಹಾಗಾದರೆ ನನ್ನನ್ನು ಕರ್ಕೊಂಡು ಹೋಗ್ತಿಯಾ ನಿನ್ನ ಮನೆಗೆ? ಎಂದು ಬೀರಿದ ವಿಷಣ್ಣವಾದ ನಗು ಎಷ್ಟೋ ಜನರ ಅಸಹಾಯಕ, ನಿರ್ಗತಿಕ ಸ್ಥಿತಿಯನ್ನು ನಮ್ಮ ಮುಂದೆ ಇಡುತ್ತದೆ.

ಹೀಗೆ ಅವರ ಪಯಣವೆಲ್ಲ ಚಿತ್ರಿತವಾಗಿ ಆ ಕನಸಿನೊಂದಿಗೆ ಏಕಾಂತ್ ಕ್ಯಾಸಲ್‌ರಾಕ್‌ಗೆ ಬಂದಿಳಿದ ಸಂದರ್ಭಕ್ಕೆ ಕಥೆ ಮುಗಿಯುತ್ತದೆ.

ಹೀಗೆ ಮುಂದೆ ಅಭಂಗ ಅಭಿಸಾರ, ನೀರು, ಅಲ್ಪವಿರಾಮ, ಕೋಮಲ ಗಾಂಧಾರ, ಒಳಾಂಗಣ, ಬಣ್ಣದ ಬಾನುಲಿ ಮತ್ತು ಚಾರ್‌ಮಿನಾರ್ ಎಂಬ ಏಳು ಕಥೆಗಳು ಚಿತ್ರಿತವಾಗಿವೆ.

ನಾವು ಮಕ್ಕಳ ಮಟ್ಟಕ್ಕೆ ಏರುವುದು ಎಂದರೆ.....?

– ಸುಜಾತ ಕೊಪ್ಪಲ್‌ಕಾಡ್

ನಾವು ಮಕ್ಕಳ ಮಟ್ಟಕ್ಕೆ ಇಳಿದು ಪಾಠಮಾಡಬೇಕು ಎಂದು ಕಾರ್ಯಾಗಾರದಲ್ಲಿ ಶಿಕ್ಷಕರೊಬ್ಬರು ಹೇಳಿದಾಗ ನನಗೆ ತುಸು ಹೊತ್ತು ಮಾತೇ ಬರಲಿಲ್ಲ. **ಹೌದಾ... ಇದು ನಿಜನಾ...!!**? ನಾನು ತುಂಬ ಯೋಚಿಸತೊಡಗಿದೆ. ಆದರೆ ತರಗತಿಕೋಣೆಗಳಲ್ಲಿ ನನಗಾದ ಅನುಭವಗಳ ಬುತ್ತಿಯನ್ನು ತೆರೆದು ನೋಡಿದಾಗಂತೂ ಅಚ್ಚರಿಯ ಮಹಾಪೂರವೇ ಕಾಣತೊಡಗಿತ್ತು. ಅಲ್ಲಿ ಮಕ್ಕಳು ನನ್ನನ್ನು, ತಮ್ಮ ಮುದ್ದಾದ ಹಾಗೂ ಅಷ್ಟೇ ಗಹನವಾದ ಪ್ರಶ್ನೆಗಳಿಂದ ತಬ್ಬಿಬ್ಬುಗೊಳಿಸಿದ್ದಂತೂ ನಿಜ. ನನಗಾಗಿರುವಂತಹ ಇಂತಹ ಅನುಭವಗಳು ನಮ್ಮ ಶಿಕ್ಷಕರಿಗೂ ಅವರ ಶಾಲಾ ಅನುಭದಲ್ಲಿ ತರಗತಿ ಕೋಣೆಯಲ್ಲಿ ಆಗಿರಬಹುದಲ್ಲವೇ? ಹೌದು. ಖಂಡಿತಾ ಆಗಿರುತ್ತದೆ. ಆದರೆ ಅವರಿಗೆ ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದೇ ಇದ್ದಿರಬಹುದೆಂದು ಭಾವಿಸುತ್ತಾ ನನಗಾದ ಅನುಭವಗಳನ್ನು ಒಂದೊಂದಾಗಿ ಅವರೆದುರಲ್ಲಿ ಬಿಚ್ಚಿಡುತ್ತಾ ಹೋದೆನು.

ಪ್ರಶ್ನೆ 1: ಅಂದು ಏಳನೇ ತರಗತಿ ಕನ್ನಡ ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುವಾಗ ನಾನೂ ಕಲಿಕಾರ್ಥಿಯಾಗಿ ಕುಳಿತಿದ್ದೆ. ಅವರು **ಸಾರ್ಥಕ್ಯ** ಕವನದ ಕುರಿತು ಮಾತನಾಡುತ್ತಿದ್ದರು. ಮಾತನಾಡುತ್ತಾ, ನಮ್ಮ ಜೀವನ ಹೇಗೆ ಸಾರ್ಥಕವಾಗುತ್ತದೆ ಎಂಬುದನ್ನು ಬೇರೆಬೇರೆ ಉದಾಹರಣೆಗಳೊಂದಿಗೆ ಹೇಳುತ್ತಿದ್ದರು. ಮುಂದುವರಿಯುತ್ತಾ ಸಸ್ಯಗಳೂ ಕೂಡ ಮನುಷ್ಯರು ಹಾಗೂ ಪ್ರಾಣಿ ಪಕ್ಷಿಗಳಂತೆ ಸಜೀವಿಗಳು ಎಂದು ಹೇಳುತ್ತಿರುವಾಗ

ಶೀಲ: (ಎದ್ದು ನಿಂತು) ಟೀಚಾರೀ, ಮನುಷ್ಯರು, ಪ್ರಾಣಿಪಕ್ಷಿಗಳು ಮರಗಿಡಗಳೂ ಕೂಡ ಸಜೀವಿಗಳು ಅಂತ ನೀವು ಹೇಳುತ್ತೀರಿ. ಆದರೆ ಸಸ್ಯಗಳನ್ನು ಮಧ್ಯದಲ್ಲಿ ತುಂಡರಿಸಿದರೆ ಅವುಗಳು ಮತ್ತೆ ಚಿಗುರುತ್ತವೆ/ಬೆಳೆಯುತ್ತವೆ. ಆದರೆ ಮನುಸ್ಯರಾಗಲೀ ಪ್ರಾಣಿಪಕ್ಷಿಗಳಾಗಲೀ ಬದುಕೋದಿಲ್ಲ, ಸತ್ತೇ ಹೋಗುತ್ತಾರೆ. ಇದು ಹೇಗೆ? ಯಾಕೆ? ಇದಕ್ಕೆ ನೀವೇನು ಹೇಳುತ್ತೀರಿ?

ತರಗತಿಯಲ್ಲಿರುವ ಎಲ್ಲರಿಗೂ ಪ್ರಶ್ನೆ ಕುತೂಹಲ ಕೆರಳಿಸಿತ್ತು. ನನಗೂ ಕುತೂಹಲ. ಶಿಕ್ಷಕರು ಏನು ಉತ್ತರ ನೀಡುವರೋ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದೆವು.

ಶಿಕ್ಷಕರು: (ದಂಗಾದರು) ಹೇ... ಸುಮ್ಮನಿರು. ತಲೆಹರಟೆ ಮಾತಾಡ್ಬೇಡ.

ಶಿಕ್ಷಕರ ಈ ಉತ್ತರ ಉಕ್ಕುತ್ತಿರುವ ಹಾಲಿಗೆ ತಣ್ಣೀರೆರಚಿದಂತಹ ಅನುಭವವಾಯಿತು. ಹುಡುಗಿಗೆ ನಿರಾಸೆಯೂ ಆಯಿತು. ಶಿಕ್ಷಕರು ತಲೆಹರಟೆ ಮಾಡಬೇಡ ಎಂದು ಹೇಳಿದ್ದು **ತಾನೇನೋ ತಪ್ಪು ಮಾಡಿದೆನೋ** ಎಂಬ ಭಾವ ಆಕೆಯ ಮುಖದಲ್ಲಿತ್ತು.

ಪ್ರಶ್ನೆ 2: ವಿಜ್ಞಾನ ಮೇಳಕ್ಕೆ ತಯಾರಿ ನಡೆಸುತ್ತಿರುವ ಸಂದರ್ಭದಲ್ಲಿ ಇಲಕಲ್ಲಿನ ಚಿಕ್ಕೋತಗೇರಿ ಶಾಲೆಗೆ ಹೋಗಿದ್ದೆ.

ಸಾಂದ್ರತೆ ಬಗ್ಗೆ ಮಕ್ಕಳು ಪ್ರಯೋಗ ಮಾಡುವ ತಯಾರಿಯಲ್ಲಿದ್ದರು. ಈ ಸಂದರ್ಭದಲ್ಲಿ ಮಕ್ಕಳೊಡನೆ ಚರ್ಚೆಗಿಳಿದಾಗ ಏಳನೇ ತರಗತಿಯ ಅಶ್ವಿನಿ ನನಗೆ ಕೇಳಿದ ಪ್ರಶ್ನೆ ನನ್ನನ್ನು ಮಾತ್ರವಲ್ಲ ನಮ್ಮ ಇಡೀ ವಿಜ್ಞಾನ ತಂಡವನ್ನೇ ಬೆರಗುಗೊಳಿಸಿತ್ತು. ಆಕೆ ಕೇಳಿದ್ದು ಇಷ್ಟೇ.

ಅಶ್ವಿನಿ: ಭಾರದ ವಸ್ತುಗಳು ಮುಳುಗುತ್ತವೆ. ಹಗುರದ ವಸ್ತುಗಳು ತೇಲುತ್ತವೆ. ಹೌದಲ್ಲವೇ? ಹಾಗಾದರೆ, ಮನುಷ್ಯರೊಬ್ಬರು ನೀರಿಗೆ ಹಾರಿದರೆ ಅಥವಾ ಬಿದ್ದರೆ ಅವರು ಈಜು ಬರದೇ ಇದ್ದರೆ ಮುಳುಗುತ್ತಾರೆ. ಹಾಗೆಯೇ ಅವರ ಪ್ರಾಣ ಹೋದರೆ ಅದೇ ದೇಹ ನೀರಿನಲ್ಲಿ ತೇಲುತ್ತದೆ. ಇದು ಯಾಕೆ? ಹೆಣ ಭಾರವಾಗಿರುತ್ತದೆ ಅಲ್ಲವೇ?

ಹೌದಲ್ಲಾ??? ಯಾಕೆ??? ಈ ಪ್ರಶ್ನೆ ನನ್ನನ್ನೂ ಕಾಡತೊಡಗಿತು. ಅವಳೇ ಹೇಳಿದಂತೆ ಹೆಣ ತುಂಬ ಭಾರವಾಗಿದ್ದು ಅದನ್ನು ನಾಲ್ಕು ಜನ ಎತ್ತಬೇಕು. ಆದರೂ ನೀರಿನ ಮೇಲೆ ತೇಲುತ್ತದಲ್ಲವೇ? ವಿಜ್ಞಾನ ತಂಡದವರನ್ನು ಕೇಳಿದಾಗ ದೇಹದ ಒಳಗೆ ಗ್ಯಾಸ್ ತುಂಬತ್ತೆ ಎಂದು ಹೇಳಿದರು. ಅವರಿಗೆ ಹುಡುಗಿಯ ಮರುಪ್ರಶ್ನೆ,

ಅಶ್ವಿನಿ: ಗ್ಯಾಸ್ ತುಂಬೋದು ಹೇಗೆ? ದೇಹದಿಂದ ಪ್ರಾಣ ಹೋದ ಮೇಲೆ ಹೊರಗಿನ ವಸ್ತುಗಳು ಒಳಗೆ ಹೋಗಲು ಹೇಗೆ ಸಾಧ್ಯ?

ಅಬ್ಬಬ್ಬಾ!!! ಹೌದಲ್ಲವೇ? ಹೇಗೆ ಸಾಧ್ಯ? ಈ ವಿಷಯಗಳು ನಮಗೇಕೆ ಹೊಳೆಯಲಿಲ್ಲ? ಮಕ್ಕಳ ಯೋಚನೆಯ ಮಟ್ಟ ನಮ್ಮ ಯೋಚನೆಗೂ ನಿಲುಕದ್ದು ಎಂದರಿತು ಮೂಕ ವಿಸ್ಮಿತಳಾದೆ. ಕೊನೆಗೂ ಉತ್ತರ ಸಿಗುವವರೆಗೆ ಆಕೆಯ ಸ್ನೇಹಿತರೂ ಸೇರಿದಂತೆ ಆಕೆ ಬಿಡಲೇ ಇಲ್ಲ.

ಪ್ರಶ್ನೆ 3: ಮಳೆ ಹೇಗೆ ಬರುತ್ತದೆ ಎಂಬ ವಿಷಯದ ಬಗ್ಗೆ ಕಂದಗಲ್ ಶಾಲೆಯ ಏಳನೇ ತರಗತಿಯಲ್ಲಿ ಚರ್ಚೆ ನಡೆಯುತ್ತಿತ್ತು.

ದೀಪಾ: (ಎದ್ದು ನಿಂತು) ಭೂಮಿಯ ಮೇಲಿನ ನೀರು ಸೂರ್ಯನ ಶಾಖಕ್ಕೆ ಆವಿಯಾಗಿ ಮೇಲೇರಿ ಮೋಡ ಕಟ್ಟುತ್ತದೆ. ಆ ಮೋಡಕ್ಕೆ ತಂಗಾಳಿ ಬೀಸಿದಾಗ ಅದು ಮಳೆಯಾಗಿ ಭೂಮಿಗೆ ಬೀಳುತ್ತದೆ'

ಶಿಕ್ಷಕರು **ಸರಿ** ಎಂದರು. ಅಷ್ಟಕ್ಕೇ ತೃಪ್ತಳಾಗದ ಹುಡುಗಿ,

ದೀಪಾ: ಹಾಗಾದರೆ ನಮ್ಮೂರಲ್ಲಿ ಯಾಕೆ ಬರಲ್ಲ ರೀ? ಮಳೆ ಆಗಲು ಬೇಕಾದ ಎಲ್ಲವೂ ನಮ್ಮಲ್ಲಿವೆ. ಬಿಸಿಲು, ನದಿ, ತಂಗಾಳಿ ಎಲ್ಲವೂ ಇದೆ. ಆದರೂ ಯಾಕೆ ಮಳೆ ಬರಲ್ಲ?

ಶಿಕ್ಷಕರು: ಸಸ್ಯ ಸಂಪತ್ತು ನಮ್ಮಲ್ಲಿ ಇಲ್ಲವಲ್ಲ? ಮಳೆ ಬರಬೇಕಾದರೆ ಮರಗಳು ಬೇಕು.

ದೀಪಾ: ಓಹೋ ಹಾಗಾದರೆ ಮಳೆಗೂ ಆಮ್ಲಜನಕ ಬೇಕೇನೋ?

ಪ್ರಶ್ನೆ 4: ಶಿಕ್ಷಕರು ಮಕ್ಕಳಿಗೆ ವಾಕ್ಯ ರಚಿಸಲು ಕೆಲವು ಪದಗಳನ್ನು ನೀಡುತ್ತಿದ್ದರು. ನನ್ನ ಸ್ನೇಹಿತ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಶಿಕ್ಷಕರು **ನಿರಾಸೆ** ಎಂಬ ಪದವನ್ನು ವಾಕ್ಯರಚನೆಗೆ ನೀಡುತ್ತಾ ಅವರೇ ಅದಕ್ಕೆ ಉತ್ತರವನ್ನೂ

ಹೇಳುತ್ತಿದ್ದರು. **ಶಿಕ್ಷಕರು:** ಮಕ್ಕಳೇ ನಿರಾಸೆ ಎಂಬ ಪದಕ್ಕೆ ನಾನೊಂದು ವಾಕ್ಯ ಹೇಳುತ್ತೇನೆ.

ಮಕ್ಕಳು: ಹೂ ಸಾರ್

ಶಿಕ್ಷಕರು: ನಾನು ಮತ್ತು ಶಿವು ಒಟ್ಟಿಗೆ ತೆಂಗಿನ ಸಸಿಗಳನ್ನು ತಂದು ನಮ್ಮ ಮನೆಯಲ್ಲಿ ನೆಟ್ಟೆವು. ಐದು ವರ್ಷಗಳ ನಂತರ ನನ್ನ ತೆಂಗಿನ ಮರದಲ್ಲಿ ಕಾಯಿ ಬಿಡುತ್ತದೆ. ಆದರೆ ಶಿವು ತೆಂಗಿನ ಮರದಲ್ಲಿ ಕಾಯಿ ಬಿಡುವುದಿಲ್ಲ. ಆಗ ಶಿವ ಗೆ ನಿರಾಸೆ ಆಗುತ್ತದೆ. ಅಲ್ಲವೋ

ಸಾಂತಪ್ಪ: ಸಾರ್, ಅದ್ಯಾಕ ನಿರಾಸೆ ಆಗ್ಬೇಕೂ, ಶಿವು ಮರಕ್ಕೆ ಇಂಜೆಸನ್ ಕೊಟ್ರೆ ಅದರಲ್ಲೂ ಕಾಯಿ ಬಿಡತ್ತೆ ರಿ!!!

ಈಗ ನಿರಾಸೆ ಆಗಬೇಕಾದ ಸರದಿ ಶಿಕ್ಷಕರದ್ದು.

ಇಂತಹ ಹಲವು ಅಚ್ಚರಿಗಳೊಂದಿಗೆ ತರಗತಿಕೋಣೆಯ ಪ್ರಕ್ರಿಯೆಗಳು ಸಾಗುತ್ತಾ ಇರುತ್ತವೆ. ಮಕ್ಕಳ ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಶಿಕ್ಷಕರು ಪೇಚಾಡುತ್ತಾ, ಅದಕ್ಕೆ ನ್ಯಾಯ ಒದಗಿಸಲು ತಮ್ಮಿಂದ ಸಾಧ್ಯವಾಗ್ತಾ ಇಲ್ಲ ಎಂದನಿಸಿದಾಗಲೆಲ್ಲಾ ಮಕ್ಕಳನ್ನು, **ತಲೆಹರಟೆ ಮಾಡಬೇಡ, ಅಧಿಕ ಪ್ರಸಂಗಿ, ಓದುವುದರಲ್ಲಿ ತೊಡಗು**... ಈ ಮುಂತಾದ ಮಾತುಗಳಿಂದ ಗದರಿ ಸುಮ್ಮನಾಗಿಸುತ್ತಾರೆ. ಮಕ್ಕಳು ಮನಸ್ಸಿಲ್ಲದ ಮನಸ್ಸಿಂದ ಸುಮ್ಮನಾಗುತ್ತಾರೆ. ಮುಂದೆ ಇಂತಹ ಪ್ರಶ್ನೆಗಳು ತಮ್ಮ ಮನದಲ್ಲಿ ಉದ್ಭವಿಸಿದರೂ ಅದನ್ನು ಕೇಳುವ ಸಾಹಸಕ್ಕೆ ಕೈಹಾಕುವುದಿಲ್ಲ.

ತರಗತಿಕೋಣೆಯಲ್ಲಿನ ಇಂತಹ ಪ್ರಕ್ರಿಯೆಗಳು ಮಕ್ಕಳ **ಪ್ರಶ್ನೆ ಕೇಳುವ ಸಾಮರ್ಥ್ಯ/ಉತ್ಸಾಹವನ್ನು** ಮೊಟಕುಗೊಳಿಸುವುದು ಮಾತ್ರವಲ್ಲದೆ ಜೊತೆ ಜೊತೆಗೆ ಮಕ್ಕಳ ಯೋಚನಾ ಕೌಶಲ/ಸಾಮರ್ಥ್ಯಕ್ಕೂ ಕಡಿವಾಣ ಹಾಕುವುದಂತೂ ಖಂಡಿತ. ಆದರೆ ಮಕ್ಕಳು ಕೇಳಿದ ಪ್ರಶ್ನೆಗಳು ನಿಜವಾಗಲೂ ತಲೆಹರಟೆ ಪ್ರಶ್ನೆಗಳಾ? **ಅಲ್ಲಾ**... ಎನ್ನುವುದು ಶಿಕ್ಷಕರಿಗೂ ಗೊತ್ತು. ಆದರೆ ಮಕ್ಕಳ ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವುದು ಮಾತ್ರ ಶಿಕ್ಷಕರ ಸಾಮರ್ಥ್ಯಕ್ಕೆ ಮೀರಿದ್ದು ಅನ್ನುವುದು ಕೂಡಾ ತಿಳಿದಿದೆ.

ಆದರೆ, ಮಕ್ಕಳು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಶಿಕ್ಷಕರಾದವರು ಉತ್ತರಿಸಲೇ ಬೇಕೇ? **ಇದು ನನ್ನ ಪ್ರಶ್ನೆ**. ಮಕ್ಕಳು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಶಿಕ್ಷಕರೇ ಉತ್ತರಿಸಲೇಬೇಕು ಎಂದು ಮಕ್ಕಳು ಹಾಗೂ ಶಿಕ್ಷಕರು ಕೂಡ ನಿರೀಕ್ಷಿಸಿದರೆ ಅದು ಮಕ್ಕಳ **ಕಲಿಯುವುದನ್ನು ಕಲಿಯುವ** ಪ್ರಕ್ರಿಯೆಗೆ ತಡೆ ಒಡ್ಡಿದಂತಾಗುವುದಿಲ್ಲವೇ? ಮಕ್ಕಳು ಕೇಳಿದ ಕೆಲವು ಪ್ರಶ್ನೆಗಳಿಗೆ ಅವರಿಗೇನೇ ಉತ್ತರ ಹುಡುಕುವಂತೆ ಪ್ರೋತ್ಸಾಹಿಸುವುದು ಕೂಡಾ ಮಕ್ಕಳನ್ನು ಕಲಿಯುವ ಪ್ರಕ್ರಿಯೆಯಲ್ಲಿ ತೊಡಗಿಸುವುದು ಎಂದರ್ಥವಾಗುವುದಿಲ್ಲವೇ?

ಇಂತಹ ಪ್ರಕ್ರಿಯೆಗಳು ತರಗತಿಕೋಣೆಯಲ್ಲಿ ನಡೆದಾಗ, ಶಿಕ್ಷಕರು ತರಗತಿಕೋಣೆಗೆ ಹೋಗಬೇಕಾದರೆ ಭಯಪಡಬೇಕಾದ ಹಾಗೂ ಮಕ್ಕಳನ್ನು ಗದರಿ ಸುಮ್ಮನಾಗಿಸುವ ಪ್ರಸಂಗವೇ ಬರೋದಿಲ್ಲ. ಇದು ಮಕ್ಕಳ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಹಾಗೂ ಕುತೂಹಲವನ್ನು ಕೆರಳಿಸುವ ಕೆಲಸವನ್ನು ಮಾಡುತ್ತವೆ. ಇದು ಪಠ್ಯಕ್ರಮ ಚೌಕಟ್ಟು ಹೇಳುವಂತೆ **ಕಲಿಕಾರ್ಥಿ ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳುವ ಪ್ರಕ್ರಿಯೆ**ಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತದೆ.

ಆಗ ಶಿಕ್ಷಕರು ಇಲ್ಲಿ ಕೇವಲ ಸುಗಮಕಾರರಾಗಿರುತ್ತಾರೆ. ಇದು ಮಕ್ಕಳ ಸಾಮರ್ಥ್ಯ/ಜ್ಞಾನವನ್ನು ಅರ್ಥಮಾಡಿಕೊಳ್ಳುವಲ್ಲಿ/ ಹೊರಗೆಳೆಯುವಲ್ಲಿ ಶಿಕ್ಷಕರಿಗೆ ಸಹಕರಿಸುತ್ತದೆ. ಒಂದು ಬಾರಿ ಶಿಕ್ಷಕರು ಮಕ್ಕಳ ಸಾಮರ್ಥ್ಯವನ್ನು ಅರ್ಥೈಸಿಕೊಂಡದ್ದೇ ಆದರೆ ಅವರು ಯಾವುದೇ ಚಟುವಟಿಕೆ ವಿನ್ಯಾಸಗೊಳಿಸುವಾಗ **ಮಕ್ಕಳ ಮಟ್ಟಕ್ಕೆ ಏರಬೇಕಾಗುತ್ತದೆ ಅಲ್ಲವೇ**?

ಇದೇ ತಾನೆ ನಿಜವಾದ ಅರ್ಥದಲ್ಲಿ ತರಗತಿಕೋಣೆಯಲ್ಲಿ ನಡೆಯಬೇಕಾದ ಪ್ರಕ್ರಿಯೆ? ಇದನ್ನು ಅರ್ಥಮಾಡಿಕೊಂಡು ತರಗತಿ ಪ್ರಕ್ರಿಯೆಯನ್ನು ಈ ನಿಟ್ಟಿನಲ್ಲಿ ವಿನ್ಯಾಸಗೊಳಿಸಿದ್ದೇ ಆದರೆ ಅದ್ಭುತವಾದದ್ದು ಸೃಷ್ಟಿಯಾಗುವುದರಲ್ಲಿ ಸಂಶಯವೇ ಇಲ್ಲ. ಕೊಠಾರಿ ಆಯೋಗದ **'ದೇಶದ ಭವಿಷ್ಯ ತರಗತಿಕೋಣೆಗಳಲ್ಲಿ ನಿರ್ಮಾಣವಾಗುತ್ತಿದೆ'** ಎಂಬ ಮಾತು ವಾಸ್ತವವಾಗುತ್ತದೆ ಅಲ್ಲವೇ?

ಏನಂತೀರಾ.....?

A TEACHER'S SINCERITY

- Meghana Baasri

With the unprecedented pandemic sweeping across the nation, school ground to a halt even before the end of the academic year. However, there are some teachers who rose above the constraints posed by COVID-19, just after the lockdown was relaxed.

In Ballari district, an English medium teacher reached out to me in late May to identify possible means to reach her class 2 students online. A passionate teacher who took many initiatives to teach her students the previous year, Mrs. A. was worried about language attrition in her students. She spoke about how she had been exploring options the past week to engage students online. She had already spoken to each of the parents of her students, who all supported her in initiating classes for their children.

Created by Maxicons from Noun Project

Mrs A. teaches in a small village, where many of the parents are labourers and farmers. They had heard of 'online classes' but were unsure of what it involved. To help the parents understand how to join the meeting, she called the parents to the school in small numbers. She demonstrated to the parents *how* to join the meeting, mute and unmute calls, and exit the meeting. Mrs. A then helped them install the app on their phones and subsequently had them join and exit the meeting a few times for them to understand everything that she had shown them. This process, by itself, took almost two whole days. Mrs. A. then had to plan for the learners who had no access to smartphones at home. She identified students who had graduated from the village school and took them through the process of joining the meetings. Two to three students were assigned to each alumnus; the students would attend the online class from the homes of the alumni. A few other students would attend the class from their friends' homes.

With all these arrangements in place, the class was set to commence. The class was scheduled at 7 PM, when parents would be home after work, and the phones would be available to the learners and would be for approximately 30 minutes per day, every day of the week. Most days, the parents attended the class alongside their children. Initially, Mrs. A made use of the English-Nali Kali cards to refamiliarize the students with English. She would give them small tasks – which had to be recorded and shared on the class WhatsApp group, or writing tasks – photos of which had to be shared. On days where Mrs. A was unable to take class, she would prepare some worksheets in advance.

The online classes were not a monotonous lecture. She would incorporate activities and use items available at home to teach certain concepts, like beads and bangles to teach the idea of grouping in mathematics. She made sure to make the class interactive and allowed students to respond to questions she asked. She would display the textbook on the screen and take class, as students followed in their textbooks.

After 4 months of classes, Mrs. A found a way to conduct tests for her students as well. She prepared the question papers (i.e., worksheets) in advance, and spoke to the man who owned the photocopy shop. Each day, the students would go to the shop and pick up a question paper. They would complete these either at home, or at the alumni's house, and then go submit the completed papers to one of the parents.

Mrs. A. also wanted to give her students a more holistic experience. She began to conduct occasional competitions online and would invite teachers from other schools as judges. She also celebrated Independence Day with her learners online, where the learners dressed up as freedom fighters and spoke about them. A 'Professionals' Day' event was conducted for the students, where Mrs. A reached out to students who she had earlier taught but were now in different professions to join online and interact with the students.

Mrs. A became an English medium teacher after the English Medium Teachers' Induction Program (EMTIP) was implemented in the district. She was initially a science teacher but was assigned to teach the English medium class because there were no other teachers who were able to do so in the school. She initiated her classes after reading the module provided to the teachers, and then infused her own ideas into her classes. She involved the parents of the students

from the get-go; she created a WhatsApp group, where she would share information with parents and share regular updates of what the students learnt in class. She also organised a mela for her students to display their speaking skills.

My interactions with Mrs. A started as early as in December 2018. Over the two years, I have inferred several things. Mrs. A's class is in high demand because of the interest and passion she pours into each of her classes. Every lesson taught uses a TLM. She does not force her students to talk in English all the time and lets them ease into it. Her commitment to her students' learning shows in every class and event she plans. Often, she would finish *Vidyagama* classes and then prepare and take the online class for her students. The bottom line is simple – a teacher's sincerity makes a big difference and goes a long way in garnering the complete support of the parents.

ಮಂಗನಿಂದ ಮಾನವ? ಚಿಂಪಾಜಿಗಳ ಜೀವನದೊಳಗೊಂದು ಇಣುಕು ನೋಟ

– ಹರಿಪ್ರಿಯ ಜೆ

ಮನುಷ್ಯ ಸಂಘಜೀವಿ. ಮನುಷ್ಯ ಎಲ್ಲರಿಗಿಂತಲೂ ಭಿನ್ನ–ಬುದ್ಧಿವಂತ ಹೌದಲ್ವೇ? ಇದನ್ನು ಹೇಳಿದ್ದೇ ಮನುಷ್ಯರು! ಸಂಶೋಧನೆಗಳು ಅದನ್ನೇ ಹೇಳುತ್ತೇ. ಹಾಗೆಂದ ಮಾತ್ರಕ್ಕೆ ನಾವು ಬೇರೆ ಪ್ರಾಣಿಗಳನ್ನು ಹೀಯಾಳಿಸುವಂತಿಲ್ಲ. ಆದರೆ ಮನುಷ್ಯ ತಾನೇ ಮೇಧಾವಿ ಈ ಭೂಮಿ ಕೇವಲ ತನ್ನದು ಎಂಬ ಭಾವನೆ ಇದೆ. ವಿವಿಧ ಗುಣಗಳನ್ನು ವ್ಯಕ್ತಪಡಿಸುವ ಹಲವಾರು ಪ್ರಾಣಿಗಳಿವೆ. ನಮ್ಮ ಅರಿವಿಗೆ ಬಂದಿಲ್ಲ ಅಷ್ಟೆ. ಏಕೆಂದರೆ ನಾವು ನಮ್ಮನ್ನು ಕೇಂದ್ರವಾಗಿಟ್ಟುಕೊಂಡು ಸಂಶೋಧನೆ ನಡೆಸಿದ್ದು ಅನಿಸುತ್ತದೆ.

ಇಂದಿನ ನನ್ನ ಲೇಖನದಲ್ಲಿ **ಜೇನ್ ಗುಡಾಲ್**ರವರು **ಚಿಂಪಾಜಿಗಳ** ಬಗ್ಗೆ ೪ ದಶಕಗಳು ನಡೆಸಿದ ಸಂಶೋಧನೆಗಳ ಬಗ್ಗೆ ಕೆಲವು ವಿಸ್ಮಯಕಾರಿ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಮಂಗನಿಂದ ಮಾನವ ಎಂಬ ವಿಚಾರಗಳ ಬಗ್ಗೆ ನಾವು ಬಹಳ ವಾದ ವಿವಾದಗಳನ್ನು ಕೇಳಿದ್ದೇವೆ. ಅದು ಸತ್ಯವೋ ಅಸತ್ಯವೋ ಎಂಬುದು ತಿಳಿಯದು. ಆದರೆ ಚಿಂಪಾಜಿಗಳ ಕೆಲವು ವಿಚಾರಗಳು ನನ್ನನ್ನು ಬೆರಗುಗೊಳಿಸಿತ್ತು.

ಜೇನ್ ಗುಡಾಲ್‌ರವರ ಚಿಂಪಾಂಜಿಗಳ ಕುರಿತಾದ ಅಧ್ಯಯನವು ಅನೇಕ ದಿಗ್ಭ್ರಮೆಯ ಸತ್ಯಗಳನ್ನು ಹೊರಹಾಕಿತು. ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಿತು. ಜೇನ್ ಗುಡಾಲ್‌ರವರು ಏಪ್ರಿಲ್ ೩, ೧೯೩೪ರಂದು ಲಂಡನ್‌ನಲ್ಲಿ ಜನಿಸಿದರು. ಬಾಲ್ಯದಿಂದಲೂ ಪ್ರಾಣಿಗಳ ಬಗೆಗೆ ವಿಶೇಷ ಕಾಳಜಿ ಜೇನ್‌ಳಿಗಿತ್ತು. ಅದಕ್ಕೆ ಉದಾಹರಣೆ ಕೋಳಿ ಹೇಗೆ ಮೊಟ್ಟೆ ಇಡುತ್ತದೆ? ಎರೆಹುಳುಗಳ ಬೆಳವಣಿಗೆಗೆ ಮಣ್ಣಿನ ಅವಶ್ಯಕತೆ ಇತ್ಯಾದಿ. ಪ್ರಾಣಿಗಳ ಹತ್ತಿರ ಹೋಗಬಾರದು, ದೂರದಿಂದಲೇ ಅಧ್ಯಯನ ಮಾಡಬೇಕು ಎಂದು ಒಮ್ಮೆ ಜೇನ್‌ಳ ಶಿಕ್ಷಕರು ಹೇಳಿದ್ದರು. ಆದರೆ, ಜೇನ್ ಅದನ್ನು ಅಲ್ಲಗೆಳೆದಳು. ಅವಳ ಪ್ರಕಾರ ಪ್ರಾಣಿಗಳನ್ನು ಅಧ್ಯಯನ ಮಾಡಬಯಸುವವರು ಅವುಗಳ ನಡುವೆಯೇ ಇರಬೇಕು, ಅವುಗಳ ಜೀವನ ಶೈಲಿಯನ್ನು ಹತ್ತಿರದಿಂದ ನೋಡಬೇಕು ಹಾಗು ಅಗಾಧ ಸಹನೆಯನ್ನು ಪಡೆದಿರಬೇಕು. ತುಂಬಾ ಸಾವಧಾನದಿಂದ ಕೆಲಸ ಮಾಡಬೇಕು ಎಂದಿದ್ದಳು.

ತನ್ನ ೨೩ನೇ ವಯಸ್ಸಿಗೆ ಕೀನ್ಯಾಗೆ ಜೇನ್ ತೆರಳಿದ್ದಳು. ಪ್ರಸಿದ್ಧ ಮಾನವಶಾಸ್ತ್ರಜ್ಞ ಮತ್ತು ಪ್ರಾಚೀನ ಜೀವನಶಾಸ್ತ್ರಜ್ಞರಾದ ಡಾ. ಲೂಯೀಸರ ಆದೇಶದ ಮೇರೆಗೆ ವಿಕ್ಟೋರಿಯಾ ಸರೋವರದಲ್ಲಿನ ದ್ವೀಪವೊಂದರಲ್ಲಿ ವಾಸಿಸುತ್ತಿದ್ದ ವರ್ವೆಟ್ ಕೋತಿಗಳ ಅಧ್ಯಯನವನ್ನು ನಡೆಸಿದಳು. ಆ ಕೋತಿಗಳು ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಬಹುದಾದ ಸಾಧ್ಯತೆ ಲೂಯಿಸ್‌ಗೆ ಕಂಡಿತ್ತು. ಚಿಂಪಾಂಜಿ ಮಾನವನ ಬುದ್ಧಿವಂತಿಕೆ ಅತಿ ಹತ್ತಿರವಾದ ಪ್ರಾಣಿ. ಇವು

ಗೊರಿಲ್ಲಾಗಳಷ್ಟು ಉಗ್ರ ಪ್ರಾಣಿಗಳಲ್ಲ. ಇದಕ್ಕೆ ತರಬೇತಿ ಕೊಟ್ಟು ಕಳುಹಿಸುವುದು ಸುಲಭ. ಮೂರು ಶತಮಾನಗಳಿಂದ ವಿಜ್ಞಾನಕ್ಕೆ ಚಿಂಪಾಂಜಿಗಳ ಬಗ್ಗೆ ತಿಳಿದಿತ್ತು. ಆದರೆ ಯಾರೊಬ್ಬರೂ ಈ ಅಪೂರ್ವ ಪ್ರಾಣಿಗಳನ್ನು ಅವುಗಳ ಸಹಜ ವಾಸಸ್ಥಾನದಲ್ಲಿ ಅಧ್ಯಯನ ಮಾಡಿರಲಿಲ್ಲ. ಲೂಯಿಸ್ ಜೇನ್‌ಗೆ ಟಾಂಜಾನಿಯಾದ **'ಗೋಂಬೆ ಹೊಳೆ ರಿಸರ್ವ್'**ನಲ್ಲಿದ್ದ ಸುಮಾರು ೧೦೦ ಚಿಂಪಾಂಜಿಗಳ ದೀರ್ಘಕಾಲ ಅಧ್ಯಯನ ಮಾಡಲು ಹೇಳಿದ.

೧೯೬೦ ರಲ್ಲಿ ಜೇನ್ ಟಾಂಜಾನಿಯಾದ ಗೋಂಬೆ ಹೊಳೆಯ ಪ್ರದೇಶಕ್ಕೆ ಮೂರು ತಿಂಗಳ ಪ್ರಾಜೆಕ್ಟ್ ಮೇಲೆ ಹೋದರು. ಮೂರು ತಿಂಗಳ ಅವಳ ಅಧ್ಯಯನ ಮೊದಲು ಆರು ವರ್ಷಕ್ಕೆ ಹಿಗ್ಗಿತು. ಟಾನ್ಗನಿಕಾ ಸರೋವರದ ಬಳಿ ಆಕೆ ಕ್ಯಾಂಪ್ ಹಾಕಿ ಚಿಂಪಾಂಜಿಗಳನ್ನು ಅವಲೋಕಿಸ ತೊಡಗಿದರು. ಜೇನ್‌ಳನ್ನು ಕಂಡ ಮೊದಲ ಚಿಂಪಾಂಜಿ ಗುಂಪು ಆಕೆ ೫೦೦ ಗಜ ದೂರವಿದ್ದಾಗಲೇ ಓಡಿ ಹೋಗಿತ್ತು. ಅತ್ಯಂತ ಸಹನೆಯಿಂದ ಪ್ರತಿದಿನವೂ ಬೆಳಗ್ಗೆ ಐದೂವರೆಗೆ ಎದ್ದು ಚಿಂಪಾಂಜಿಗಳನ್ನು ಇಡೀ ದಿನ ಹಿಂಬಾಲಿಸತೊಡಗಿದರು. ಮೆಲ್ಲನೆ ಚಿಂಪಾಂಜಿಗಳಿಗೆ ಇವಳ ನಿಶಬ್ದ ಇರುವಿಕೆ ನಿರಾತಂಕವಾಗಿ ಕಂಡು ಅಭ್ಯಾಸವಾಯಿತು. ಆಕೆ ಅವುಗಳಿಗಾಗಿಯೇ ಬಾಳೆಹಣ್ಣು ತಂದಿಡುತ್ತಿದ್ದರು. ಒಮ್ಮೆ ಒಂದು ಚಿಂಪಾಂಜಿಯು ನಿರಾತಂಕವಾಗಿ ಅವಳ ಮನೆಗೆ ಬಂದು ಬಾಳೆಹಣ್ಣನ್ನು ಕದ್ದಿತ್ತು. ಅವಳು ಏನು ಮಾಡುವುದಿಲ್ಲ ಎಂದು ಯೋಚಿಸಿ ಆ ಚಿಂಪಾಂಜಿ ತನ್ನವರಿಗೆ ಎಲ್ಲರಿಗೂ ಈ ವಿಚಾರ ಹೇಳಿತ್ತು ಅನಿಸುತ್ತೆ ಅದಾದ ನಂತರ ಆ ಚಿಂಪಾಂಜಿಯ ಕುಟುಂಬದವರು ನಿರಾತಂಕವಾಗಿ ಓಡಾಡಲು ಶುರು ಮಾಡಿದ್ದವು. ಅವುಗಳು ಜೇನ್‌ಳಿಂದ ಕೇವಲ ೩೦ ಅಡಿ ದೂರದಲ್ಲಿ ತಮ್ಮ ನಿತ್ಯಕರ್ಮಗಳನ್ನು ನಿರಾತಂಕವಾಗಿ ಮಾಡಲು ಪ್ರಾರಂಭಿಸಿದವು. ಕೆಲವೇ ಸಮಯದಲ್ಲಿ ಜೇನ್ ಬನಾನಾ ಕ್ಯಾಂಪ್ ಆರಂಭಿಸಿದರು. ಪ್ರತಿದಿನ ಅವುಗಳಿಗೆ ಬಾಳೆಹಣ್ಣು ಕೊಟ್ಟು ಗೆಳೆತನ ಬೆಳೆಸಿ ತನ್ನ ನಿರಂತರ ನಿಕಟ ವೀಕ್ಷಣೆಗೆ ಒಳಪಡಿಸಿದರು. ಅವಳ ಒಂದು ವಿಶೇಷತೆಯೆಂದರೆ ಚಿಂಪಾಂಜಿಗಳಿಗೆ ಅಂಕಿಗಳಿಂದ ಆಕೆ ಗುರುತಿಸಲಿಲ್ಲ. ಬದಲಾಗಿ ಹೆಸರಿಟ್ಟು ಆತ್ಮೀಯವಾಗಿ ಕರೆದಳು. ಪ್ರತಿ ಚಿಂಪಾಂಜಿಗಳು ತನ್ನದೇ ಆದ ಗುಣ, ಸ್ವಭಾವ, ವೈಶಿಷ್ಟ್ಯ ಇರುವುದನ್ನು ಗಮನಿಸಿದ ಆಕೆ ಒಂದೊಂದಕ್ಕೂ ಅದರ ವ್ಯಕ್ತಿತ್ವವನ್ನು ಗುರುತಿಸಿ ಹೆಸರಿಟ್ಟಳು. ಡೇವಿಡ್ ಗೇಬ್ರಿಯರ್ಡ್, ಬೇಬಿ ಫ್ಲಿಂಟ್ ಅವಳು ಕೊಟ್ಟ ಕೆಲವು ಹೆಸರುಗಳು. ಈ ಡೇವಿಡ್ ಗೇಬ್ರಿಯರ್ಡ್ ಮೊದಲು ಆಕೆಯ ಮನೆಯಲ್ಲಿ ಬಾಳೆಹಣ್ಣು ಕದ್ದ ಚಿಂಪಾಂಜಿ.

ಒಂದೊಂದು ಚಿಂಪಾಂಜಿಯೂ ತಮ್ಮ ಜಗತ್ತಿನ ಒಂದೊಂದೇ ಇಣುಕು ನೋಟವನ್ನು ಜೇನ್‌ಳಿಗೆ ನೀಡಿದವು. ಅವುಗಳನ್ನು ಅರ್ಥಮಾಡಿಕೊಳ್ಳಲು ಅವುಗಳ ವರ್ತನೆ, ಸ್ವಭಾವ, ಅಭ್ಯಾಸ, ಚಾಳಿಗಳನ್ನೆಲ್ಲ ಅನುಸರಿಸತೊಡಗಿದರು. ಅವುಗಳಂತೆ ಬಹಳಷ್ಟು ಸಮಯವನ್ನು ಮರದ ಮೇಲೆ ಕೂತು ಕಳೆದಳು ಅವುಗಳು ತಿಂದದನ್ನೆಲ್ಲಾ ಹುಳು–

ಹುಪ್ಪಟೆಗಳು ಸೇರಿದಂತೆ ತಾನು ರುಚಿ ನೋಡಿದ್ದರು. ಟಾನ್ಗನಿಕಾ ಸರೋವರದ ದಂಡೆಯ ಮೇಲಿನ ಚಿಂಪಾಂಜಿಗಳು ಜೇನ್ಳನ್ನು ಪರಿವಾರದ ಒಬ್ಬಳಂತೆ ಸ್ವೀಕರಿಸಿದ್ದವು.

ಹಿಂದೆಂದು ಯಾರು ಅಧ್ಯಯನ ಮಾಡಿರದಷ್ಟು ತನ್ಮಯತೆಯಿಂದ ಜೇನ್ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಗಮನಿಸುತ್ತಾ ದಾಖಲಿಸುತ್ತಾ ಚಿಂಪಾಂಜಿಗಳ ಪ್ರವೃತ್ತಿ ಗುಣ ಸ್ವಭಾವ ವರ್ತನೆ ನಡತೆಗಳನ್ನು ಮಾಡಿಕೊಳ್ಳತೊಡಗಿದಳು. ಅವುಗಳ ಸಾಮಾಜಿಕ ಬದುಕು, ಊಟ, ತಿಂಡಿ, ನಿದ್ದೆ, ಸಿಂಗಾರ, ಲೈಂಗಿಕ ಬದುಕು, ಕುಟುಂಬ ಜೀವನ ಎಲ್ಲವನ್ನು ದಾ–ಖಲಿಸಿದಳು. ಆಕೆ ದಾಖಲಿಸಿದ ಕೆಲವೊಂದು ಮಾಹಿತಿಗಳು ಇಂತಿವೆ:

- ಚಿಂಪಾಂಜಿಗಳು ಕೂಡ ಸಲಕರಣೆಗಳನ್ನು ಮಾಡುತ್ತವೆ ಎಂಬುದನ್ನು ಸಾಬೀತುಪಡಿಸಿದರು. ಹುತ್ತದ ಆಳದಲ್ಲಿನ ಗೆದ್ದಲು ಹುಳುಗಳನ್ನು ಹಿಡಿಯಲು ಚಿಂಪಾಂಜಿಗಳು ತಮ್ಮದೇ ಆದ ಒರಟು ಸಲಕರಣೆಗಳನ್ನು ತಯಾರಿಸಿದ್ದವು.ಗಿಡದ ಒಂದು ಸಣ್ಣ ಕಡ್ಡಿಯನ್ನು ಮುರಿದುಕೊಂಡು ಅದರ ಎಲೆಗಳನ್ನು ತರಿದು ಹಾಕಿ ಅದನ್ನು ಹುತ್ತದ ಆಳಕ್ಕೆ ಇಟ್ಟಾಗ ಗೆದ್ದಲು ಹುಳುಗಳು ಕಡ್ಡಿಯಮೇಲೆ ಅಂಟಿ ಮೆತ್ತಿಕೊಳ್ಳುತ್ತಿದ್ದವು. ಥಟ್ಟನೆ ಚಿಂಪಾಂಜಿ ಕಡ್ಡಿಯನ್ನು ಹೊರಗೆಳೆದು ಬಾಯಿಗೆ ಹಿಡಿದು ನಾಲಗೆಯಿಂದ ಗೆದ್ದಲು ಹುಳುಗಳನ್ನು ಸವರಿದ ಚಪ್ಪರಿಸುತ್ತಿತ್ತು.
- ಕಲ್ಲು ಬಂಡೆಗಳ ನಡುವಿನ ತಗ್ಗಿನಲ್ಲಿರುವ ನೀರನ್ನು ಪಡೆಯಲು ಒಂದಿಷ್ಟು ಎಲೆಗಳನ್ನು ಹಿಸುಕಿ ಜಗಿದು ಅವುಗಳ ಹೀರಿಕೊಳ್ಳುವ ಗುಣ ಅಧಿಕವಾದಾಗ ಅದನ್ನು ಸ್ಪಂಜಿನಂತೆ ನೀರು ಹೀರಿ ಕುಡಿಯಲು ಬಳಸುತ್ತಿದ್ದವು.ಈ ಎರಡು ಮಹತ್ತರದ ಅನ್ವೇಷಣೆಗಳು ಆದಿಮಾನವ ಮತ್ತು ಆತನ ವಿಕಾಸವನ್ನು ಕುರಿತು ವತಿಯಿಂದ ಮೇಲೆ ವಿಶಿಷ್ಟವಾದ ಬೆಳಕು ಚೆಲ್ಲಿದವು.
- ಮನುಷ್ಯನಂತೆ ಚಿಂಪಾಂಜಿಗಳು ಸ್ಪರ್ಶ ಮತ್ತು ಆಲಿಂಗನದ ಮೂಲಕ ಒಂದು ಇನ್ನೊಂದನ್ನು ಸಮಾಧಾನ ಪಡಿಸಿಕೊಳ್ಳುತ್ತವೆ.
- ಸುಮಾರು ೨೦ ಬಗೆಯ ಶಬ್ದಗಳ ಮೂಲಕ ಅವು ಒಂದನ್ನೊಂದು ಸಂಪರ್ಕಿಸುತ್ತವೆ.
- ಚಿಂಪಾಂಜಿಗಳು ಕಟ್ಟುನಿಟ್ಟಿನ ಸಸ್ಯಹಾರಿಗಳು ಎಂಬುದನ್ನು ಜೇನ್ ೧೯೬೦ರಲ್ಲಿಯೇ ಅಲ್ಲಗಳೆದರು. ಚಿಂಪಾಂಜಿಗಳು ಮಾಂಸ ತಿನ್ನುತ್ತವೆ ಎಂಬ ಸತ್ಯವನ್ನು ಅಷ್ಟೇ ಅಲ್ಲ, ಬರಿ ಹುಳು–ಹುಪ್ಪಟೆ ಮರಿಗಳನ್ನು ಮಾತ್ರವಲ್ಲ, ಕೆಂಪು ಕೊಲಂಬಸ್ ಕೋತಿಗಳನ್ನು ಬೂನ್ ಕೋತಿಯ ಮರಿಗಳಂತಾ ದೊಡ್ಡ ಪ್ರಾಣಿಗಳನ್ನು ವ್ಯವಸ್ಥಿತವಾಗಿ ಗುಂಪುಗಳಲ್ಲಿ ಬೇಟೆಯಾಡಿ ಕೊಂದು ತಿನ್ನುತ್ತವೆ ಎಂಬ ವಿಷಯವನ್ನು ಬಯಲಿಗೆ ತಂದಳು.

- ಇಷ್ಟಲ್ಲದೆ ಯಾವುದೇ ರೀತಿಯ ಉಳಿವಿನ ಪ್ರಶ್ನೆ ಇಲ್ಲದಿದ್ದಾಗಲೂ ಒಂದು ಗುಂಪಿನ ಚಿಂಪಾಂಜಿಗಳು ಮತ್ತೊಂದು ಗುಂಪಿನವುಗಳನ್ನು ವ್ಯವಸ್ಥಿತವಾಗಿ ಕೊಲ್ಲುವುದನ್ನು ಜೇನ್ ಕಂಡಳು. ಬೇಟೆ ಸಲಕರಣೆಗಳನ್ನು ತಯಾರಿಸುವುದು, ಕಲಹ ಕದನ ಇದು ಕೇವಲ ಮನುಷ್ಯರಿಗೆ ಎಂದು ಕೊಂಡಿದ್ದವರಿಗೆ ಈಕೆಯ ಸಂಶೋಧನೆ ವಿಜ್ಞಾನಿಗಳನ್ನು ದಂಗುಬಡಿಸಿತು.
- ೧೯೬೬ ರಲ್ಲಿ ಮನುಷ್ಯರಿಗೆ ತಗಲುವ ಪೋಲಿಯೋ ರೋಗ ಚಿಂಪಾಂಜಿಗಳಿಗೂ ಬರುವುದೆಂದು ಈಕೆಯ ಸಂಶೋಧನೆ ತೋರಿಸಿಕೊಟ್ಟರು.
- ಚಿಂಪಾಂಜಿಗಳು ಬೇರೆಲ್ಲ ಪ್ರಾಣಿಗಳಿಗೆ ಹೋಲಿಸಿದರೆ ಮಾನವನಿಗೆ ಅತಿ ಹತ್ತಿರವಾಗಿದೆ. ಚಿಂಪಾಂಜಿಗಳು ಬಹಳಷ್ಟು ಚುರುಕಿನ ಅನ್ವೇಷಕರು. ಚಿಂಪಾಂಜಿಗಳು ವ್ಯವಸ್ಥಿತವಾಗಿ ಯೋಚಿಸಬಲ್ಲವೆಂದು ಮನುಷ್ಯರು ಮಾಡಿದ ವಸ್ತುಗಳನ್ನು ಬಳಸಬಲ್ಲವು. ತಮಗೆ ಬದುಕುಳಿಯಲು ತೀರ ಅಗತ್ಯವಿಲ್ಲದ್ದನ್ನು ಕಂಡು ಹಿಡಿದಿವೆ. ಆಫ್ರಿಕಾದ ಅನೇಕ ಭಾಗಗಳಲ್ಲಿ ಚಿಂಪಾಂಜಿಗಳು ಹಣ್ಣು ಕಾಯಿಗಳ ಚಿಪ್ಪುಗಳನ್ನು ಹೊಡೆಯಲು ಕಲ್ಲುಗಳನ್ನು ಬಳಸುತ್ತವೆ. ಸಣ್ಣ ರೆಂಬೆಕೊಂಬೆಗಳನ್ನು ಮುಳ್ಳಿನಿಂದ ರಕ್ಷಣೆ ಮಾಡುವ ಪಾದುಕೆಗಳನ್ನು ಸುತ್ತಿಕೊಳ್ಳುತ್ತದೆ ಎಂಬುದನ್ನು ತೋರಿಸಿಕೊಟ್ಟರು.
- ೧೯೭೪ರಲ್ಲಿ ಕಾಸಕಾಲ ಜನಾಂಗದ ಚಿಂಪಾಂಜಿಗಳು ಕೊಹಾಮ ಜನಾಂಗದ ಚಿಂಪಾಂಜಿಗಳ ಮೇಲೆ ಹಗೆ ಕಾರಿ ಆಕ್ರಮಣ ಮಾಡಿದ್ದು ಜೇನ್‌ಗೆ ಆಘಾತ ತಂದಿತ್ತು ಈ ಚಿಂಪಾಂಜಿ ಯೋಧರು ಕಾಡುಗಳಲ್ಲಿ ಸದ್ದಾಗುವುದೆಂದು ತರಗೆಲೆಗಳ ಮೇಲೆ ಕಾಲಿಡದೆ ಕಲ್ಲಿನಿಂದ ಕಲ್ಲಿಗೆ ಹಾರಿ ಗುಟ್ಟಾಗಿ ಬಂದೆರಗುವ ರೀತಿ ಅಚ್ಚರಿ ತಂದಿತ್ತು. ಈ ಚಿಂಪಾಂಜಿ ಯುದ್ಧ ನಾಲ್ಕು ವರ್ಷಗಳ ಕಾಲ ನಡೆದಿತ್ತು. **ಇಂಥ ಚಿಂಪಾಂಜಿಗಳ ಅಂತರ ಜನಾಂಗ ಹಿಂಸೆ**ಯನ್ನು ಹಿಂದೆಂದೂ ಯಾವ ವಿಜ್ಞಾನಿಯೂ ಗಮನಿಸಿರಲಿಲ್ಲ ದಾಖಲಿಸಿರಲಿಲ್ಲ.
- ೧೯೭೫ರಲ್ಲಿ ಜೇನ್‌ಳ ಅಧ್ಯಯನ ಚಿಂಪಾಂಜಿಗಳು ತಮ್ಮದೇ ಚಿಂಪಾಂಜಿ ಮಾಂಸವನ್ನು ತಿನ್ನುತ್ತವೆ ಎಂಬುದನ್ನು ತೋರಿಸಿತು.
- ೧೯೮೭ರಲ್ಲಿ ತಾಯಿ ಸತ್ತ ಮರಿಯನ್ನು ದತ್ತು ತೆಗೆದುಕೊಂಡು ಪಾಲಿಸಿದ್ದನ್ನು ದಾಖಲಿಸಿದ್ದಳು.
- ೧೯೯೪ರಲ್ಲಿ ಚಿಂಪಾಂಜಿಗಳು ತಾವು ಕಲಿತ ತಾಂತ್ರಿಕತೆಯನ್ನು ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ವರ್ಗಾಯಿಸುವುದನ್ನು ಜೇನ್ ಗಮನಿಸಿದ್ದಳು.
- ೧೯೯೫ರಲ್ಲಿ ಚಿಂಪಾಂಜಿಗಳು ಹೊಟ್ಟೆ ನೋವಿನ ನಿವಾರಣೆಗೆ ಔಷಧಿ ಗಿಡಗಳನ್ನು ಜಗಿಯುತ್ತವೆ ಎಂದು ಕೂಡ ಜೇನ್ ಕಂಡುಹಿಡಿದರು.

ಈಕೆಯ ಸಂಶೋಧನೆ ಮೂರು ತಿಂಗಳಿಗೆ ಮುಗಿಯಲಿಲ್ಲ ೪೫ ವರ್ಷಗಳಿಗೆ ವಿಸ್ತರಿಸಿ ಇಂದು ಜಗತ್ತಿನ ಸಸ್ತನಿಗಳನ್ನು ಕುರಿತ ಅತಿ ಧೀರ್ಘವಾದ ಅಧ್ಯಯನವಾಗಿ ತನ್ನದೇ ದಾಖಲೆ ಸ್ಥಾಪಿಸಿದೆ. ಮಾನವರ ನಿಕಟ ಸಂಬಂಧಿಗಳ ಅತಿ ಹತ್ತಿರದ ಒಡನಾಟದಲ್ಲಿ ೪೫ ವರ್ಷಗಳನ್ನು ಕಳೆದಿದ್ದಾರೆ. ಇಂದು ಗೋಂಬೆ ಹೊಳೆಯ ಪ್ರಾಜೆಕ್ಟ್ ಕೇವಲ ಎರಡು ಟೆಂಟುಗಳ ಕ್ಯಾಂಪ್ ಆಗಿರದೆ ಗೋಂಬೆಗಳ ಸಂಶೋಧನೆ ಕೇಂದ್ರವಾಗಿ ಬೆಳೆದಿದೆ. ಜೈರಾ ಬಂಡುಕೋರ ಯೋಧರು ಜೇನ್‌ಳಿಗೆ ಅಪಹರಿಸುವ ಬೆದರಿಕೆಗಳನ್ನು ಇಟ್ಟಿದ್ದರೂ ಸಹ ಜೇನ್ ಗೋಂಬೆ ತಾಣವನ್ನು ಬಿಟ್ಟು ಕದಲಲಿಲ್ಲ. ವಿಶ್ವದಾದ್ಯಂತ ಸುತ್ತುವ ಜೇನ್ ಪ್ರತಿವರ್ಷ ಹತ್ತಾರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಸುಲಭವಾಗಿ ಜನರನ್ನು ತಲುಪುವ ಈಕೆಯ ಪರಿಸರಪ್ರಜ್ಞೆಯನ್ನು ನಿರ್ಮಿಸಲು ದುಡಿಯುತ್ತಿದ್ದಾಳೆ. "ಯಾವ ಪ್ರಾಣಿಯೂ ಬೋನಿನಲ್ಲಿ ಇರಬಾರದೆಂದು ನಾನು ಬಯಸುತ್ತೇನೆ. ಆದರೆ ವೈಜ್ಞಾನಿಕ, ವೈದ್ಯಕೀಯ ಸಂಶೋಧನೆಗಳಿಗೆ ಅಗತ್ಯ ಎನಿಲೆಸಿರುವಾಗ ಪ್ರಯೋಗಶಾಲೆಯಲ್ಲಿ ಅವುಗಳನ್ನು ಎಷ್ಟು ಸಾಧ್ಯವೋ ಅಷ್ಟು ಮಾನವೀಯವಾಗಿ ನೋಡಿಕೊಳ್ಳಬೇಕು.ಉತ್ತಮ ಪರಿಸರವನ್ನು ನೀಡಬೇಕು" ಎನ್ನುತ್ತಾರೆ.

ನ್ಯಾಷನಲ್ ಜಿಯೋಗ್ರಾಫಿ ಸೊಸೈಟಿ ಜೇನ್ ಗುಡಾಲ್ ಶೋಧನೆಯನ್ನು ಕುರಿತು ಒಂದು ದಾಖಲೆ ಚಿತ್ರವನ್ನು ನಿರ್ಮಿಸಿದೆ. "ಇನ್ ದಿ ಶಾಡೋ ಆಫ್ ಮ್ಯಾನ್" ಎಂಬ ಪುಸ್ತಕ ಚಿಂಪಾಂಜಿಗಳನ್ನು ಕುರಿತು ಜನಪ್ರಿಯ ಪುಸ್ತಕವಾಯಿತು. ನಿಸ್ವಾರ್ಥಿಯಾಗಿ ತನ್ನ ಇಡೀ ಬದುಕನ್ನು ಬೇರೆ ಜೀವಿಗಾಗಿ ಮೀಸಲಿಟ್ಟ ಜೇನ್‌ಳ ಬದುಕು ಪ್ರತಿಯೊಬ್ಬರಿಗೂ ಆದರ್ಶ. ಚಿಂಪಾಜಿಗಳ ಕುರಿತಾದ ಈಕೆಯ ಅಧ್ಯಯನ ಮನುಷ್ಯನ ಅಹಂಕಾರ, ಬಂಡತನಕ್ಕೆ ಹಿಡಿದ ಕೈಗನ್ನಡಿಯೆನಿಸುತ್ತದೆ. ಪ್ರಕೃತಿಯ ಮಡಿಲಲ್ಲಿ ಎಲ್ಲರೂ ಸಮಾನರು ಎಂಬುದನ್ನು ತೋರಿಸುತ್ತದೆ.

ಜೇನ್ ಗುಡಾಲ್‌ರ ಅಧ್ಯಯನದ ಕುರಿತಾದ ವಿಶೇಷ ಚಿತ್ರಗಳು:



ಉಲ್ಲೇಖ:

https://www.nationalgeographic.com/magazine/2017/10/becoming-jane-goodall/

https://www.nationalgeographic.com/magazine/1963/08/jane-goodall-original-story-chimpanzees-still-astonishes/

ಕಾಲುಹಾದಿಯ ಕೋಲ್ಮಿಂಚುಗಳು: ಮಹಿಳಾ ವಿಜ್ಞಾನಿಗಳು – ನೇಮಿಚಂದ್ರ

ಅನಿಶ್ಚಿತತೆಯಲ್ಲಿ ಗೋಚರಿಸಿದ ದಾರಿಗಳು

–ಜ್ಯೋತಿ ಮನಪ್ಪನವರ್

ಅನಿಶ್ಚಿತತೆ ಎಂಬ ಪದ ಕೇಳಿದಾಕ್ಷಣ ಮನಸ್ಸಿನಲ್ಲಿ ಏಕೋ, ಏನೋ ನಿರಾಶಾಭಾವ, ಭಯ, ಅಸ್ಥಿರತೆ, ತೊಳಲಾಟ ಇನ್ನು ನಮ್ಮ ಮುಂದೆ ಏನು ಇಲ್ಲ? ಎಂಬ ಇಲ್ಲಗಳ ಅಸ್ಥಿರ ಭಾವಗಳು ನಕಾರವಾಗಿ ಕಣ್ಣ ಕಟ್ಟುತ್ತವೆ. ಈ ನಕಾರಾತ್ಮಕತೆಯ ಕ್ಷಣದಲ್ಲಿ ಸಾಕಾರಗಳ ಚಿಂತನೆಗಳನ್ನು ಬೆಳೆಸಿಕೊಳ್ಳುವುದು ಎಲ್ಲವೂ ಸಾಧ್ಯವೆಂಬ ಮನಸ್ಥಿತಿ ಹೊಂದಿ ಮುಂದೆ ಸಾಗುವುದು. ಏನೇ ಆದರೂ ನಾವು ಸಾಧಿಸುತ್ತೇವೆ. ನಾವು ಬೆಳೆಯುತ್ತೆವೆ ಎಂಬ ಆತ್ಮಸ್ಥೈರ್ಯ ಇಟ್ಟುಕೊಂಡು ಆಲೋಚನೆ ಮಾಡುವುದು ಅಸಾಧಾರಣ ವಿಷಯ. ಇದೇ ಅಲ್ವಾ **'ಧೃಡತೆ'**. ಇದೇ ಮುಂದೆ ತನ್ನ ಮಗ್ಗುಲುಗಳನ್ನು ಬದಲಿಸಿ ಸಂಕಲ್ಪವಾಗಿ, ನಿರ್ಧಾರವಾಗಿ ನಮಗೆ ಧೈರ್ಯ ತುಂಬಿ ಆತ್ಮವಿಶ್ವಾಸ ಬೆಳೆಸುತ್ತದೆ.

ನಮ್ಮೆಲ್ಲರ ನಂಬಿಕೆಯಲ್ಲಿ ನಿತ್ಯ ಕೇಳುವುದು **"ಜೀವನ ನಿಂತ ನೀರಲ್ಲ"** ಇದು ಹರಿಯುವ ಹೊಸ ಧಾರೆ ಸದಾ ಸಾಗುತ್ತಲೇ ಇರುತ್ತದೆ. ಬದುಕು ಯಾವುದೋ ಹೊಸತನಕ್ಕೆ ಮುಖ ಮಾಡಿಕೊಂಡು ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಲು ಇದೇ ಧೃಢತೆಯೇ ಕಾರಣವೇನೋ?

ಕೋವಿಡ್–೧೯ನಂತಹ ಸಮಯದಲ್ಲಿ ಜೀವನಕ್ಕೆ ಒಂದು ಅನಿರೀಕ್ಷಿತ ಅಲ್ಪವಿರಾಮ ಹಾಕಿದಾಗ ನಾವು ಹೇಗಾಗುತ್ತೇವೆ? ಏನಾಗುತ್ತೇವೆ? ಎಂಬುದೇ ಇಲ್ಲಿ ನಾವು ಯೋಚನೆ ಮಾಡುವಂತದ್ದು, ಏಕೆಂದರೆ ನಾವೆಲ್ಲರೂ ಇದನ್ನು ಅನುಭವಿಸಿದ್ದೇವೆ ಮತ್ತು ಅದನ್ನು ಮೀರಿ ಮುನ್ನುಗುತ್ತಿದ್ದೇವೆ. ಆದರೆ ಇಲ್ಲಿ ನಾವು ತಿಳಿಯಬೇಕಾಗಿದ್ದು ಕೋವಿಡ್–೧೯ ಎಂಬ ಅಸ್ಥಿರತೆಯಲ್ಲಿ ನಾವು & ನಮ್ಮ ಸುತ್ತಲಿನವರ ವೈಯುಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಎದೆಗುಂದದೆ ಮುನ್ನಡೆಯಲು ಕಂಡುಕೊಂಡ ದಾರಿಗಳು & ಹಿಂದೆಂದೂ ಯೋಚನೆ ಮಾಡದೆ ಇರುವ ಹಾಗೆ ಯೋಚಿಸಿ, ಆಲೋಚಿಸಿ ತೆಗೆದುಕೊಂಡ ಸಕಾರಾತ್ಮಕ ಮಾರ್ಗಗಳು & ನಿರ್ಧಾರಗಳು ಹಲವಾರು. ಅವುಗಳಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸುತ್ತದೆ.

೧.**ಸಂಬಂಧಗಳು**– ಕೋವಿಡ್–೧೯ ಎಂಬ ರೋಗದ ಭೀತಿ ನಮಗೆ ಅನಿಶ್ಚಿತತೆಯಲ್ಲಿ ಬದುಕಿನ ಸಂಬಂಧಗಳು & ಅವುಗಳ ಮೌಲ್ಯಗಳ ಮಹತ್ವ ತಿಳಿದುಕೊಳ್ಳುವ ಹಾಗೆ ಮಾಡಿದೆ. ಏಕೆಂದರೆ ನಾವೆಲ್ಲರೂ ಆಧುನಿಕತೆಯ ಭ್ರಮಾಲೋಕದಲ್ಲಿ ವಿಹರಿಸುತ್ತಿರುವವರು. ಹಣ ಮತ್ತು ಅಧಿಕಾರ ಇದ್ದರೆ ಜೀವನದಲ್ಲಿ ಎಲ್ಲವೂ ಸಾಧ್ಯ ಮತ್ತು ಇದರ ಮುಂದೆ ಎಲ್ಲವೂ ಶೂನ್ಯ ಎಂಬ ಭಾವನೆಯನ್ನು ನಮ್ಮ ಮನಸ್ಸಿನಲ್ಲಿ ಗಟ್ಟಿಯಾಗಿ ಮನೆ ಮಾಡಿಕೊಳ್ಳಲು ಬಿಟ್ಟವರು ನಾವು. ಆದರೆ ಕೋವಿಡ್–೧೯ ಅಥವಾ ಲಾಕಡೌನ ಸಮಯದಲ್ಲಿ ನಮಗೆ ಹಣ ಮತ್ತು ಅಧಿಕಾರದಿಂದ ಜೀವನದಲ್ಲಿ ನೆಮ್ಮದಿ ಸುಖ–ಶಾಂತಿ ಸಿಗುತ್ತದೆ ಎಂಬುದು ಸುಳ್ಳು. ಅದಕ್ಕಿಂತ ಮಿಗಿಲಾಗಿ ನಾವು ನಮ್ಮ ಮಾನವೀಯ ಸಂಬಂಧಗಳಿಗೆ ಬೆಲೆ ಕೊಡುವುದು ಬಹಳ ಮುಖ್ಯ. ನಮ್ಮ ಜೀವನದಲ್ಲಿ ನಮ್ಮ ಸಂಸ್ಕೃತಿ ಸೂಚಿಸುವಂತೆ ನಮ್ಮ ಹತ್ತಿರದ ಸಂಬಂಧಗಳು

ನಮ್ಮನ್ನು ಅನಿಶ್ಚಿತತೆಯ ಸಂದರ್ಭದಲ್ಲಿ ಸಕಾರಾತ್ಮಕವಾಗಿ ಯೋಚಿಸುವಂತೆ ಮಾಡಿತು. ಜೀವನದಲ್ಲಿ ಹಣ ಮತ್ತು ಅಧಿಕಾರಕ್ಕಿಂತ ಮಾನವೀಯ ಸಂಬಂಧಗಳು ಮುಖ್ಯ. ಅವುಗಳಿಗೆ ನಾವು ಪ್ರಾಮುಖ್ಯತೆ ನೀಡಬೇಕು. ಅವುಗಳನ್ನು ಬಳಸುವ ಮತ್ತು ಬೆಳೆಸುವ ಕಡೆಗೆ ನಮ್ಮ ನಮ್ಮ ಗಮನ ಹರಿಸಬೇಕು ಎಂಬ ದಾರಿಯನ್ನು ಗೋಚರಿಸುವ ಹಾಗೆ ಮಾಡಿದ್ದು ಕೋವಿಡ್–೧೯.

೨.**ಆಹಾರ ಶೈಲಿ**– ಪ್ರಸ್ತುತ ಸನ್ನಿವೇಶದಲ್ಲಿ ನಾವು ಆಹಾರದ ವಿಷಯ ಬಂದಾಗ ಮನೆ ಊಟಕ್ಕಿಂತ ಹೊರಗಿನ ಊಟಕ್ಕೆ ತುಂಬಾ ಸಮಯ & ಹಣ ವ್ಯಯಿಸುತ್ತಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯ. ಆದರೆ ಕೋವಿಡ್–೧೯ ಅಥವಾ ಲಾಕಡೌನ್ ಸಮಯ ನಮಗೆ ಕಲಿಸಿದ ಅತಿ ದೊಡ್ಡ ಪಾಠ ಎಂದರೆ ಮನೆಯಲ್ಲಿ ತಯಾರಿಸಿದ ಆಹಾರವೇ ತುಂಬಾ ಪೌಷ್ಟಿಕತೆಯನ್ನು ಒದಗಿಸುತ್ತದೆ. ನಮ್ಮ ಆರೋಗ್ಯ ಚೆನ್ನಾಗಿ ಇರಲು ಈ ಮನೆಯ ಆಹಾರ ಸಹಾಯ ಮಾಡುತ್ತದೆ ಎಂದು ನಮಗೆ ಮತ್ತೊಮ್ಮೆ, ಮೊಗದೊಮ್ಮೆ ಹೇಳಿಕೊಟ್ಟ ಸಮಯ ಈ ಕೋವಿಡ್–೧೯. ಇಲ್ಲಿ ನಮಗೆ ಗೋಚರಿಸಿದ ದಾರಿ ಎಂದರೆ ಮನೆಯಲ್ಲಿಯೇ ಕಡಿಮೆ ಸಮಯದಲ್ಲಿ ಯಾರ ಸಹಾಯವು ತೆಗೆದುಕೊಳ್ಳದೇ ಹೇಗೆ ಪೌಷ್ಟಿಕ ಆಹಾರ ತಯಾರಿಸಬಹುದು ಮತ್ತು ಆಹಾರ ತಯಾರಿಸುವ ಕೆಲಸದಲ್ಲಿ ತನ್ನ ಜೀವನದ ಮುಕ್ಕಾಲು ಆಯಸ್ಸನ್ನು ಕಳೆಯುವ ತಾಯಿಯ ಸ್ಥಿತಿ & ಮನಸ್ಥಿತಿ ಹೇಗಿರುತ್ತದೆ ಎಂದು ತಿಳಿಸಿದ ಸಮಯ ಈ ಅನಿಶ್ಚಿತತೆಯ ಸಮಯ. ಇಲ್ಲಿ ನಮಗೆ ಗೋಚರಿಸಿದ ಸಕಾರಾತ್ಮಕ ದಾರಿ ಎಂದರೆ ಮನೆಯ ಆಹಾರ ನಮ್ಮ ಜೀವಕ್ಕೆ & ಜೀವನಕ್ಕೆ ಪುಷ್ಟಿ ಕೊಡುವಲ್ಲಿ ಅತಿ ದೊಡ್ಡ ಪಾತ್ರ ವಹಿಸುತ್ತದೆ ಎಂಬುದನ್ನು ತಿಳಿಸಿಕೊಟ್ಟ ಕಾಲ ಈ ಕೋವಿಡ್–೧೯.

ಆರೋಗ್ಯವೇ ಭಾಗ್ಯ– ಅನಿಶ್ಚಿತತೆಯ ಸಮಯದಲ್ಲಿ ನಾವು ಕಂಡುಕೊಂಡ ದಾರಿ ಎಂದರೆ ಜೀವನದಲ್ಲಿ ಎಲ್ಲದಕ್ಕಿಂತ ಮೌಲ್ಯಯುತವಾದುದು ಅದು ನಾವು ಆರೋಗ್ಯವಾಗಿರುವುದು ಮತ್ತು ನಮ್ಮ ಸುತ್ತ ಮುತ್ತ ಇರುವವರು ಆರೋಗ್ಯವಾಗಿರುವುದು. ಆರೋಗ್ಯವೇ ಭಾಗ್ಯ ಎಂಬ ಮಾತಿನ ನಿಜವಾದ ಬೆಲೆ ಕಂಡುಕೊಳ್ಳಲು ಸಾಧ್ಯ ಮಾಡಿದ್ದು ಈ ಕೋವಿಡ್೧೯ ಪರಿಸ್ಥಿತಿ. ಇದಕ್ಕೂ ಮುಖ್ಯವಾಗಿ ನಾವು ನಮ್ಮ ಆರೋಗ್ಯವನ್ನು ಸುಸ್ಥಿರವಾಗಿ ಇಡಲು ಯಾವೆಲ್ಲ ಮನೆಮದ್ದುಗಳನ್ನು ತಯಾರಿಸಲು ಸಾಧ್ಯ ಮತ್ತು ಆಸ್ಪತ್ರೆಗೆ ಹೋಗದೇ ನಮ್ಮ ಆರೋಗ್ಯವನ್ನು ಹೇಗೆ ಚೆನ್ನಾಗಿ ಇಟ್ಟುಕೊಳ್ಳಬಹುದು ಎಂದು ಹೇಳಿಕೊಟ್ಟ ಸಮಯ. ಅಷ್ಟೇ ಅಲ್ಲದೇ ನಮ್ಮ ಸುತ್ತಮುತ್ತ ಇರುವ ಔಷಧಿ ಸಸ್ಯಗಳು, ಅವುಗಳ ಬಳಕೆ ಮತ್ತು ಬೆಳೆಸುವ ಸಾಮಾಜಿಕ ಜವಾಬ್ದಾರಿಯನ್ನು ಹೇಳಿಕೊಟ್ಟದ್ದು ಇದೇ ಕೋವಿಡ್–೧೯ ಎಂಬ ಅನಿಶ್ಚಿತತೆಯ ಪರಿಸ್ಥಿತಿ.

ಶಿಕ್ಷಣ– ಇಲ್ಲಿಯೂ ಕೂಡ ನಾವು ಅನೇಕ ಹೊಸ ದಾರಿಗಳನ್ನು ಕಂಡುಕೊಳ್ಳಲು ಸಹಾಯ ಮಾಡಿದ್ದು ಈ ಕೋವಿಡ್–೧೯ ಎಂಬ ಅನಿಶ್ಚಿತತೆ. ನಮ್ಮ ದೇಶದಲ್ಲಿ, ನಮ್ಮ ಕರ್ನಾಟಕದಲ್ಲಿ ಅದರಲ್ಲೂ ನಮ್ಮ ಗ್ರಾಮೀಣ ಭಾಗದ ಜನತೆಗೆ ಆನಲೈನ್‌ನ ಬಳಕೆಯನ್ನು ಮಾಡುವುದನ್ನು ಹೇಳಿಕೊಟ್ಟ ಸ್ಥಿತಿ ಎಂದರೆ ತಪ್ಪಾಗಲಾರದು. ನಮ್ಮ ಮಕ್ಕಳು, ಶಿಕ್ಷಕರು, ಪಾಲಕರು, ಪೋಷಕರು ಆಧುನಿಕ ಜಗತ್ತಿಗೆ ತೆರೆದುಕೊಳ್ಳಲು ಹೇಳಿಕೊಟ್ಟ ಸುಸಂದರ್ಭ ಎಂದು ಹೇಳಬಹುದು. ಈ ಅನಿಶ್ಚಿತತೆಯ ಸಂದರ್ಭದಲ್ಲಿ ಶಿಕ್ಷಣದ ಮಹತ್ವ, ಶಾಲೆಯ ಮಹತ್ವ, ಶಾಲೆ ಇಲ್ಲದೇ ಮಕ್ಕಳು ಕಲಿಕೆಯಲ್ಲಿ ತೊಡಗುವಂತೆ ಹೇಗೆ ಮಾಡುವುದು ಎಂಬುದನ್ನು ತಿಳಿಸಿ ಕೊಟ್ಟಿತು. ಶಿಕ್ಷಕರೆ ಮಕ್ಕಳ ಬಳಿಗೆ ಹೋಗಿ ಕಲಿಸುವಂತೆ ಮಾಡಿದ್ದು ಮತ್ತು ಈ ತರಹದ ಅನೇಕ ಮಾರ್ಗಗಳನ್ನು ಅನ್ವೇಷಿಸಲು ಹೇಳಿ ಕೊಟ್ಟಿದ್ದು ಈ ಕೋವಿಡ್–೧೯ ಎಂಬ ಅನಿಶ್ಚಿತತೆಯ ಪರಿಸ್ಥಿತಿ.

ಒಟ್ಟಾಗಿ ನೋಡುವುದಾದರೆ ಅನಿಶ್ಚಿತತೆಯಲ್ಲೂ ಸುಲಲಿತವಾಗಿ, ಸುಗಮವಾಗಿ ಜೀವನ ನಡೆಸಲು ದಾರಿಗಳಿರುತ್ತವೆ. ಅದನ್ನು ನೋಡುವತ್ತ ನಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕು ಮತ್ತು ಆ ಕಡೆಗೆ ನಮ್ಮ ಆಲೋಚನೆಗಳನ್ನು ಕೇಂದ್ರೀಕರಿಸಬೇಕು ಎಂದು ಹೇಳಿ ಕೊಟ್ಟಿದ್ದು ಈ ಕೋವಿಡ್–೧೯ ಎಂಬ ಅನಿಶ್ಚಿತತೆಯ ಪರಿಸ್ಥಿತಿ.

ನಾವು ಬಾಲ್ಯ ಅನುಭವಿಸಬೇಕು... ನಮಗೆ ಹಕ್ಕಯಗಳಿವೆಯೇ?

– ಡಾ॥ ಶೋಭನಾ

ಕೋವಿಡ್ –೧೯ರ ಕಾರಣದಿಂದ ಕೆಲವೊಂದು ಅಪರೂಪವೆನ್ನಬಹುದಾದ ಕಟು ಸತ್ಯದ ಸಂಗತಿಗಳು ನಮ್ಮ ಅನುಭವಕ್ಕೆ ಬರತೊಡಗಿವೆ. ನಮ್ಮ ಸುತ್ತಾಟಗಳು ಕೂಡ ತನ್ನ ಸಹಜತೆಯನ್ನು ಕಳೆದುಕೊಂಡಿವೆ ಸಾಮೂಹಿಕವಾಗಿ, ಸಮುದಾಯದೊಟ್ಟಿಗೆ ಬೆರೆಯದ ಕಾರಣಕ್ಕೆ ಇರಬಹುದೇನೋ? ಹಾಗೆ ಒಂದು ಸಂದರ್ಭ ನಮ್ಮ ಸ್ನೇಹಿತರ ಮನೆ ನಿರ್ಮಾಣವನ್ನು ವೀಕ್ಷಣೆ ಮಾಡಲು ಹೋದಾಗ ನನ್ನ ಅನುಭವಕ್ಕೆ ಬಂದ ವಿಚಾರವಿದು, ಆ ಕಟ್ಟಡ ನಿರ್ಮಾಣ ಕೆಲಸದಲ್ಲಿ ೬ನೇ ತರಗತಿ ಓದುವ ಮಗುವೊಂದು ತೊಡಗಿದ್ದ, ಅದು ನಾನು ಶಾಲೆ ಬೇಟಿ ಮಾಡುತ್ತಿದ್ದ ಶಾಲೆಯಲ್ಲಿ ಓದುತ್ತಿರುವ ಮಗು ಅವನು, ಏನೋ ಸ್ಕೂಲಿಗೆ ಹೋಗಲ್ವ ಎಂದು ಕೇಳಿದಾಗ, ಅವನು ಶಾಲೆ ಬಂದ್ ಆಗ್ಯಾವ್ರಿ ಎಂದ, ಶಾಲೆ ಇಲ್ಲ ಎಂದ ತಕ್ಷಣ ಕೆಲಸಕ್ಕೆ ಬಂದು ಬಿಡೋದಾ ಎಂದೆ, ಅದಕ್ಕೆ ನಮ್ಮ ಅಣ್ಣ ಕೆಲಸಕ್ಕೆ ಬರ್ತಾನರಿ ಆತನ ಜೊತೆ ನಮ್ಮ ಅಪ್ಪ ಅವ್ವ ನನ್ನೂ ಕಳಿಸ್ಯಾರ. ಮಾತು ಮತ್ತು ವಿಷಯ ಎರಡು ಪೂರ್ಣವಾಗಲಿಲ್ಲ, ಅಷ್ಟು ಸೂಕ್ತವಾದ ಉತ್ತರವಾಗಲಿ ಮಾತು ಮುಂದುವರಿಸುವ ಧೈರ್ಯವಾಗಲಿ ನನ್ನ ಬಳಿ ಇರಲಿಲ್ಲ.

ಒಂದು ದಿನ ಶಾಲೆ ಬೇಟಿಗೆಂದು ಹೋದ ಸಂದರ್ಭದಲ್ಲಿ, ವಿದ್ಯಾಗಮವನ್ನು ಪರಿಣಾಮಕಾರಿಯಾಗಿ ಮಾಡುವ ಕುರಿತು ಶಿಕ್ಷಕರೊಟ್ಟಿಗೆ ಚರ್ಚೆ ಮಾಡುತ್ತಿದ್ದೆ, ಮುಖ್ಯ ಶಿಕ್ಷಕರು ತುಂಬಾ ಆಸಕ್ತಿ ಮತ್ತು ಉತ್ಸಾಹದಿಂದ ಎಲ್ಲ ಶಿಕ್ಷಕರನ್ನು ಒಂದು ಕೊಠಡಿಯಲ್ಲಿ ಸೇರಿಸಿದರು, ಇರುವ ಸಮಯ ಮತ್ತು ಸಂದರ್ಭಕ್ಕೆ ಹೊಂದಾಣಿಕೆ ಯಾಗುವಂತೆ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಕುರಿತು ಚರ್ಚೆ ಮಾಡಲಾಯಿತು. ಶಿಕ್ಷಕರು ಅದಕ್ಕೆ ಸರಿ ಎನ್ನುವಂತೆ ಪ್ರತಿಕ್ರಿಯೆ ನೀಡಿದರು, ಚರ್ಚೆ ನೆಡೆದ ನಂತರ ಸಹಜವಾಗಿಯೇ ಶಿಕ್ಷಕಿಯರೊಟ್ಟಿಗೆ ಮಾತಿಗಿಳಿದೆ, ಆ ಶಾಲೆಗೆ ಹೋಗಲು ಮುಖ್ಯ ರಸ್ತೆಯಿಂದ ೧ ಕಿ.ಮೀ. ಒಳರಸ್ತೆಯಲ್ಲಿ ನೆಡೆದು ಹೋಗಬೇಕು, ಹೋಗುವಾಗ ತುಂಬಾ ಮಕ್ಕಳನ್ನು ಒಂದು ಚಿಕ್ಕ ಗಾಡಿ ಕರೆದೊಯ್ಯುತ್ತಿತ್ತು, ಆ ವಿಷಯ ಕುರಿತು ಶಿಕ್ಷಕರನ್ನು ಕೇಳಿದೆ ಅದಕ್ಕೆ ಅವರಿಂದ ಬಂದ ಉತ್ತರ ಅವರೆಲ್ಲ ನಮ್ಮ ಶಾಲೆಯ ಮಕ್ಕಳೆ ಮೇಡಮ್, ಅವರು ಬೆಳಿಗ್ಗೆಯಿಂದ ಸಂಜೆವರೆಗೆ ಗದ್ದೆ ಕೆಲಸಕ್ಕೆ ಹೋಗುತ್ತಾರೆ. ಹಾಗಾದರೆ ನಾನು ಇಷ್ಟೊತ್ತು ಶಿಕ್ಷಕರೊಟ್ಟಿಗೆ ಚರ್ಚೆಮಾಡಿದ್ದೇಕೆ? ಅದರ ಹಿನ್ನೆಲೆ ಏನು? ನನಗೆ ಏನೂ ಪ್ರತಿಕ್ರಿಯೆ ನೀಡಲಸಾಧ್ಯವಾದ ಸನ್ನಿವೇಶ ಅದಾಗಿತ್ತು.

ನಗರದಿಂದ ಆಚೆ ಪಕ್ಕದ ಹಳ್ಳಿಗೆ ಹೊರಟಿದ್ದಾಗ ೬–೭ ತರಗತಿಯಲ್ಲಿ ಓದುತ್ತಿರುವ ಸರಾಸರಿ ವಯೋಮಾನದ ಹಣ್ಣುಮಗುವೊಂದು ನಾಲ್ಕೈದು ದನಗಳನ್ನು ಕಾಯತ್ತಿದ್ದ ಸನ್ನಿವೇಶ ಕಣ್ಣಿಗೆ ಬಿತ್ತು, ತಕ್ಷಣ ನನಗೆ ನನ್ನ ಅಮ್ಮ ನೆನೆಪಿಗೆ ಬಂದರು, ಅವರು ತುಂಬಾ ಜಾಣೆ ಅದು ಲೆಕ್ಕದ ವಿಷಯದಲ್ಲಿ ನಾವು ಪುಸ್ತಕ ಹಾಳೆ ತೆಗದುಕೊಳ್ಳುವಷ್ಟರಲ್ಲಿ, ಇಷ್ಟು ಆಳಿಗೆ, ಇಷ್ಟು ದಿನಕ್ಕೆ, ಇಷ್ಟು ಕೂಲಿ ಅವರಿಗೆ ಕೊಡಬೇಕು ಎಂದು ಪಟಪಟ ಹೇಳುತ್ತಿದ್ದರು, ಖಾತ್ರಿಪಡಿಸಕೊಳ್ಳಲು ನಮ್ಮನ್ನು ಕೇಳುತ್ತಿದ್ದರು, ಲೆಕ್ಕ ಸರಿಯಾಗೇ ಇರುತ್ತಿತ್ತು. ಇದು ಅವರೊಬ್ಬರಿಗೆ ಸಂಬಂದಿಸಿದ ಉದಾಹರಣೆಯಲ್ಲಿ ತುಂಬಾ

ಹೆಣ್ಣುಮಕ್ಕಳು ಹೀಗೆ. ಮತ್ತೆ ನೀನು ಶಾಲೆಗೆ ಯಾಕೆ ಹೋಗಲಿಲ್ಲ ಎಂದಾಗ? ಹೋದೆ, ಮೂರನೆ ತರಗತಿವರೆಗೆ, ನಮ್ಮ ಅಪ್ಪ ಮತ್ತು ಚಿಕ್ಕಪ್ಪ ಬೇರೆಬೇರೆಯಾದರು ಆಗ ನಮ್ಮ ಪಾಲಿಗೆ ಎರಡೆತ್ತು ಬಂದವು ಅವುಗಳನ್ನು ಮೇಯಿಸಲು ಯಾರು ಇರಲಿಲ್ಲ ಅದಕ್ಕೆ ಶಾಲೆ ಬಿಡಿಸಿದ ನಮ್ಮಪ್ಪ. ಮಾಸ್ತರ್ ಎಷ್ಟು ಹೇಳಿದರು ನಿಮ್ಮ ಮಗಳು ಜಾಣೆ ಅದಾಳ ಶಾಲಿ ಬಿಡಿಸಬೇಡಿ ಎಂದು ಆದರೆ ಏನು ಮಾಡೋದು? ಆಗಲೂ ನನ್ನ ಉತ್ತರ ಮೌನವೇ ಆಗಿತ್ತು.

ಇತ್ತಿಚಿಗೆ ಮಕ್ಕಳ ದಿನಾಚರಣೆಯನ್ನು ಮಕ್ಕಳ ಹಕ್ಕುಗಳನ್ನು ಕುರಿತಾಗಿ ಮಾಡಿದ್ದೆವು, ಆ ಸಂದರ್ಭದಲ್ಲಿ ನಾನು ಮಕ್ಕಳ ಹಕ್ಕುಗಳನ್ನು ಕುರಿತಾಗಿ ಪರಿಚ್ಛೇದ ೩೨ ಓದಿದ್ದೆ ಅದರಲ್ಲಿ "ಮಕ್ಕಳ ಮೇಲೆ ಆರ್ಥಿಕ ಶೋಷಣೆ/ ಬಾಲಕಾರ್ಮಿಕರನ್ನಾಗಿಸುವುದನ್ನು ನಿಲ್ಲಿಸಬೇಕು" ಎಂದಿದೆ. ಕಾನೂನುಗಳು ಇರದ ಕಾಲಕ್ಕೆ ಮಕ್ಕಳು ಅಂಥದ್ದೇ ವ್ಯವಸ್ಥೆಯಲ್ಲಿ ಬದುಕುವ ಅನಿವಾರ್ಯತೆ ಇತ್ತು, ಆದರೆ ಕಾನೂನು ಬಂದ ಮೇಲೆ ಏನಾಗಿದೆ? ಅಂಕಿ ಸಂಖ್ಯೆಯಲ್ಲಿ ಸ್ವಲ್ಪ ವಾತ್ಯಾಸವಾಗಿರಬಹುದಷ್ಟೆ, ತನ್ನ ರೂಪ ಬದಲಾಯಿಸದೆ ಸಮಯದ ಜೊತೆ ಸಮಸ್ಯೆಯು ಬಂದಿದೆ, ಪ್ರಕೃತಿಯಲ್ಲಾದ ಒಂದು ಸಣ್ಣ ವೈಪರೀತ್ಯವನ್ನು ಎದುರಿಸಲಾಗದಷ್ಟು ಆರ್ಥಿಕ ಆಭದ್ರತೆ ನಮ್ಮನ್ನು ಕಾಡುತ್ತಿದೆ. ಮಕ್ಕಳಿಗೂ–ಹಕ್ಕುಗಳ ನಡುವೆ ಒಂದು ದೊಡ್ಡ ಅಂತರ ಕಾಣುತ್ತಿದೆ, ಸಕ್ರೀಯವಗಿ ಜಾರಿಯಾದ ಮೇಲೆಯೂ ಬದಲಾವಣೆಗೆ ಹೋರಾಟ ಮಾಡಬೇಕಿದೆ, ಆ ಅಂತರವನ್ನು ತುಂಬ ಬೇಕಾದವರು ಸಂಬಂಧಪಟ್ಟಂಥ ನಾವೆಲ್ಲರೇ ಅಲ್ಲವೆ?, ಯೋಚಿಸಿದಾಗ ಸಮೂದಾಯವನ್ನೊಳಗೊಂಡ ಶಾಲೆ ಎನ್ನುವ ಬಲಿಷ್ಟ ವ್ಯವಸ್ಥೆಯ ಮೂಲಕ ಇದು ಸಾದ್ಯವಿದೆ.

Muzammil

ಮಾವೇಲಿಯುಂ ಸಾಂತಾ ಅಪ್ಪೂಪ್ಪನುಂ

– ಉಷಾ ಅ್ಯಂಬ್ರೋಸ್

ಮಾವೇಲಿಯುಂ ಸಾಂತಾ ಅಪ್ಪೂಪ್ಪನುಂ
ದೀಪವುಂ ಮೆಳುಗು ತಿರಿಯುಂ
ಪೂಕ್ಕಳವುಂ ಕ್ರಿಸ್ಮಸ್ ಟ್ರೀಯುಂ

ಮಹಾಬಲಿಯೂ ಸಾಂತಾ ಕ್ಲಾಸನೂ
ದೀಪವೂ ಮೋಂಬತ್ತಿಯೂ

ಹೂಗಳ ರಂಗವಲ್ಲಿಯೂ ಕ್ರಿಸ್‌ಮಸ್ ಮರವೂಅರಿಲ್ ಎಮಿಲಿ ನಿಹಾರಿಕಾ ನಂದ ಎಲ್ಲ ಕೂಡಿ ಅಂಗಳದಲ್ಲಿ ಗದ್ದಲ ಎಬ್ಬಿಸಿದ್ದರು; ಕ್ರಿಸ್ ಮಸ್ ಗೌಜಿ. ವೆರಾಂಡದಲ್ಲಿ ಎಲ್ಲ ಕೂಡಿ ಕ್ರಿಸ್‌ಮಸ್ ಟ್ರೀ ಕೂರಿಸಿ ಅಲಂಕಾರ ಮಾಡುತ್ತಿದ್ದರು. ಕೃತಕ ಕ್ರಿಸ್ಮಸ್ ಮರ. ರಟ್ಟಿನ ಪೆಟ್ಟಿಗೆಯಿಂದ ಜೋಡಿಸಿಟ್ಟ ರೆಂಬೆಗಳನ್ನು ಹೊರಗೆಳೆದು ಬಿಡಿಸಿ ಜೋಡಿಸಿದರೆ ಆಯಿತು. ಪುಟ್ಟ ಪುಟ್ಟ ಮಿರುಗುವ ನಕ್ಷತ್ರಗಳು, ಬಣ್ಣ ಬಣ್ಣದ ಗಂಟೆಗಳು, ಬೇರೆ ಬೇರೆ ಆಕಾರದ ಕೆಂಪು ಬಣ್ಣದ ರಿಬ್ಬನ್ ಮತ್ತು ಬೋಗಳಿಂದ ಅಲಂಕರಿಸಿದ ಮನಸೆಳೆಯುವ ಅಲಂಕಾರದ ಸಾಮಗ್ರಿಗಳನ್ನು ಕಟ್ಟಿ ತೂಗಿಸುವುದು..ಅಲ್ಲಿಗೆ ಅಲಂಕಾರ ಮುಗಿಯುತ್ತದೆ. ಡಿಸೆಂಬರ್ ೨೪ರ ರಾತ್ರಿ ಹನ್ನೆರಡು ಆಗುವುದನ್ನೇ ಕಾಯುವ ಮಕ್ಕಳು ಓಡಿ ಹೋಗಿ ನೋಡಿದರೆ ಕ್ರಿಸ್‌ಮಸ್ ಮರದ ಬುಡದಲ್ಲಿ ಉಡುಗೊರೆಗಳ ರಾಶಿ! ನಿಹಾರಿಕಾ ಹೇಳುತ್ತಾಳೆ, ನಾನಂತೂ ಎಚ್ಚರವೇ ಇದ್ದೆ, ಓಹ್! ಝಿಲ್ ಝಿಲ್ ಎನ್ನುವ ಸದ್ದು! ನನ್ನ ಉಡುಗೊರೆ ಪೊಟ್ಟಣ ಇಟ್ಟು ಮೆಲ್ಲಗೆ ಹೊರಟು ಹೋದ ಸಾಂತಾ ಅಪ್ಪೂಪ್ಪನ ಕಾಲ ಸಪ್ಪಳವೂ..ಹೋಗಿ ನೋಡುವಷ್ಟರಲ್ಲಿ ಅವನು ಅದಾಗಲೇ ಹೊರಟು ಹೋಗಿ ಆಗಿತ್ತು ...ಹಾಗೆ ಹೇಳುವಾಗ ಅವಳ ಮಿನುಗುವ ಪುಟ್ಟ ಕಣ್ಣುಗಳಲ್ಲಿ ಎಂಥ ಅಚ್ಚರಿ!

ಮಕ್ಕಳ ಸಂಭ್ರಮ ಗೌಜಿ ನೋಡಿದಾಗ ಮನಸ್ಸು ಐವತ್ತು ಚಿಲ್ಲರೆ ವರ್ಷಗಳಿಗೆ ಹಿಂದಕ್ಕೆ ನನ್ನ ಬಾಲ್ಯದ ದಿನಗಳಿಗೆ ಓಡುತ್ತದೆ. ಕಾಫಿ ತೋಟದ ಕಾಲು ದಾರಿಗಳಲ್ಲಿ ಗ್ಯಾಸ್ ಲೈಟ್ ಹೊತ್ತ ಮೈಕೆಲ್ ಮಾಮ ಹೊಟ್ಟೆ ಕುಣಿಸುತ್ತಾ ಅಡ್ಡಾದಿಡ್ಡಿ ಹೆಜ್ಜೆ ಹಾಕುತ್ತಿದ್ದರೆ ಹುಡುಗರ ಗುಂಪಿನ ಚಂದದ ಕುಣಿತಕ್ಕೆ ಸಿಲ್ವಾನ ಅಣ್ಣನದೇ ನಾಯಕತ್ವ. ಆಗೆಲ್ಲ ಸೆಗಣಿ ಬಳಿದ ಅಂಗಳ. ಇವರ ಗುಂಪಿನ ಕುಣಿತಕ್ಕೆ ಸೆಗಣಿ ನೆಲದ ಚಕ್ಕಳ ಏಳುತ್ತಿತ್ತು. ಛಳಿ ಛಳಿ ಮತ್ತು ಅರೆಗತ್ತಲು. ಏರುತಗ್ಗಿನ ಕಲ್ಲು ಮಣ್ಣಿನ ಕಾಲು ಹಾದಿಯಲ್ಲಿ ಎದ್ದು ಬಿದ್ದು ನಿದ್ದೆಕಣ್ಣು ಉಜ್ಜಿಕೊಂಡು ಕ್ರಿಸ್‌ಮಸ್ ರಾತ್ರಿ ಮನೆಮನೆಗೆ ರಾಗವಾಗಿ ಕೆ–ರೋಲ್ ಹಾಡಿಕೊಂಡು ಹೋಗುತ್ತಿದ್ದೆವು. ಎಲ್ಲ ಮನೆಗಳಲ್ಲೂ ಆಗ ಮನೆಗಳಲ್ಲೇ ತಯಾರಿಸಿದ ರುಚಿರುಚಿಯಾದ ಕ್ರಿಸ್‌ಮಸ್ ಸಿಹಿ ತಿಂಡಿಗಳು. ಮನೆಗಳ ಮುಂದೆ ಕೈಯಲ್ಲೇ ತಯಾರಿಸಿದ ದೊಡ್ಡ ದೊಡ್ಡ ಸ್ಟಾರ್‌ಗಳು. ಬಿದಿರಿನಿಂದ ನಕ್ಷತ್ರಗಳ ಚೌಕಟ್ಟು ತಯಾರಿಸಿ, ಅದಕ್ಕೆ ಬಣ್ಣ ಬಣ್ಣದ ತೆಳು ಕಾಗದವನ್ನು ಹಚ್ಚಿ ತಯಾರಿಸಿದ ಸರಳ ಸುಂದರವಾದ ದೊಡ್ಡ ದೊಡ್ಡ ನಕ್ಷತ್ರಗಳು. ಮನೆಯ ಸೂರಿಗೋ ಮನೆ ಮುಂದಿನ ಎತ್ತರದ ಮರದ ಕೊಂಬೆಗಳಿಗೋ ತೂಗುಬಿಟ್ಟ ಈ ನಕ್ಷತ್ರಗಳ ಒಳಗಿನಿಂದ ಮಿಣುಕು ಬೆಳಕು ಸೂಸುವುದೊಂದು ಕೌತುಕ. ನಮ್ಮ ಅಪ್ಪನಂತೂ ಕುಶಲತೆಯಿಂದ ನಕ್ಷತ್ರ

ತಯಾರಿ ಮಾಡುತ್ತಿದ್ದರು. ಸೀಮೆ ಎಣ್ಣೆಯ ಪುಟ್ಟ ಬುಡ್ಡಿದೀಪವನ್ನು ಹುಶಾರಾಗಿ ಅದರೊಳಗೆ ಕೂರಿಸುತ್ತಿದ್ದರು. ಮಕ್ಕಳೆಲ್ಲ ಸುತ್ತಲೂ ಕೂತು ಅಪ್ಪ ಸ್ಟಾರ್ ಮಾಡುವುದನ್ನು ನೋಡುತ್ತಿದ್ದೆವು. ಈಗ ನೆನೆಸಿಕೊಂಡರೂ ನನಗೆ ಅದೊಂದು ಅಚ್ಚರಿಯೇ. ಕಷ್ಟ ಕೊರತೆಗಳ ನಡುವೆಯೂ ಈಗಿನ ಅನುಕೂಲಗಳೆಲ್ಲ ಇಲ್ಲದ ಆಗಿನ ದಿನಗಳ ಕ್ರಿಸ್‌ಮಸ್ ಕಾಲದ ಖುಷಿಯೇ ಬೇರೆ. ಈಗಿನಂತೆ ಎಲ್ಲ ಕಡೆ ಕರೆಂಟ್ ಇಲ್ಲದ ಕಾಲವಾಗಿತ್ತು ಅದು. ಈಗ ಮಾಲ್‌ಗಳಲ್ಲಿ ತರತರದ ಚಿಕ್ಕದಾಗಿ ಮಡಿಚಿಟ್ಟ ಬಿಡಿಸಿದರೆ ದೊಡ್ಡದಾಗಿ ಅರಳುವ ಬಣ್ಣಬಣ್ಣದ ವಿವಿಧ ವಿನ್ಯಾಸದ ಸ್ಟಾರ್‌ಗಳು ಸಿಗುತ್ತವೆ; ಕೈಯಲ್ಲಿ ಹಣ ಮಾತ್ರ ಇರಬೇಕಷ್ಟೆ. ಬಲ್ಬ್ ಸಿಕ್ಕಿಸಿ ಲೈಟ್ ಹೊತ್ತಿಸುವುದಂತೂ ಸುಲಭಾತಿ ಸುಲಭ. ಈ ನಕ್ಷತ್ರಗಳಿಗೆ ಹಗಲಿನಲ್ಲಿ ಒಂದು ಬಣ್ಣವಾದರೆ ರಾತ್ರಿಗಳಲ್ಲಿ ಬೇರೆಯದೇ.

ಕೊಡಗಿನ ಸಿದ್ದಾಪುರ ಎಂಬ ಪುಟ್ಟ ಪಟ್ಟಣದಲ್ಲಿ ನಾನು ಶಾಲೆ ಕಲಿಯುವಾಗ ಇಲ್ಲಿ ನೆಲಸಿದ್ದ ಹಲವು ಕೇರಳಿಗರ ಮನೆಯ ಮುಂದಿನಿಂದ ಹಾದು ನಡೆದುಕೊಂಡು ಶಾಲೆಗೆ ಹೋಗಬೇಕಾಗಿತ್ತು. ಆಗಲೆಲ್ಲ ಓಣಂ ಬಂತೆಂದರೆ ನಮಗೆಲ್ಲ ಖುಷಿ. ಆಗಸ್ಟ್ ತಿಂಗಳ ಕೊನೆ ಅಥವಾ ಸೆಪ್ಟೆಂಬರ್ ಇನ್ನೂ ಮಳೆ ನಿಲ್ಲದೆ ಹೊಯ್ಯುವ ಕಾಲವಾಗಿರುತ್ತಿತ್ತು ಅದು. ಮನೆಗಳ ಮುಂದೆ ಮಿರುಗುವ ಕಪ್ಪುಬಣ್ಣದ ನುಣ್ಣಗಿನ ಅಂಗಳ ವನ್ನು ದಿನಗಟ್ಟಲೆ ಸಾರಿಸಿ ಮನೆಯ ಹೆಣ್ಣುಮಕ್ಕಳು ಸಿದ್ಧಪಡಿಸಿರುತ್ತಿದ್ದರು. ಹೀಗೆ ಸಾರಿಸಿದ ಅಂಗಳದ ಮೇಲೆ ಎಲ್ಲ ಬಗೆಯ ಬಣ್ಣಬಣ್ಣದ ಹೂವುಗಳನ್ನು ಬಳಸಿ 'ಪೂಕ್ಕಳಂ' ರಚಿಸುತ್ತಿದರು. ಮಳೆಗಾಲದಲ್ಲಿ ಮಾತ್ರ ಬಿಡುವ ಹಲವು ಬಣ್ಣಗಳ ಹೂವು ಡೇಲಿಯಾ, ಸೇವಂತಿಗೆ, ಕನಕಾಂಬರ, ಗೊರಟೆ, ತುಂಬೆ ಮತ್ತು ಬೇರೆ ಬೇರೆ ವಿನ್ಯಾಸ ಆಕೃತಿಗಳ ಎಲೆಗಳನ್ನು ಜೋಡಿಸಿ ಹಲವು ವೃತ್ತಗಳ ಮೇಲೆ ವೃತ್ತ ಸುತ್ತಿ ಸುಂದರವಾದ ರಂಗವಲ್ಲಿ ರಚಿಸುತ್ತಿದ್ದರು. ಇದು ನಮ್ಮ ಬಾಲ್ಯದ ನೆನಪುಗಳಲ್ಲಿ ಅಚ್ಚಳಿಯದೆ ಸೇರಿಹೋಗಿದೆ. ಮನೆಯಲ್ಲಿ ಆಚರಿಸುತ್ತಿದ್ದ ಕ್ರಿಸ್‌ಮಸ್‌ಗೂ ಗೆಳೆಯರ ಮನೆಯ ಓಣಂ ಹಬ್ಬಕ್ಕೂ ನಮಗೆ ಅಂತಹ ಒಂದು ನಂಟು.

ಡೊಳ್ಳುಹೊಟ್ಟೆ ಕುಣಿಸುತ್ತಾ, ಬೆಳ್ಳಿ ಮೀಸೆ ಗಡ್ಡ ನೀವುತ್ತ, ಕೆಂಪು ಬಟ್ಟೆ ತೊಟ್ಟು ಸಿಹಿ ತಿಂಡಿ ಉಡುಗೊರೆಗಳ ಜೋಳಿಗೆ ಬಗಲಲ್ಲಿ ಹೊತ್ತ ಸಾಂತಾ.. ನನ್ನ ಮಗಳ ಚಿಕ್ಕಪ್ಪನ ಮನೆಯ ಈ ಅಂಗಳದಲ್ಲಿ ಡಿಸೆಂಬರ್‌ನಲ್ಲಿ ಮಕ್ಕಳು ಕ್ರಿಸ್ಮಸ್ ಟ್ರೀ ಇಟ್ಟು ಸ್ಟಾರ್ ತೂಗುಬಿಟ್ಟು ಕಾಯುತ್ತಾರೆ ಸಾಂತಾ ಕ್ಲಾಸ್‌ಗಾಗಿ.. ಸೆಪ್ಟೆಂಬರ್ ತಿಂಗಳಿನಲ್ಲಿ ಅಂಗಳದಲ್ಲಿ ಹೂದಳಗಳಿಂದ ಪೂಕ್ಕಳಂ ರಚಿಸಿ ಮಾವೇಲಿಗಾಗಿ... ಬಣ್ಣಬಣ್ಣದ ಉಡುಗೆ ತೊಟ್ಟು ತುದಿ ಬಾಗಿದ ಮರದ ಮೆಟ್ಟು ಮೆಟ್ಟಿಕೊಂಡು 'ಓಣಂ' ದಿನದಂದು ಅಡಿಕೆ ಹಾಳೆಯ ಕೊಡೆ ಹಿಡಿದು ದೊಡ್ಡ ಮೀಸೆಯ ಮಾವೇಲಿ ಬರುತ್ತಾನೆ. ಊರ ಜನರೆಲ್ಲ ಓಣಂ ಪಾಟ್ಟು, ಕೈಕೊಟ್ಟಿ ಕಳಿ ಹಾಡು ಹಾಡಿ ಖುಷಿ ಪಡುತ್ತಾರೆ. ಹತ್ತು ದಿವಸಗಳ ಕಾಲ ಮನೆಮನೆಯ ಅಂಗಳದಲ್ಲಿ ಬಣ್ಣ ಬಣ್ಣದ ವಿವಿಧ ಬಗೆಯ ಹೂಗಳಿಂದ 'ಪೂಕ್ಕಳಂ' ಹೂವುಗಳ ರಂಗವಲ್ಲಿ ರಚಿಸಿ ಪಾಯಸ ಅವಿಯಲ್ ಕೂಡಿದ ಇಪ್ಪತ್ತೊಂದು ಭಕ್ಷ್ಯಗಳ ಓಣಂ 'ಸದ್ಯ' ತಯಾರಿಸಿಟ್ಟುಕೊಂಡು ಮಾವೇಲಿಗಾಗಿ ಕಾಯುತ್ತಾರೆ; ಊರು ನಾಡುಗಳೆಲ್ಲ ಸುಖ ಸಮೃದ್ಧಿಯಿಂದ ಇವೆಯೇ ಎಂದು ನೋಡಿಕೊಂಡು ಹೋಗಲು ಬರುವ ಮಹಾ ಬಲಿ ಚಕ್ರವರ್ತಿಯನ್ನು ಸ್ವಾಗತಿಸುತ್ತಾರೆ.

ಈ ಮನೆಯ ಪಡಸಾಲೆಯಲ್ಲಿ ಎಂದಿನ ಸಂಜೆ 'ದೀಪಂ ದೀಪಂ' ಎನ್ನುವ ಮೆಲು ಸ್ವರದೊಂದಿಗೆ ಶಾಂತವಾಗಿ ದೀಪ ಬೆಳಗುತ್ತದೆ; ಒಳಮನೆಯಲ್ಲಿ ಮೋಂಬತ್ತಿಯೂ. ಮನೆಯ ಮಕ್ಕಳು ಕೈಜೋಡಿಸಿ ಮುಗ್ಧವಾಗಿ 'ನಾಮಂ ಚೊಲ್ಲಲ್' ದೇವರನಾಮ ಹಾಡುತ್ತಾರೆ, ಸಂಜೆಯ ಪ್ರಾರ್ಥನೆ ಗೀತೆಗಾಗಿ ಮೊಣಕಾಲೂರುತ್ತಾರೆ. ಈ ಮನೆಯ ಅಂಗಳದಲ್ಲಿ ಪೂಕ್ಕಳಂಗೆ ಜಾಗ ಇರುವಂತೆಯೇ ಕ್ರಿಸ್‌ಮಸ್ ಟ್ರೀಗೂ ಜಾಗ ಇದೆ. ಈ ಅಂಗಳಕ್ಕೆ ಯಾವುದೇ ಎಗ್ಗಿಲ್ಲದೆ ಮಕ್ಕಳನ್ನು ಕಾಣಲು ಓಣಂ ದಿನ ಮಾವೇಲಿಯೂ ಬರುತ್ತಾನೆ...ಕ್ರಿಸ್‌ಮಸ್ ದಿನ ಸಾಂತಾ ಅಪ್ಪೂಪ್ಪನೂ...

ಭಾಷೆಯ ಕಲಿಕೆ ಎಂದರೆ ವ್ಯಾಕರಣದ ಕಲಿಕೆಯೇ – ಒಂದು ವಿಶ್ಲೇಷಣೆ

ದೇವರಾಜ ಕೋಡಬಾಳ್ಳ.

ಶಾಲಾ ಪೂರ್ವದಲ್ಲಿಯೇ ಮಗುವಿಗೆ ಭಾಷೆಯ ಬಗೆಗಿನ ತಿಳಿವಳಿಕೆ ಪೂರ್ಣವಾಗಿಯೇ ಆಗಿರುತ್ತದೆ. ಹಾಗಾದರೆ ಶಾಲೆಯಲ್ಲಿ ಭಾಷೆ ಕಲಿಕೆ ಅಂದರೇನು? ಎಂಬುದನ್ನು ಯೋಚಿಸಬೇಕಿದೆ. ಬೇರೆಲ್ಲಾ ಜ್ಞಾನ ಶಾಖೆಗಳ ವಿಷಯಗಳಾದ ವಿಜ್ಞಾನ, ಗಣಿತ, ಸಮಾಜವಿಜ್ಞಾನ ಇತ್ಯಾದಿಗಳನ್ನು ಆಧಾರವಾಗಿಟ್ಟುಕೊಂಡು ನೋಡಿದಾಗ ಆಯಾ ವಿಷಯಗಳ ಕಲಿಕೆಗೆ ಅಪೇಕ್ಷಿತ ಕೆಲವು ಸಾಮರ್ಥ್ಯಗಳು ಮಗು ಸಾಧಿಸಬೇಕಾಗುತ್ತದೆ. ಆದರೆ ಭಾಷೆ ಎಂಬುದು ಗಳಿಸುವಂತಹ ಕಲಿಕೆಯಲ್ಲ, ಬದಲಾಗಿ ಬಾಷೆಯು ಮಗುವಿನಲ್ಲಿ ಜೈವಿಕವಾಗಿಯೇ ಒಡಮೂಡುವಂತಹದ್ದು. ಶಾಲೆಗೆ ಬರುವಷ್ಟೊತ್ತಿಗೆ ಭಾಷೆಯ ಎಲ್ಲ ರಾಚನಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಂಡೇ ಬಂದಿರುತ್ತದೆ. ಶಾಲೆಯಲ್ಲಿ ಭಾಷೆಯ ಬಳಕೆಯಲ್ಲಿ ಉನ್ನತಿ ಕಂಡುಕೊಳ್ಳುವ ವಿಚಾರಗಳನ್ನು ಕಲಿಯಬಹುದೇ ವಿನಃ ಭಾಷೆಯನ್ನು ಕಲಿಯುವುದಿಲ್ಲ.

ಮೇಲಿನ ವಿಚಾರಗಳನ್ನು ವಿಸ್ತರಿಸಿ ನೋಡುವುದಾದರೆ; ಶಾಲಾ ಪೂರ್ವದ ಮಗು ಭಾಷಾ ವ್ಯಸ್ಥೆಯ ಎಲ್ಲ ರಾಚನಿಕ ಆಯಾಮಗಳ ತಿಳಿವಳಿಕೆಯನ್ನು ಸಜವಾಗಿ ಸಿದ್ಧಿಸಿಕೊಂಡು ತನ್ನ ಗ್ರಹಿಕೆ ಹಾಗೂ ಮೌಖಿಕ ಅಭಿವ್ಯಕ್ತಿಯ ಭಾಷೆಯಲ್ಲಿ ಪಡೆದುಕೊಂಡೇ ಬಂದಿರುತ್ತದೆ. ಅದಕ್ಕಾಗಿಯೇ ನಾಲ್ಕು ವರ್ಷದಷ್ಟೊತ್ತಿಗೆ ಸಹಜ ಬೆಳವಣಿಗೆಯಲ್ಲಿರುವ ಯಾವುದೇ ಮಗುವೂ ಸಹ ತನ್ನ ಭಾಷೆಯಲ್ಲಿ ವ್ಯಾಕರಣ ದೋಷಗಳನ್ನು ಮಾಡುವುದಿಲ್ಲ. ಇದರರ್ಥ ಭಾಷಿಕ ವ್ಯವಸ್ಥೆ ಎಂದಾಗ ಉದಾಹರಣೆಗೆ: ಧ್ವನಿ, ಧ್ವನಿಗಳ ಸಂರಚನೆ, ಪದ, ವಾಕ್ಯ, ಕಥೆ ದೃಷ್ಟಾಂತಗಳನ್ನು ನಡೆದ ಘಟನೆಯನ್ನು ಕ್ರಮಾನುಗತವಾಗಿ ವಿವರಿಸುವ ಅಂಶಗಳನ್ನು ಮಗು ತಿಳಿದುಕೊಂಡಿರುತ್ತದೆ. ಇದಲ್ಲದೆ ಲಿಂಗ ವಚನಗಳನ್ನಾಗಲಿ, ಕಾಲ ವಾಚಕಗಳನ್ನಾಗಲಿ ವ್ಯತ್ಯಾಸ ಮಾಡಿ ಮಗು ಮಾತನಾಡಲಾರದು. ಅದಕ್ಕಾಗಿಯೇ ಶಾಲೆಯ ಔಪಚಾರಿಕ ಕಲಿಕೆಯ ಹಂತಕ್ಕೆ ಬರುವಷ್ಟೊತ್ತಿಗೆ ಯಾವುದೇ ವ್ಯಾಕರಣ ದೋಷಗಳಿಲ್ಲದೆ ಮಾತನಾಡಲು ಶಕ್ತವಾಗಿರುತ್ತದೆ.

ಇದನ್ನು ಸೂಕ್ಷ್ಮವಾಗಿ ನಮ್ಮ ಮನೆ ಹಾಗು ನೆರೆಹೊರೆಯ ಮಕ್ಕಳನ್ನು ಗಮನಿಸಿದಾಗ ಸುಮಾರು ನಾಲ್ಕು ವರ್ಷಗಳ ಅವಧಿಯಲ್ಲಿ ಕೆಲ ಮಕ್ಕಳು ಮಾತನಾಡುವಾಗ **“ನಿನ್ನೆ ನಾನು ಶಾಲೆಗೆ ಹೋಗ್ತೀನಿ” “ನಾಳೆ ನಾನು ಊರಿಗೆ ಹೋಗಿದ್ದೆ”** ಎನ್ನಬಹುದು. ಆದರೆ ಮಗು ಬಳಸುವ ಕ್ರಿಯಾಪದಗಳಲ್ಲಿ ಕಾಲದ ಸ್ಪಷ್ಟತೆ ಇದ್ದೇ ಇರುತ್ತದೆ. ಅದಕ್ಕಾಗಿಯೇ ಇದರ ಇನ್ನೊಂದು ಮಗ್ಗುಲನ್ನು ಗಮನಿಸುವುದಾದರೆ, ಬಹಳಷ್ಟು ಭಾಷೆಗಳಲ್ಲಿ ಕಾಲ ಬದಲಾದಂತೆ ಕ್ರಿಯಾಪದಗಳು ಬದಲಾಗುವುದಿಲ್ಲ. ಆದರೆ ಮಕ್ಕಳು ವಾಕ್ಯರೂಪದಲ್ಲಿ ಮಾತನಾಡುವಾಗ ವ್ಯಾಕರಣದ ಅಥವಾ ರಾಚನಿಕ ನಿಯಮಗಳನ್ನೂ ತಪ್ಪಾಗಿ ಮಾತನಾಡಲಾರವು. ವಾಕ್ಯದ ರಚನೆ ಯಾವ ಪದಗಳು ಎಲ್ಲಿ ಬರಬೇಕೆಂಬುವುದರ ಜ್ಞಾನವಿರುತ್ತದೆ. ನಿನ್ನೆ, ನಾಳೆ, ಇಂದು ಇತ್ಯಾದಿ ಕಾಲವಾಚಕಗಳು ಮಗುವಿನ ಭಾಷೆಯಲ್ಲಿ ಬಳಕೆಯಾಗುತ್ತಾ ಹೊದಂತೆ ಕೇವಲ ಕಡಿಮೆ ಸಮಯದಲ್ಲಿಯೇ ಅದು ಸರಿಯಾಗುತ್ತದೆ. ಪದ ಪ್ರಯೋಗಗಳಲ್ಲಿ ಕೆಲವು ದೋಷಗಳನ್ನು ಗಮನಿಸಬಹುದೇ ವಿನಃ ಭಾಷೆಯ ನಿಯಮಗಳನ್ನು ತಪ್ಪಾಗಿ ಬಳಸುವುದಿಲ್ಲ.

ಮಕ್ಕಳು ಭಾಷೆಯನ್ನು ಬಳಸುವ ಸಂದರ್ಭದ ಅರಿವು ಅನುಭವಾತ್ಮಕವಾಗಿ ಸಿಕ್ಕಾಗ ಮಗು ಆ ಎಲ್ಲ ಬದಲಾವಣೆಗಳನ್ನೂ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮತ್ತೊಂದು ಉದಾಹರಣೆ ನೋಡುವುದದಾದರೆ **"ಅಪ್ಪ ಬಂದನು" ಅಥವಾ "ಅಪ್ಪ ಬಂದ"** ಎಂಬುದರ ಬದಲಾಗಿ **"ಅಪ್ಪ ಬಂದಳು"** ಎಂದು ಹೇಳಲಾರದು. ಕೆಲವು ಮನೆಗಳಲ್ಲಿ ದೊಡ್ಡವರೇ ತಮ್ಮ ಮಾತುಗಳನ್ನಾಡುವಾಗ ವ್ಯಕ್ತಿಯನ್ನು ಸಂಬೋಧಿಸಿ ಮಾತನಾಡುವಾಗ **ಬಂತು, ಹೋಯಿತು** ಎಂದು ಸಹಜವಾಗಿ ಬಳಸುತ್ತಿದ್ದರೆ, ಅಂತಹ ಪರಿಸರದಲ್ಲಿದ್ದ ಮಕ್ಕಳು ಮಾತ್ರ **ಅಪ್ಪ ಬಂತು, ಅಣ್ಣ ಹೋಯಿತು** ಎಂದು ಮಾತನಾಡಬಹುದು ಇಲ್ಲಿ ಗಮನಿಸಬೇಕಾದ ಸೂಕ್ಷ್ಮತೆಗಳೇನೆಂದರೆ, ಮಗುವಿನ ಭಾಷೆ ಕಟ್ಟಿಕೊಳ್ಳುವ ಸಹಜ ಪರಿಸರದ ಪ್ರಭಾವದಿಂದ ಈ ತರಹದ ಕೆಲವು ಉದಾಹರಣೆಗಳನ್ನು ಗಮನಿಸಬಹುದು. ಇದು ಮುಂದುವರೆದು ಕೆಲವು ಪ್ರಾದೇಶಿಕ ಭಾಷೆಗಳಲ್ಲಿಯೂ ಸಹ ವ್ಯಕ್ತಿಗತವಾಗಿ ಸಂಬೋದನೆ ಮಾಡಿ ಮಾತನಾಡುವಾಗ ಗೌರವ ಸೂಚಕಗಳು ಹೆಚ್ಚು ಬಳಕೆಯಲ್ಲಿ ಇಲ್ಲದಿರಬಹುದು. ಅಲ್ಲದೇ ಅದು ಆ ಪ್ರದೇಶದ ಜನರ ಸಹಜ ಭಾಷೆಯಾಗಿ ಸ್ವೀಕೃತಗೊಂಡು ಹಾಗೆಯೇ ಬಳಸುತ್ತಿರುವಾಗ, ಅಂತಹ ಭಾಷೆ ತಪ್ಪು, ಶುದ್ಧವಾಗಿಲ್ಲ, ಅಥವಾ ಒರಟು ಭಾಷೆ ಎಂದು ಪರಿಗಣಿಸಬಾರದು. ಏಕೆಂದರೆ ಭಾಷೆಯು ಬಳಸುವವರ ಸ್ವತ್ತೇ ಹೊರತಾಗಿ ಅದರಲ್ಲಿ ಸ್ವಚ್ಛಭಾಷೆ ಎಂದು ಮಾನದಂಡಗಳನ್ನು ಇಟ್ಟುಕೊಂಡು ಮೌಲ್ಯಮಾಪನ ಮಾಡುವ ಅಗತ್ಯವಿಲ್ಲ. ಏಕೆಂದರೆ, ಭಾಷೆ ನಿತ್ಯ ಪರಿವರ್ತನಾಶೀಲ ಸ್ವರೂಪವನ್ನು ಹೊಂದಿರುವುದರಿಂದ ಪ್ರಾದೇಶಿಕವಾಗಿ ಬಳಸುವ ಯಾವುದೇ ಭಾಷೆಯೂ ಸಹ ಅಲ್ಲಿನ ಸಹಜತೆಯಲ್ಲಿ ಶುದ್ಧವೆಂದೇ ಪರಿಗಣಿಸಬೇಕಾಗುತ್ತದೆ.

ಮಗುವಿನ ಕಲಿಕೆಯನ್ನು ಆಧರಿಸಿ ನೋಡುವಾಗ, ನಾಲ್ಕೈದು ವರ್ಷಗಳೊತ್ತಿಗೆ ಮಗುವಿಗೆ ಲಿಂಗವ್ಯವಸ್ಥೆಯ ಜ್ಞಾನ ಇದ್ದೇ ಇರುತ್ತದೆ. ಅದಲ್ಲದೆ ಅರ್ಥವಿಲ್ಲದ ಧ್ವನಿಗಳನ್ನು ಸೇರಿಸಿ ಪದಗಳನ್ನೂ ಮಕ್ಕಳು ಮಾಡಲಾರರು. ಅಂತೆಯೇ ಯಾವುದೋ ಬೇರೆ ಬೇರೆ ಪದಗಳನ್ನು ಸೇರಿಸಿ ಅರ್ಥವಿಲ್ಲದ ವಾಕ್ಯಗಳನ್ನೂ ಸಹ ಮಕ್ಕಳು ಮಾಡುವುದಿಲ್ಲ. ತಾನು ಕೇಳುವ ಮತ್ತು ಹೇಳುವ ಮಾತಿನಲ್ಲಿಯೂ ಸಹ ವಿಷಯವಸ್ತುವನ್ನು ಭಾಷಿಕ ವ್ಯವಸ್ಥೆಯ ಅನುಜ್ಞಾನದೊಂದಿಗೆ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಅಂದರೆ ಲಿಂಗ, ವಚನ, ಕಾಲ, ಕ್ರಿಯಾಪದ, ನಾಮಪದಗಳು, ಪದಬಳಕೆಯ ಸ್ಥಾನ, ವಿಶೇಷಣ–ಅವ್ಯಯಗಳ ಔಚಿತ್ಯಪೂರ್ಣ ಬಳಕೆಯನ್ನು ಸಾಂಧರ್ಬಿಕವಾಗಿ ಗುರುತಿಸುವ ಜ್ಞಾನವನ್ನು ಹೊಂದಿರುತ್ತದೆ. **ಅಪ್ಪ ಕೆಲಸ ಮಾಡುತ್ತಾಳೆ** ಎಂಬ ಮಾತನ್ನು ಕೇಳಿದ ಕೂಡಲೇ ಮಗು ನಕ್ಕುಬಿಡುತ್ತದೆ. ಅದು ತಪ್ಪು ಎಂದು ಆತ್ಮವಿಶ್ವಾಸದಿಂದ ಹೇಳುವಷ್ಟು ಭಾಷಿಕ ಜ್ಞಾನ ಮಗುವಿಗಿರುತ್ತದೆ.

ನೋಮ್ ಚಾಮ್‌ಸ್ಕಿ ಯವರು ಹೇಳುವ ಪ್ರಕಾರ, ಮಕ್ಕಳು ಈ ರೀತಿಯ ಭಾಷೆಯ ಸಾಮರ್ಥ್ಯಗಳನ್ನು ಸರಿಸುಮಾರು ೧೮ ತಿಂಗಳಿನಿಂದ ಪ್ರಾರಂಭಿಸಿ ೩೬ ರಿಂದ ೪೦ ತಿಂಗಳಷ್ಟೊತ್ತಿಗೆ ಅತ್ಯಂತ ವೇಗವಾಗಿ ಮತ್ತು ಪರಿಕಲ್ಪನಾತ್ಮಕವಾಗಿ ಕಲಿತುಕೊಳ್ಳುತ್ತಾರೆ. ಇದು ತುಂಬ ಕುತೂಹಲಕಾರಿಯಾದ ಅಂಶ. ಅಷ್ಟು ಮಾತ್ರವಲ್ಲ ಸಂದರ್ಭೋಚಿತವಾಗಿ ತನ್ನ ಮಾತಿನಲ್ಲೂ ಬಳಸಿಕೊಳ್ಳುತ್ತದೆ. ಇದೆಲ್ಲಾ ಮಗುವಿಗೆ ಯಾರಾದರೂ ವ್ಯವಸ್ಥಿತವಾಗಿ ಕುಳಿತುಕೊಂಡು ಸಮಯವನ್ನು ವ್ಯಯಿಸಿ ಕಲಿಸಿರುವಂತಹದ್ದಲ್ಲ. ಬದಲಾಗಿ ಭಾಷಿಕ ವಾತಾವರಣ ಸಿಕ್ಕಿದ್ದರಿಂದ ತಾನೇ ತನ್ನ ಭಾಷೆಯನ್ನು ಒಡಮೂಡಿಸಿಕೊಂಡು ಸಿದ್ಧಿಸಿಕೊಂಡಿರುವುದು. ಮಗುವಿನ ಸಹಜ ಕುತೂಹಲ, ಅನ್ವೇಷಣೆ, ಆಸಕ್ತಿ,

ತೊಡಗಿಸಿಕೊಳ್ಳುವಿಕೆ, ಇತ್ಯಾದಿಗಳ ಜೊತೆಗೆ ಸಾಮಾಜಿಕವಾಗಿ ಲಭ್ಯವಾಗುವ ಅನಿಯಂತ್ರಿತ ವಾತಾವರಣವೂ ಇದಕ್ಕೆ ಪೋಷಕವಾಗಿ ನಿಲ್ಲುತ್ತದೆ.

ಭಾಷೆ ಎಂಬುದು ಮಗುವಿನ ಜನ್ಮಜಾತ ವ್ಯವಸ್ಥೆ ಎಂದೆನ್ನಬಹುದು. ಏಕೆಂದರೆ ಮಗು ಹುಟ್ಟುವಾಗಲೇ ಭಾಷಾ ವ್ಯವಸ್ಥೆಗೆ ಒಗ್ಗಿಕೊಳ್ಳುವ ದೈಹಿಕ ವ್ಯವಸ್ಥೆಯೂ ಅಂತರ್ಗತವಾಗಿರುತ್ತದೆ. ಹುಟ್ಟಿದ ಮಗುವಿನ ದೈಹಿಕ ಮತ್ತು ಮೆದುಳಿನ ವಿಕಾಸಗಳು ತಾನಿರುವ ಸಮಾಜದಲ್ಲಿ ಬದುಕಿ ಬಾಳಲು ಭಾಷೆಯನ್ನು ಕಟ್ಟಿಕೊಳ್ಳುವ ಅಂಶಗಳಿಗೆ ಪೂರಕವಾಗಿಯೇ ಇರುತ್ತವೆ. ಅಂದರೆ ಮಗು ಹುಟ್ಟಿದ ತಕ್ಷಣಕ್ಕೆ ಭಾಷೆ ಬಂದು ಬಿಡುತ್ತದೆ ಎಂದಲ್ಲ. ಬದಲಾಗಿ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿ ಮಗುವಿರುವ ಕುಟುಂಬ, ಸಮಾಜದ ಪಾತ್ರ ಇದ್ದೇ ಇದೆ. ಆದರೆ ಮಗುವಿನ ಬದುಕು ಕಟ್ಟಿಕೊಳ್ಳುವ ಹಂತದಲ್ಲಿ ಭಾಷೆ ಪ್ರಮುಖ ಪಾತ್ರವಹಿಸುತ್ತಿದ್ದು; ಅದೆಲ್ಲಕ್ಕೂ ಪೂರಕವಾಗಿ ಅವುಗಳಿಗೆ ಪೋಷಣೆ ನೀಡುವ ಕಾರ್ಯವನ್ನು ಮಗುವಿನ ತಾಯಿ–ತಂದೆಯರು, ಕುಟುಂಬ ಮತ್ತು ಸಮಾಜ ಮಾಡಬೇಕಾಗುತ್ತದೆ.

ಆದರೆ ಶಾಲೆಗೆ ಬಂದ ಕೂಡಲೇ ಅಕ್ಷರ, ಪದ, ವಾಕ್ಯ, ಪ್ರತ್ಯಯ, ವ್ಯಾಕರಣ ಇತ್ಯಾದಿಗಳ ಜಂಜಾಟದಲ್ಲಿ ಮಗುವನ್ನು ತೊಡಗಿಸಿ, ಓದು–ಬರೆಹದ ಯಾಂತ್ರಿಕ ಕಲಿಕೆಗೆ ತೊಡಗಿಸಲಾಗುತ್ತಿದೆ. ಇದು ಮಗುವಿನ ಸಹಜ ಭಾಷಾ ಕಲಿಕೆಯನ್ನು ಗೌಣಗೊಳಿಸುತ್ತಿದೆ. ಇದರ ಪರಿಣಾಮವಾಗಿ ಮಗು ತನಗೆ ಗೊತ್ತಿರುವ ಭಾಷಾ ವ್ಯವಸ್ಥೆಯನ್ನು ಬಳಸಿಕೊಂಡು ಮುಂದಿನ ಹಂತದ ಭಾಷೆಯ ಕಲಿಕೆಯನ್ನು ಕಟ್ಟಿಕೊಳ್ಳಲು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಏಕೆಂದರೆ ಮಗುವಿನ ಸಹಜ ಭಾಷೆಯಲ್ಲಿನ ಪದಾವಳಿಗಳು ಮತ್ತು ಪ್ರತ್ಯಯಗಳು ಶಾಲಾ ಶಿಕ್ಷಣದ ಔಪಚಾರಿಕತೆಗೆ ಬಂದಾಗ ಬೇರೆಯದ್ದೇ ಆದ ಹೊಸ ಭಾಷೆಯನ್ನು ಕಲಿಯುತ್ತಿರುವಂತೆ ಬಾಸವಾಗುತ್ತದೆ. ಇಂತಹ ಸಂದರ್ಭದ ಭಾಷಿಕ ಅಡೆತಡೆಗಳನ್ನು ಹೋಗಲಾಡಿಸಲು ಶಾಲಾ ಶಿಕ್ಷಣ ಬಹಳಷ್ಟು ಕ್ರಿಯಾಶೀಲವಾಗಿ ಯೋಚಿಸಬೇಕಾಗುತ್ತದೆ.

ಮಗು ಶಾಲಾ ಪೂರ್ವ ಹಂತದಲ್ಲಿ ಸಿದ್ಧಿಸಿಕೊಂಡು ಬಂದಂಥಹ ಭಾಷಿಕ ವ್ಯವಸ್ಥೆಯನ್ನು ಅನ್ವಯಗೊಳಿಸಿಕೊಳ್ಳುತ್ತಾ/ಬಳಸಿಕೊಳ್ಳುತ್ತಾ ಓದು ಮತ್ತು ಬರೆಹದ ಕಲಿಕೆಯನ್ನು ಅನುಕೂಲಿಸುವ ಸಮರ್ಪಕವಾದ ಸುಗಮಗಾರಿಕೆಯನ್ನು ನಮ್ಮ ಶಿಕ್ಷಕರು ಮಾಡಬೇಕಿದೆ. ಭಾಷೆಯೆಂಬ ಸಾಮರ್ಥ್ಯವು ಸಂವಹನ ಕೌಶಲವಾಗಿ ಬದುಕಿನ ಅವಿಭಾಜ್ಯ ಅಂಗವಾಗಿ ನೆಲೆ ನಿಲ್ಲಬೇಕಾಗುತ್ತದೆ. ಭಾಷೆಯು ಸಂವಹನ ಹಾಗೂ ಸಂಪರ್ಕ ಸಾಧನಗಳ ಕೊಂಡಿಯಾಗಿ ಕೆಲಸ ಮಾಡುತ್ತದೆ. ವಿವಿಧ ಆಯಾಮಗಳ ಭಾವ, ಸಂವೇದನೆಗಳ ಅಭಿವ್ಯಕ್ತಿಯ ಚೌಕಟ್ಟಿಗೆ ಭಾಷೆ ಒಳಪಟ್ಟಿದ್ದರೂ ಸಂದರ್ಭಾನುಸಾರವಾಗಿ ಅದು ಅನಾವರಣಗೊಳ್ಳುತ್ತ ಸಬಲೀಕರಣಗೊಳ್ಳುತ್ತದೆ. ಇದನ್ನರಿತು ಸಹಜ ಸಂಪರ್ಕಕ್ಕೆ ಭಾಷೆಯನ್ನು ಹೊಂದಿಸಿಕೊಂಡು ಮಕ್ಕಳ ಭಾಷಾ ಕಲಿಕೆಯನ್ನು ಅನುಕೂಲಿಸುವ ಅಗತ್ಯ ಹೆಚ್ಚಾಗಿದೆ.

ಅದರಲ್ಲೂ ವ್ಯಾಕರಣಬದ್ಧತೆಯಲ್ಲಿ ಭಾಷೆಯನ್ನು ಪರಿಗಣಿಸುವುದಾದರೆ; ಮಗುವು ದೈನಂದಿನ ಜೀವನದಲ್ಲಿ ರೂಢಿಸಿಕೊಂಡ ಭಾಷೆಯನ್ನು ಅರ್ಥಮಾಡಿಕೊಳ್ಳಲು, ಪಾರಂಪರಿಕ ನಿಲುವುಗಳನ್ನು ಅರಗಿಸಿಕೊಳ್ಳಲು ವ್ಯವಹಾರಿಕ ವ್ಯಾಕರಣ ಬೇಕಾಗುತ್ತದೆ. ಆ ವ್ಯವಹಾರಿಕ ವ್ಯಾಕರಣವೇ ಮಗುವಿಗೆ ತನ್ನ ಭಾಷಾ ಸಮೃದ್ಧಿಯನ್ನು ಪಡೆಯಲು ಮತ್ತು ತನ್ನದೇ ಶೈಲಿ ಕಂಡುಕೊಳ್ಳುವ ಮತ್ತು ಸೃಜನಾತ್ಮಕ ಅಭಿವ್ಯಕ್ತಿಗೆ ಭಾಷೆಯನ್ನು ಹೇಗೆಲ್ಲಾ ಉಪಯೋಗಿಸಬೇಕು,

ಎಂಬುವುದನ್ನು ಮಗು ತಿಳಿಯುವುದು ವ್ಯಾಕರಣದ ಉದ್ದೇಶವಾಗಬೇಕು. ವ್ಯಾಕರಣವು ಮಗುವಿನ ಬದುಕು ರೂಪಿಸುವಲ್ಲಿ ಜ್ಞಾನ ಸಮೃದ್ಧಿಯ ಭಾಗವಾಗಬೇಕೇ ವಿನಃ ವ್ಯಾಕರಣ ಎನ್ನುವುದು ಬೇರೊಂದು ಹೊಸ ಕಲಿಕೆಯಾಗಬಾರದು.

ಅಂದರೆ ಮಗುವಿನ ನುಡಿಚಳಕದಲ್ಲಿ (ಮಾತಿನ/ಆಡು ಭಾಷೆ) ವ್ಯಾಕರಣ ಸಹಜವಾಗಿಯೇ ಇರುತ್ತದೆ. ವ್ಯಾಕರಣವನ್ನು ಕಲಿತುಕೊಂಡೇ ಯಾರು ಮಾತನಾಡುವುದಿಲ್ಲ. ಸಂದರ್ಭಾನುಸಾರವಾಗಿ ಬಳಸುವ ಧ್ವನಿಸಂಕೇತಗಳನ್ನು ಅರ್ಥೈಸಿಕೊಳ್ಳಲು, ಭಾಷಿಕ ಸಂರಚನೆಯನ್ನು ತಿಳಿದುಕೊಳ್ಳಲು ಮಕ್ಕಳ ಸಹಜ ಭಾಷೆಯಲ್ಲಿನ ರಾಚನಿಕ ನಿಯಮಗಳನ್ನು ಆವಿಷ್ಕರಿಸುವ ಮತ್ತು ಹೋಸ ನಿಯಮಗಳನ್ನು ರೂಪಿಸಿಕೊಳ್ಳುವ ಅನುಭವಗಳನ್ನು ಶಾಲೆಯಲ್ಲಿನ ಭಾಷಾ ಶಿಕ್ಷಣವು ಒದಗಿಸಬೇಕಾಗುತ್ತದೆ. ಆಗ ಮಾತ್ರ ಮಕ್ಕಳು ತಮ್ಮದೇ ಭಾಷೆಯ ರೀತಿ ಮತ್ತು ಶೈಲಿಯನ್ನು ಅಂತರ್ಗತವಾಗಿಸಿಕೊಳ್ಳಲು ಸುಲಭವಾಗುತ್ತದೆ. ಭಾಷೆಯ ಮೂಲಕ ವ್ಯಕ್ತಿತ್ವ ವಿಕಸನ ಪ್ರಕ್ರಿಯೆಗೆ ಅನ್ವಯಿಸಿಕೊಳ್ಳುವ ದಿಶೆಯಲ್ಲಿ ವ್ಯಾಕರಣದ ಕಲಿಕೆ ಮಗುವಿನ ಭಾಷಾ ಬಳಕೆಯ ಸಮೃದ್ಧಿಗೆ ಸಹಾಯಕವಾಗುತ್ತದೆ.

ವ್ಯಾಕರಣ ಕಲಿಕೆಯನ್ನು ಅನುಕೂಲಿಸುವಲ್ಲಿ ಶಿಕ್ಷಕರ ಪಾತ್ರ:

- ಶಿಕ್ಷಕರು ತರಗತಿಯಲ್ಲಿ ಭಾಷೆಯ ಕಲಿಕೆಯನ್ನು ಅನುಕೂಲಿಸುವಾಗ ಪಠ್ಯಕ್ಕೆ ಪೂರಕವಾದ ಅಭ್ಯಾಸ ಪಾಠಗಳನ್ನು ತಯಾರಿಸಿಕೊಳ್ಳುವುದು.
- ರೂಢಿ, ಉಚ್ಚಾರಣೆ, ವ್ಯಾಕರಣ, ಶಬ್ದಕೋಶ, ವಾಕ್ಯರಚನೆಗೆ ಸಂಬಂಧಿಸಿದ ಮಾದರಿ ಪಾಠಗಳನ್ನು ಸಂಕಲಿಸುವುದು ಮತ್ತು ತರಗತಿಯಲ್ಲಿ ಸಹಜ ಚಟುವಟಿಕೆಗಳ ರೂಪದಲ್ಲಿ ಜಾರಿಗೆ ತರುವುದು.
- ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಸಾಮರ್ಥ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಕ್ಕಳ ಕಲ್ಪನೆ, ವಿಶ್ಲೇಷಣೆ, ವಿವರಣೆ, ಯೋಚನೆ, ಚಿಂತನೆ, ಸಂಕ್ಷೇಪೀಕರಣಕ್ಕೆ, ಸೃಜನಾತ್ಮಕ ಅಭಿವ್ಯಕ್ತಿಗಳಿಗೆ ಅವಕಾಶಗಳನ್ನು ಮಾಡಿಕೊಡುವಂತಹ ಕಲಿಕೆಗೆ ಅವಕಾಶ ಮಾಡಿಕೊಡುವುದು.
- ಶಿಕ್ಷಕರಿಂದ ಕೇಳಿದ್ದನ್ನು ವಿದ್ಯಾರ್ಥಿಗಳು ಅನುಕರಿಸಿ ಮಾತನಾಡುವುದು. ಮಾತನಾಡಿದ್ದನ್ನು ಮನನ ಮಾಡಿಕೊಳ್ಳುತ್ತ ಅನುಭವಾತ್ಮಕವಾಗಿಸಿ ಭಾಷಾ ಬಳಕೆಯಲ್ಲಿ ರೂಢಿಗೆ ತಂದುಕೊಳ್ಳುವುದು. ಮಾತನಾಡಿದ್ದನ್ನು ತಾನೇ ತಿದ್ದಿಕೊಳ್ಳುತ್ತ ಓದುವ ಮತ್ತು ಬರೆಯುವ ಅಭ್ಯಾಸವನ್ನು ಮಾಡಿಸುವುದು.
- ಮಕ್ಕಳ ಭಾಷಾ ಕಲಿಕೆಗೆ ಸಂಬಂಧಿಸಿದ ವಿಷಯಗಳನ್ನು ಮನವರಿಕೆ ಮಾಡಿಕೊಡಲು, ಅಭ್ಯಾಸಕ್ಕಾಗಿ ಸಿದ್ಧಪಡಿಸಿದ ಭಾಷಿಕ ಚಟುವಟಿಕೆಗಳನ್ನು, ಉಚ್ಚಾರಣಾ ವೈರುಧ್ಯಗಳನ್ನು ಆಯ್ದುಕೊಳ್ಳುವುದು ಮತ್ತು ಮಕ್ಕಳು ಅವುಗಳನ್ನು ಗ್ರಹಿಸಲು ಅವಕಾಶಗಳನ್ನು ನೀಡುವುದು.

- ಸಂಭಾಷಣಾತ್ಮಕ ಪಠ್ಯವನ್ನು ಅನುಕರಿಸಲು ಪ್ರೋತ್ಸಾಹಿಸುವುದು. ಧ್ವನಿಯ ವೈದೃಶ್ಯವನ್ನು ಗುರುತಿಸಲು ಹೇಳುವುದು. ವ್ಯಾಕರಣದ ಮೇಲೆ ಪೂರ್ಣ ಪ್ರಭುತ್ವ ಸಾಧಿಸಿಕೊಳ್ಳಲು ಶಬ್ದಕೋಶವನ್ನು ಬಳಸಿಕೊಳ್ಳುವ ಅವಕಾಶಗಳನ್ನು ನೀಡುವುದು.
- ಕಾಗುಣಿತದಲ್ಲಿ ಹಾಗೂ ಉಚ್ಚಾರದಲ್ಲಿ ಆಗುವ ದೋಷಗಳನ್ನು ಶಿಕ್ಷಕ ಪರಿಗಣಿಸಿ ತಿದ್ದುವ ಪ್ರಯತ್ನಗಳನ್ನು ಮಾಡುವುದಕ್ಕಿಂತ ಮಕ್ಕಳ ಕಲಿಕೆಯಲ್ಲಿ ಯಥೇಚ್ಛವಾಗಿ ಅಭ್ಯಾಸಗಳನ್ನು ಕೊಡುವುದರ ಮೂಲಕ ಅವರೇ ಆವಿಷ್ಕರಿಸಿ ಉತ್ತರ ಕಂಡುಕೊಳ್ಳಲು ಅಥವಾ ಸರಿಪಡಿಸಿಕೊಳ್ಳುವ ಅವಕಾಶಗಳನ್ನು ನೀಡುವುದು.
- ಭಾಷೆಯ ವಿವಿಧ ರೂಪಗಳಲ್ಲಿ ಮತ್ತು ಅಭಿವ್ಯಕ್ತಿಗಳಲ್ಲಿನ ಭಾಷಿಕ ಅಂಶಗಳನ್ನು ಹುಡುಕಲು ಮತ್ತು ಅದರ ತಾರ್ಕಿಕ ಕಾರಣಗಳನ್ನು ಪಟ್ಟಿ ಮಾಡುವ ಅವಕಾಶಗಳನ್ನು ನೀಡುವುದು.
- ಭಾಷಿಕ ಅಂಶಗಳನ್ನು ಮಕ್ಕಳು ತಾವೇ ಆವಿಷ್ಕರಿಸಲು ಮತ್ತು ನಿಯಮಗಳನ್ನೂ ರೂಪಿಸಲು ಅವಕಾಶ ಮಾಡಿಕೊಡುವ ಮೂಲಕ ಅವರ ಅನುಭವಕ್ಕೆ ಬಂದ ನಿಯಮಗಳನ್ನು ವ್ಯಾಕರಣದ ನಿಯಮಕ್ಕೆ ಸಹಸಂಬಂಧೀಕರಿಸುವುದು.
- ಮಕ್ಕಳ ಆಡುಭಾಷೆಯಲ್ಲಿ ಇರುವ ಭಾಷಿಕ ಅಂಶಗಳು ಮತ್ತು ಔಪಚಾರಿಕ ಶಿಕ್ಷಣದ ಭಾಷೆಗಳಲ್ಲಿರುವ ಭಾಷಾಂಶಗಳನ್ನು ತಾಳೆ ನೋಡುವ ಮತ್ತು ವಿಶ್ಲೇಷಿಸಿ ಉತ್ತರ ಕಂಡುಕೊಳ್ಳುವ ಅವಕಾಶಗಳು ಭಾಷಾ ಶಿಕ್ಷಕರು ತರಗತಿಯ ಪ್ರಮುಖ ಭಾಗವಾಗಿಸುವುದು.
- ಓದು ಬರಹವನ್ನು ಪುನರ್ಬಲನ ಮತ್ತು ಮಾತು, ಬರೆಹದ ಅಭಿವ್ಯಕ್ತಿಯಲ್ಲಿ ಸಂಬಂಧ ಹಾಗೂ ವ್ಯತ್ಯಾಸಗಳನ್ನು ಮಕ್ಕಳೇ ಕಂಡುಕೊಳ್ಳುವ ಅವಕಾಶಗಳನ್ನು ತರಗತಿಯಲ್ಲಿ ಒದಗಿಸುವುದು.
- ವಿಷಯವಸ್ತುವಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ತಮ್ಮ ಸಹಜ ಭಾಷೆಯಲ್ಲಿ ಮಾತನಾಡಲು ಅವಕಾಶಗಳನ್ನು ನೀಡುವ ಮೂಲಕ ಸಾರ್ವತ್ರಿಕ ಭಾಷಾ ನಿಯಮಗಳನ್ನು ತಾವೇ ತಿಳಿದುಕೊಳ್ಳುವ ಅವಕಾಶಗಳು ಮಕ್ಕಳಿಗೆ ತರಗತಿಯಲ್ಲಿ ಲಭ್ಯವಾಗಿಸುವುದು.

ಹೀಗೆ ವ್ಯಾಕರಣ ಕಲಿಕೆಯನ್ನು ಅನುಕೂಲಿಸುವ ಶಿಕ್ಷಕರ ಪಾತ್ರದಲ್ಲಿ ಇನ್ನೂ ಕೆಲವಷ್ಟು ಅಂಶಗಳನ್ನು ಹೆಚ್ಚಿಸುತ್ತಲೇ ಹೋಗಬಹುದು. ಅಲ್ಲದೇ ಮತ್ತಷ್ಟು ವಿಸ್ತಾರವಾಗಿ ಕಲಿಕೆಯನ್ನು ಅನುಕೂಲಿಸುವ ಬಗೆಗಳನ್ನೂ ವಿಶ್ಲೇಷಿಸಬಹುದು.

ಶಾಲೆಗೆ ಬರುವ ಮುಂಚೆಯೇ ಕುಟುಂಬ ಹಾಗೂ ಪರಿಸರದ ನೆರವಿನಿಂದ ತಮ್ಮ ಜೀವನ ಕಟ್ಟಿಕೊಳ್ಳುವ ಮಟ್ಟಿಗೆ ಭಾಷೆಯ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು ಬಂದ ಮಕ್ಕಳು, ಶಾಲೆಯಲ್ಲಿ ಭಾಷೆಯನ್ನು ಔಪಚಾರಿಕ ನೆಲೆಯಲ್ಲಿ ಕಲಿಯಲು ತೊಡಗುತ್ತಾರೆ. ಭಾಷೆಗೆ ಸಂಬಂಧಿಸಿದ ಹಲವು ಕೌಶಲಗಳನ್ನು ಹೊಸದಾಗಿ ಕಲಿಯುತ್ತಾರೆ. ಓದು ಮತ್ತು ಬರೆಹ. ಅಲ್ಲದೇ ಭಾಷೆಯ ಬಳಕೆಗೆ ಸಂಬಂಧಿಸಿದಂತೆ ಕೆಲವು ಕೌಶಲಗಳನ್ನು ಹೊಸ ಹಿನ್ನಲೆಯಲ್ಲಿ ಅರಿಯತೊಡಗುತ್ತಾರೆ. **ಉದಾಹರಣೆಗೆ:** ಮಾತಿನಲ್ಲಿ ಔಪಚಾರಿಕತೆಯನ್ನು ತಂದುಕೊಳ್ಳುವುದು, ಮಾತನ್ನು ಯೋಗ್ಯ ರೀತಿಯಲ್ಲಿ ಬಳಸಲು

ಕಲಿಯುವುದು, ಭಾಷೆಯ ಸ್ಪಷ್ಟ ರೂಪಗಳನ್ನು ಬೇರೆ ಮಾಡುವುದು, ಇವೇ ಮೊದಲಾದ ಸಂಗತಿಗಳನ್ನು ಕಲಿಯುತ್ತಾರೆ.

ಶಾಲಾ ಶಿಕ್ಷಣದಲ್ಲಿ ಭಾಷಾ ಕೌಶಲಗಳನ್ನು ಕಲಿಸುವ ಉದ್ದೇಶ, ಕ್ರಮ, ಗುರಿ, ಇತ್ಯಾದಿಗಳು ಏನು? ಎಷ್ಟು? ಹೇಗೆ? ಎಂಬ ಇತ್ಯಾದಿ ಪ್ರಶ್ನೆಗಳು ಇನ್ನೂ ಬಗೆಹರಿದಿಲ್ಲ. ಸಾಂಪ್ರದಾಯಿಕ ವಿಧಾನದಲ್ಲಿ ಬರೆವಣಿಗೆ ಮತ್ತು ಓದುವುದು ಮುಖ್ಯ ಗುರಿಗಳಾಗಿದ್ದವು. ಆದರೆ ಭಾಷೆಯಲ್ಲಿ ಆಲಿಸಿ ಗ್ರಹಿಸಿಕೊಳ್ಳುವ, ಭಾಷೆಯ ಮೌಖಿಕ ಬಳಕೆಯನ್ನು ಅಲಕ್ಷಿಸಲಾಗುತ್ತಿತ್ತು. ಇತ್ತೀಚಿನ ಚಿಂತನೆಗಳು ಬೇರೊಂದು ದಿಕ್ಕಿನಲ್ಲಿ ಹರಿದಿವೆ. ಶಾಲಾ ಅವಧಿಯಲ್ಲಿ ಭಾಷಾ ಕೌಶಲಗಳನ್ನು ಕಲಿಯುವ ಅವಕಾಶ ಮತ್ತು ತಳಹದಿ ಶಿಕ್ಷಣದ ಸಮಗ್ರ ಯಶಸ್ಸಿನಲ್ಲಿ ಮುಖ್ಯ ಪಾತ್ರವನ್ನು ಪಡೆಯುತ್ತಿದೆ ಎಂದು ತಿಳಿಯುತ್ತಿದ್ದಾರೆ. ಆದ್ದರಿಂದ ಬರೆವಣಿಗೆ ಮತ್ತು ಓದುಗಾರಿಕೆಗಳನ್ನು ಮಾತ್ರ ಗುರಿಯಾಗಿರಿಸಿಕೊಳ್ಳದೆ ಇತರೆ ಕೌಶಲಗಳನ್ನು ಕಲಿಸುವ ಅನಿವಾರ್ಯತೆಯನ್ನು ಮನಗಾಣುತ್ತಿದ್ದಾರೆ. ಈ ನಿಮಿತ್ತ ಶಿಕ್ಷಣದಲ್ಲಿ ಬದಲಾವಣೆಗಳನ್ನು ತರುತ್ತಿದ್ದಾರೆ.

ಈ ನೆಲೆಯಲ್ಲಿ ಶಿಕ್ಷಕರಾಗಿ ನಮ್ಮ ಭಾಷಾ ತರಗತಿಗಳನ್ನು ಅನುಕೂಲಿಸುವಾಗ ಮಕ್ಕಳ ಭಾಷೆಯನ್ನು ಆಧರಿಸಿ ತರಗತಿ ಪ್ರಕ್ರಿಯೆಗಳನ್ನು ರಚಿಸುವುದು ಮತ್ತು ಚಟುವಟಿಕೆಗಳನ್ನು ಆಯೋಜಿಸುವುದು ಪ್ರಮುಖವಾಗಿದೆ. ತರಗತಿ ಪ್ರಕ್ರಿಯೆಗಳನ್ನು ಆಯೋಜಿಸುವಾಗ ವ್ಯಾಕರಣವು ಮಕ್ಕಳ ಭಾಷಾ ಕಲಿಕೆಯ ಭಾಗವೇ ಆಗಿರುತ್ತದೆ ಎಂಬುದು ನಮ್ಮ ಗಮನಕ್ಕಿದೆ. ಮಕ್ಕಳ ಸಹಜ ಭಾಷೆ ಅಥವಾ ನಾವಾಡುವ ನುಡಿಚಳಕ (ಮಾತಿನ ಭಾಷೆ) ಸಹಜವಾಗಿ ವ್ಯಾಕರಣಬದ್ಧವಾಗಿಯೇ ಇರುತ್ತದೆ. ಹೀಗಿರುವಾಗ ವ್ಯಾಕರಣ ಕಲಿಕೆಯನ್ನು ಪ್ರತ್ಯೇಕವಾಗಿ ನೋಡಬೇಕೇ? ಎಂದು ಪ್ರಶ್ನಿಸಿಕೊಂಡಾಗ ಹೀಗೆ ಪ್ರತ್ಯೇಕವಾಗಿ ನೋಡುವುದು, ಹೊಸ ಭಾಷೆಯನ್ನು ಕಲಿಕೆಯಂತೆ ಭಾಸವಾಗಬಾರದು. ಹಾಗಿದ್ದಲ್ಲಿ ಭಾಷೆಯ ತರಗತಿಯಲ್ಲಿ ಕಲಿಕೆಯ ಪ್ರಕ್ರಿಯೆಯಲ್ಲಿ ವ್ಯಾಕರಣವಿರುತ್ತದೆ ಎಂಬುದಕ್ಕೆ ನಾವು ವ್ಯಾಕರಣವನ್ನು ಪರ್ಯಾಯ ದೃಷ್ಟಿಕೋನದಲ್ಲಿ ನೋಡುವ ಅಗತ್ಯವಿದೆ. ಅಂದರೆ ನಮ್ಮೆಲ್ಲರ ಸಹಜ ಮಾತಿನಲ್ಲಿರುವ ವ್ಯಾಕರಣ ಅಂಶಗಳೇ ಭಾಷಾ ಕಲಿಕೆಯ ಭಾಗವಾಗಿರಬೇಕಾಗುತ್ತದೆ.

ಈ ಎಲ್ಲಾ ಕಾರಣಗಳನ್ನು ಗಮನಿಸಿದಾಗ ಸಹಜ ಭಾಷೆಯಲ್ಲಿರುವ ಪ್ರತ್ಯಯಗಳಿಗೂ ಗ್ರಾಂಥಿಕವಾಗಿ ಬಳಸುವ ಭಾಷೆಗಿರುವ ಪ್ರತ್ಯಯಗಳಲ್ಲಿ ವ್ಯತ್ಯಾಸ ಇದ್ದೇ ಇದೆ. ಇದಕ್ಕೆ ಕಾರಣ ಮಾತಿನ ಭಾಷೆಗಿರುವಷ್ಟು ನಮ್ಯತೆ ಬರೆವಣಿಗೆಯ ಭಾಷೆಗಿರುವುದಿಲ್ಲ. ಮಾತಿನ ಭಾಷೆಯನ್ನು ನಮ್ಮ ಜೊತೆಗೆ ಎಷ್ಟು ಜನ ಮಾತಾಡುತ್ತಾರೆ ಎಂಬುದನ್ನು ಆಧರಿಸಿ ಭಾಷೆಯನ್ನು ಬದಲಾವಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅದೇ ಬರೆವಣಿಗೆಯ ಭಾಷೆಯಲ್ಲಿ ಆ ಸಾಧ್ಯತೆಗಳು ಕಡಿಮೆ ಎನ್ನಬಹುದು.

ಈ ದೃಷ್ಟಿಕೋನಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಮಕ್ಕಳು ಕಟ್ಟಿಕೊಂಡು ಬಂದ ಭಾಷೆಯನ್ನು ಆಧರಿಸಿಯೇ ತರಗತಿ ಪ್ರಕ್ರಿಯೆಗಳು ರೂಪುಗೊಳ್ಳಬೇಕಿದೆ. ಮಕ್ಕಳು ಬರೆವಣಿಗೆಯ ಸಂಪರ್ಕಕ್ಕೆ ಬಂದಾಗ ಜನರಿಗೆ ಅರ್ಥವಾಗುವ ನೆಲೆಯಲ್ಲಿ 'ಭಾಷೆಯನ್ನು ಅಭಿವ್ಯಕ್ತಿಸುವ ನೆಲೆಗಳನ್ನು ಮಕ್ಕಳು ಕಂಡುಕೊಳ್ಳಬೇಕಿದೆ. ಮಾತು ಮತ್ತು ಬರೆಹ ಈ ಎರಡರ ಮಧ್ಯೆ ಇರುವ ಎಳೆಗಳನ್ನು ಆಧರಿಸಿ ಸಹಜತೆಯಿಂದ ಸಂಪರ್ಕದ ಭಾಷೆಯನ್ನು ಕಲಿಯುವ

ನೆಲೆಯಲ್ಲಿ ಇರುವ ವ್ಯಾಕರಣ ಎಂತಹದು? ಆ ವ್ಯಾಕರಣ ಕಲಿಕೆಯ ಚಟುವಟಿಕೆಗಳು ಯಾವ ರೀತಿಯದ್ದು? ಎಂಬುದನ್ನು ಯೋಚಿಸಬೇಕಿದೆ. ಹಾಗಾದರೆ ನಮ್ಮ ತರಗತಿ ಪ್ರಕ್ರಿಯೆಗಳಲ್ಲಿ ಯಾವ ತರಹದ ವ್ಯಾಕರಣ ಕಲಿಕಾ ಚಟುವಟಿಕೆಗಳನ್ನು ರೂಪಿಸಬಹುದು ಎಂಬುದನ್ನು ಕಂಡುಕೊಳ್ಳಬೇಕಿದೆ

ಭಾಷೆ ಮತ್ತು ವ್ಯಾಕರಣ ಬೇರೆ ಬೇರೆ ಅಲ್ಲ ಮಕ್ಕಳ ಸಹಜತೆಯಲ್ಲಿರುವ ಭಾಷೆಯ ಎಲ್ಲ ಅಂಶಗಳೂ ವ್ಯಾಕರಣದ ರಾಚನಿಕ ನಿಯಮಗಳ ಹೊರತಾಗಿಲ್ಲ. ವ್ಯಾಕರಣಬದ್ಧತೆ ಎಂಬ ನೆಲೆಯಲ್ಲಿ ನಾವು ಬರೆಹದ ಭಾಷೆಗೆ ಮಾತ್ರ ಅದರ ರಾಚನಿಕ ಅಂಶಗಳನ್ನು ಗುರುತಿಸುವುದು ನಮ್ಮ ಈವರೆಗಿನ ರೂಢಿಯಾಗಿದೆ. ಒಂದುವೇಳೆ ಮಕ್ಕಳ ಮತ್ತು ಸಮಾಜದ ಸಹಜ ಭಾಷೆಯು ವ್ಯಾಕರಣದ ರಾಚನಿಕ ಅಂಶಗಳನ್ನು ಹೊರತಾಗಿದೆ ಎಂದು ಯೋಚಿಸಿದರೆ, ನಾವಾಡುವ ಮಾತಿನ ಭಾಷೆ ಎಲ್ಲರಿಗೂ ಅರ್ಥವಾಗುತ್ತಿರಲಿಲ್ಲ. ಹಾಗಾಗಿ ಜನರ ಬದುಕಿನ ಭಾಗವಾದ ಸಹಜತೆಯ ಭಾಷೆಯಲ್ಲಿನ ಎಲ್ಲ ಅಂಶಗಳೂ ವ್ಯಾಕರಣಬದ್ಧವೇ ಆಗಿರುತ್ತದೆ. ಇದನ್ನು ಅರಿತು ಶಾಲಾ ಶಿಕ್ಷಣದ ಔಪಚಾರಿಕ ಭಾಷಾ ಕಲಿಕೆಯು ಸಹಜ ಭಾಷೆಗೆ ಸಂವಾದಿಯಾಗಿ ಮತ್ತು ಅದರಲ್ಲಿನ ವ್ಯಾಕರಣವನ್ನು ಮತ್ತು ಅದರ ನಿಯಮಗಳನ್ನು ಅರಿಯಲು ಅನುಕೂಲವಾಗುವಂತೆ ಇರಬೇಕಾದುದು ಅಪೇಕ್ಷಣೀಯ.

ಕಲಿಯದವರಿಂದ ಕಲಿತೆ

- ಮಹಾಂತೇಶ.ಹಾಳಕೇರಿ

ಬೇಸಿಗೆಯ ಒಂದು ರವಿವಾರದ ಮಧ್ಯಾಹ್ನದ ಉರಿಬಿಸಿಲಿನಲ್ಲಿ ತಾಪದ ಹೊಡೆತಕ್ಕೆ ಮನೆಯ ಹೊರಗಡೆಯ ನೆರಳಿನಲ್ಲಿ ಇಲ್ಲದ ಗಾಳಿಯ ಬಯಸುತ್ತಾ ಕುಳಿತಿದ್ದೆ. ನಮ್ಮ ಮನೆಯ ಮುಂದುಗಡೆ ಬಹಳಷ್ಟು ಖಾಲಿ ಜಾಗದಲ್ಲಿನ ಒಣಗಿದ ಹುಲ್ಲನ್ನು ಮೇಯುತ್ತಾ ಕುರಿಯ ಹಿಂಡೊಂದು ನನ್ನತ್ತಲೇ ಧಾವಿಸುತ್ತಿತ್ತು, ಅದರ ಹಿಂದೆಯೇ ಅವುಗಳನ್ನು ನೋಡಿಕೊಳ್ಳುವ ಕುರಿಗಾಹಿ ತಾತನ್ನೊಬ್ಬ ನೆರಳನ್ನು ಆಶ್ರಯಿಸಿ ನಾನಿದ್ದಲ್ಲಿಯೇ ಬಂದು ಕುಳಿತ. ಪರಸ್ಪರರಲ್ಲಿ ಸಾಂಪ್ರದಾಯಿಕವಾದ ಪರಿಚಯವಾಯಿತು, ಆಗ ತಿಳಿಯಿತು ಆತ ಶಾಲೆಯ ಮೆಟ್ಟಿಲನ್ನೇ ಹತ್ತಿಲ್ಲ ಚಿಕ್ಕಂದಿನಿಂದಲೂ ಆತನ ಕಾಯಕವೇ ಕುರಿಗಳನ್ನು ಮೇಯಿಸುವುದು ಎಂಬುದು, ಆಗ ಕುತೂಹಲಕ್ಕಾಗಿ ಕೇಳಿದೆ ಅಜ್ಜ ನಿನಗೆ ಗಣಿತದ ಲೆಕ್ಕಗಳು ಬರುತ್ತವೆಯೇ ಎಂದು ಅದಕ್ಕೆ ಆತ ನನಗೆ ಲೆಕ್ಕಗಳನ್ನು ಮಾಡಲು ಬರುವುದಿಲ್ಲ ಆದರೆ ಕೆಲವೊಂದು ಲೆಕ್ಕದ ಒಗಟುಗಳು ಬರುತ್ತವೆ ಎಂದ, ಹಾಗಾದರೆ ಅವುಗಳನ್ನು ಹೇಳು ಎಂದು ನಾನು ಕೇಳಿದೆ.

ಅಜ್ಜ ಹೇಳಲು ಪ್ರಾರಂಭಿಸಿದ ನೋಡಪಾ ಒಂದು ಶಿವಡಿನ್ಯಾಗ ೧೪ ಜೋಳದ ದಂಟು ಇರ್ತಾವು, ಒಂದು ಇಂಡಿಗ್ಯಾಗ ೧೪ ಶಿವಡು ಇರ್ತಾವು, ಒಂದು ಹೊರೆಯಾಗ ೧೪ ಇಂಡಿಗೆ ಇರ್ತಾವು, ಒಂದು ಬಂಡ್ಯಾಗ ೧೪ ಹೊರಿ ಇರ್ತಾವು, ಒಂದು ಬನಿವ್ಯಾಗ ೧೪ ಬಂಡಿ ಮೇವು ಇದ್ದರೆ, ಒಟ್ಟಾರೆ ಬನಿವ್ಯಾಗ ಇರುವ ಜೋಳದ ದಂಟುಗಳು ಎಷ್ಟು? ಹೇಳಪಾ ಅಂದ	

ನಾನು ತಟ್ಟನೆ ಈ ಲೆಕ್ಕ ೧೪ ರ ಪುನರಾವರ್ತಿತ ಗುಣಾಕಾರದಿಂದ ಕೂಡಿದೆ ಎಂದು ತಿಳಿಯಿತು ಹಾಗಾಗಿ ೧೪^{೫} =೫,೩೭,೮೨೪ ಅದಕ್ಕೆ ಉತ್ತರಿಸಿದೆ, ಅಜ್ಜ ಅದೆ ತೆರನಾಗಿರುವ ಮತ್ತೊಂದು ಪ್ರಶ್ನೆ ಕೇಳಿದ

೪ ಪಾವು ಸೇರಿದ್ರೆ ೧ ಸೇರು ಆಗುತ್ತೆ, ೪ ಸೇರು ಸೇರಿದ್ರೆ ೧ ಪಡಿ ಆಗುತ್ತೆ, ೪ ಪಡಿ ಸೇರಿದ್ರೆ ೧ ಗಿದ್ನ ಆಗುತ್ತೆ, ೮ ಗಿದ್ನ ಸೇರಿದ್ರೆ ೧ ಚೀಲ ಜೋಳ ಆದ್ರೆ, ೧ ಚೀಲದಲ್ಲಿ ಎಷ್ಟು ಪಾವು ಜೋಳ ಇರ್ತಾವು ಹೇಳು ನೋಡೋಣ ಅಂದ.	

ಇಲ್ಲಿ ೪ನ್ನು ಪುನರಾವರ್ತಿತವಾಗಿ ೫ಬಾರಿ ಗುಣಿಸಿ ಬಂದ ಉತ್ತರಕ್ಕೆ ೮ರಿಂದ ಗುಣಿಸಿ ಉತ್ತರ ೫೧೨ ಪಾವುಗಳು ಎಂದು ಹೇಳಿದೆ, ಅಜ್ಜನ ಪ್ರಶ್ನೆಗಳಿಂದ ವಯಕ್ತಿಕವಾಗಿ ನನಗೆ ಗ್ರಾಮೀಣ ಭಾಗದಲ್ಲಿ ಬಳಕೆಯಿರುವ ಅನೌಪಚಾರಿಕ ಅಳತೆಯ ಮಾನಗಳಾದ ಪಾವು,ಸೇರು,ಪಡಿ,ಗಿದ್ನಗಳ ನಡುವಿನ ಸಂಬಂಧ ಸ್ಪಷ್ಟವಾಗಿ ತಿಳಿಯಿತು ಹಾಗೆಯೇ ಜೋಳದ ಬನಿವೆಯಲ್ಲಿನ ದಂಟು ಮಾತ್ರ ಗಮನಿಸಿದ್ದ

ಇವೆರಡಕ್ಕೂ ನಾನು ಸರಳವಾಗಿ ಉತ್ತರಿಸಿದ್ದರಿಂದ, ಅಜ್ಜನಿಗೆ ಸಂತೋಷವಾಯಿತು ಮತ್ತು ನಾನು ಇಂತಹ ಸಮಸ್ಯೆಗಳನ್ನು ಪರಿಹರಿಸಬಲ್ಲೆ ಎಂದು ಅರಿತು, ತನಗೆ ಉತ್ತರ ಬರದೆ ಇರುವ ಪ್ರಶ್ನೆಯನ್ನು ಕೇಳಿದ

- ಒಂದಷ್ಟು ಗಿಳಿಯ ಹಿಂಡು ಒಂದು ಮಾವಿನ ವನಕ್ಕೆ ಬರುತ್ತವೆ. ಒಂದು ಮಾವಿನ ಗಿಡಕ್ಕೆ ಒಂದು ಗಿಳಿ ಕುಳಿತರೆ ಒಂದು ಗಿಳಿ ಹೆಚ್ಚಾಗಿ (ಜಥಣಡಿಚಿ) ಉಳಿಯುತ್ತದೆ, ಹಾಗೆಯೇ ಒಂದು ಮಾವಿನ ಗಿಡಕ್ಕೆ ೨ ಗಿಳಿಗಳು ಕುಳಿತರೆ ಒಂದು ಗಿಡ ಹೆಚ್ಚಿಗೆ(ಜಥಣಡಿಚಿ) ಉಳಿಯುತ್ತದೆ ಹಾಗಾದರೆ ಅಲ್ಲಿರುವ ಒಟ್ಟು ಗಿಳಿಗಳು ಎಷ್ಟು ಮತ್ತು ಮಾವಿನ ಗಿಡಗಳು ಎಷ್ಟು ಎಂಬುದನ್ನು ಹೇಳು ಎಂದ.

ನಾನು ಈ ಪ್ರಶ್ನೆಯಲ್ಲಿನ ಹಿಂಡು ಮತ್ತು ವನ ಎಂಬ ಪದಗಳನ್ನು ಗಮನಿಸಿ ದೊಡ್ಡ ದೊಡ್ಡ ಸಂಖ್ಯೆಗಳನ್ನು ಬಳಸಿದೆ, ಬಹಳಷ್ಟು ಸಮಯ ತಗೆದುಕೊಂಡರು ಉತ್ತರ ದೊರಕಲಿಲ್ಲ ಆಗ ನಾನು ಅಂಕಿಗಳನ್ನು ಬಳಸಿ ಪ್ರಯತ್ನಿಸಿದೆ ಆಗ ಗಿಳಿಗಳು ೪ ಮತ್ತು ಮಾವಿನ ಗಿಡಗಳು ೩ ಎಂದು ಉತ್ತರ ದೊರಕಿತು.

ಇದೆ ತೆರನಾಗಿ ನಾನು ಬೇರೆ ಬೇರೆ ಜನರಿಂದ ಕೇಳಿದ ಗಣಿತಕ್ಕೆ ಸಂಬಂಧಿಸಿದ ಸವಾಲುಗಳು ಈ ಕೆಳಗಿನಂತೆ ಇದ್ದು ಅವುಗಳಿಗೆ ಪರಿಹಾರವನ್ನು ತಾವುಗಳು ಪ್ರಯತ್ನಿಸಬಹುದು

- ಒಬ್ಬ ಅಜ್ಜನ ಹತ್ತಿರ ೧೦೦ ರೂಪಾಯಿಗಳಿವೆ, ಆತ ದೇವಸ್ಥಾನದ ಮುಂದೆ ಇರುವ ಎಲ್ಲ ೧೦೦ ಜನ ಭಿಕ್ಷುಕರಿಗೆ ಹಂಚುತ್ತಾನೆ.ಆ ಭಿಕ್ಷುಕರಲ್ಲಿ ಅತ್ಯಂತ ಚಿಕ್ಕ ಮಕ್ಕಳಿಗೆ ೫೦ಪೈಸೆ, ಯುವಕ/ಯುವತಿಯರಿಗೆ ೨ರೂಪಾಯಿ,ಹಿರಿಯ ವಯಸ್ಕರಿಗೆ ೩ರೂಪಾಯಿ ಕೊಡುತ್ತಾನೆ. ಹಾಗಾದರೆ ಎಷ್ಟು ಜನ ಚಿಕ್ಕಮಕ್ಕಳು,ಎಷ್ಟು ಜನ ಯುವಕ/ಯುವತಿಯರು ಮತ್ತು ಎಷ್ಟು ಜನ ವಯಸ್ಕರು ಇದ್ದಾರೆ ಎಂಬುದನ್ನು ಕಂಡು ಹಿಡಿಯಿರಿ.
- ಒಬ್ಬ ವ್ಯಕ್ತಿ ಮೂರು ದೇವಸ್ಥಾನ ಗಳಿಗೆ ಹೋಗಲು ಇಚ್ಛಿಸುತ್ತಾನೆ ಪ್ರತಿ ದೇವಸ್ಥಾನದ ದೇವರಿಗೆ ಹೂಗಳನ್ನು ಸಮರ್ಪಿಸಲು ಬಯಸುತ್ತಾನೆ. ಮೊದಲ ದೇವಸ್ಥಾನಕ್ಕೆ ಹೋದಾಗ ಅದರ ಮುಂದುಗಡೆ ಇರುವ ನೀರಿನ ಹೊಂಡದಲ್ಲಿ ಮುಳುಗಿ ಎದ್ದಾಗ ಆತನ ಹತ್ತಿರವಿರುವ ಹೂಗಳು ಎರಡರಷ್ಟು ಆಗುತ್ತವೆ ಅದರಲ್ಲಿನ ಅರ್ಧದಷ್ಟನ್ನು ದೇವರಿಗೆ ಸಮರ್ಪಿಸಿ ಮುಂದಿನ ದೇವಸ್ಥಾನಕ್ಕೆ ಹೋಗುತ್ತಾನೆ ಅಲ್ಲಿಯೂ ಸಹ ಹೊಂಡದಲ್ಲಿ ಮುಳುಗಿ ಏಳುತ್ತಾನೆ ಮತ್ತೆ ಆತನ ಕೈಯಲ್ಲಿರುವ ಹೂಗಳು ಎರಡರಷ್ಟು ಆಗುತ್ತವೆ ಅದರಲ್ಲಿನ ಅರ್ಧದಷ್ಟು ಹೂಗಳನ್ನು ಮತ್ತೆ ದೇವರಿಗೆ ಸಮರ್ಪಿಸಿ ಕೊನೆಯ ದೇವಸ್ಥಾನಕ್ಕೆ ಹೋಗುತ್ತಾನೆ ಅಲ್ಲಿನ ಹೊಂಡದಲ್ಲಿ ಮುಳುಗಿ ಎದ್ದಾಗ ಎರಡರಷ್ಟು ಆದ ಎಲ್ಲಾ ಹೂವುಗಳನ್ನು ಮೂರನೆಯ ದೇವರಿಗೆ ಸಮರ್ಪಿಸುತ್ತಾನೆ. ದೇವಸ್ಥಾನದಿಂದ ಹೊರಗಡೆ ಬಂದಾಗ ಆತನ ಕೈಯಲ್ಲಿ ಯಾವುದೇ ಹೂವುಗಳು ಉಳಿಯುವುದಿಲ್ಲ, ಹಾಗಾದರೆ ಪ್ರಾರಂಭದಲ್ಲಿ ಆತನ ಕೈಯಲ್ಲಿದ್ದ ಹೂವುಗಳ ಸಂಖ್ಯೆ ಎಷ್ಟು?
- ನಾಲ್ಕು ಜನ ೦,೫,೮ & ೮ ಗೆಳೆಯರು ತೆಪ್ಪದಲ್ಲಿ ಒಂದು ದಡದಿಂದ ಇನ್ನೊಂದು ದಡಕ್ಕೆ ಹೋಗಬೇಕಾಗಿದೆ ಆದರೆ ತೆಪ್ಪದಲ್ಲಿ ಕನಿಷ್ಠ ಒಬ್ಬರು ಗರಿಷ್ಠ ಇಬ್ಬರು ಮಾತ್ರ ಹೋಗಬಹುದು ತೆಪ್ಪವು ಆಚೆ ದಡವನ್ನು ಸೇರಲು ತೂಕವನ್ನಾದರಿಸಿ ಸಮಯವನ್ನು ತೆಗೆದುಕೊಳ್ಳುತ್ತದೆ ೦ ವ್ಯಕ್ತಿಗೆ ಒಂದು ನಿಮಿಷ, ೫ ವ್ಯಕ್ತಿಗೆ ಎರಡು ನಿಮಿಷ, ೮ ವ್ಯಕ್ತಿಗೆ ೫ ನಿಮಿಷ ಮತ್ತು ೮ ವ್ಯಕ್ತಿಗೆ ೧೦ ನಿಮಿಷ ತೆಗೆದು ಕೊಳ್ಳುತ್ತದೆ ಮತ್ತು ತೆಪ್ಪದಲ್ಲಿ ಇಬ್ಬರು ಹೊಗುವಾಗ ಇಬ್ಬರಲ್ಲಿ ಯಾರು ಹೆಚ್ಚಿನ ಸಮಯ ತೆಗೆದುಕೊಳ್ಳುವ ವ್ಯಕ್ತಿಯ ಸಮಯವನ್ನು ಮಾತ್ರ ತೆಗೆದುಕೊಳ್ಳಬೆಕು,ಒಟ್ಟಾರೆ ೧೭ ನಿಮಿಷದಲ್ಲಿ ಈ ನಾಲ್ಕು ಜನ ಆಚೆ ದಡ ಸೇರಲು ಯಾವ ಯಾವ ರೀತಿಯಲ್ಲಿ ಜೊತೆಯಾಗಿ ಹೋಗಬೇಕು?

ಒಟ್ಟಾರೆಯಾಗಿ ಆ ಅಜ್ಜನೊಂದಿಗೆ ಮತ್ತು ಈ ಮೆಲಿನ ಸವಾಲುಗಳನ್ನು ಹೇಳಿದವರ ಜೊತೆಗಿನ ಮಾತುಕತೆಯಲ್ಲಿ ತಿಳಿದ ಅಂಶವೆಂದರೆ ಪ್ರತಿಯೊಬ್ಬರಲ್ಲು ಒಂದಲ್ಲಾ ಒಂದು ರೀತಿಯ ಜ್ಞಾನ, ವಿಷಯ ಇದ್ದೆ ಇರುತ್ತದೆ ಅದನ್ನು ಆಲಿಸಲು ನಾವು ಸಮಯ ಕೊಡಬೇಕು ಮತ್ತು ಅರಿಯುವ ಮನಸ್ಸು ಮಾಡಬೇಕು ಅಷ್ಟೆ.

My New world called Library!!!

- Akshata S

My recent Gram panchayat library orientation follow up program facilitation has helped me bring together various stakeholders at Gram panchayat level whom I had no chance to connect before. I am also able to work with my teachers at their gram panchayat level which is new to me. Sharing few experiences from there.

Most of these teachers were not aware of their own Gram Panchayat libraries I was happy I was able to introduce these libraries to them and their children. It was the first time they had ever entered these libraries though the libraries are open from many years.

Most of the libraries are well equipped with the books of various genres and competitive books and are being used by the local youths. “There were no books for children till your organisation gave us” were the words by most of the librarian’s there.

For many of the librarians it was just a part time job with a meagre honorarium which comes once in 3 to 4 months for few of them it is a service to the society. They carry these books to far away villages and distribute it to children at their own expense

I was very excited to see our books being hanged in few of the libraries. Kids come from distant villages to read them. In few of them the box was not even opened and was lying in the rack.

We used to start our discussions asking teachers to segregate the books into various categories so it’s easier for them to pick and use. These categories were then pasted on the racks were these books were arranged. Conversation around why a book belonged to a particular category and why not to some



other were made which made them think. We also discovered that these books need to be also categorized based on the level of abstractness of pictures.

Teachers have this notion that 1st to 3rd grade children cannot read these books, they could only see the pictures because they don't know the varnamala and only after knowing the letters they could be asked to read. I tried my best to address this belief demonstrating few activities with children.

We then moved on to the discussion on importance of literature in our lives and the skills that could be gained by reading literature. Teachers spoke about their experiences and learning by reading literature on their favorite authors. I realized that many of our teachers are very good readers and like to read. They also expressed that their reading habits are reduced due to mobile phone usage. Many exchanged the links where they could download free books online. This discussion was then connected to skills teachers could facilitate their children to acquire through literature.

I drew their attention to higher order skills like empathy, reasoning, logical and analytical skills along with widening of perspectives, improving reading skills, developing vocabulary that could be achieved through literature. We then spoke about their earliest introduction to the world of literature. Most of them credited their venture into literacy world to their teachers.

This conversation was then lead to various ways teachers could adopt to introduce their students to the world of literature. Most of them agreed picture books are the great way for the same. "Madam these books seems to be interesting to us our children will definitely like to read them, they will create their own stories around these books" were the words of confidence by one of the teacher.

Teachers exploring the books

Our conversation was then around various activities teachers could design for using these books with children. I then shared the DSERT Kannada language learning outcomes for first grade and asked them to come up with a lesson plan to help their children achieve the learning outcomes selecting at least one learning outcome from the list.

To my surprise they were seeing this list for the first time and many were unsure if children could even achieve these learning outcomes in first grade.

Teachers worked in their groups and presented their lesson plan to the group. They also demonstrated these strategies with the children. Other participants were asked for the feedback and reflection.

Teachers narrated stories beautifully using the colorful books most of them failed to use the books to facilitate reading but used it mostly to narrate stories. Stories were narrated in the slang and language of children many of them were also able to set the context to children. Teachers were then suggested to take the learners from their mother tongue to academic language. I was also able to use this opportunity to help teachers understand various levels of questioning so as to elicit factual, reasoning, predicting, projecting, relating responses to children. Few teachers were also successful in creating experiences in children by adding emotions and intonations to their narration. Importance of sequencing was also stressed upon.

Children enjoyed the whole process of listening to stories by their teachers. Few librarians were also part of the whole process and suggested their ideas.

Action plans were also derived by facilitating the discussions with PDO's, librarians, teachers and Head Teachers. Mobile libraries where librarian will visit the villages carrying the books was agreed upon. Few PDO's agreed to procure books of children literature and asked teachers to list the same. Few PDO's also agreed to conduct monthly events around library and reading.

It was also found that many schools already have more than 1500 books with them which are lying unused and the headmasters of these schools agreed to open up these books to public as well as exchange the books among themselves. Teachers have agreed to make a list of all the books available in their schools.

We then started working with children. News of these books spread in the villages and many children started joining slowly we had send few of them back owing to the space and physical distancing. To my surprise children were able to narrate the story without knowing to read. They could even recognize and match the letters in the treasure hunt game.

I don't know to read but I could tell you this story…

Treasure hunt game facilitated by elder kids

It was exciting to see peer learning among them. Elder kids started reading story books to younger ones. They were also thought how to narrate the story so as to make this process sustainable. They also started facilitating the treasure hunt game.

Read aloud demonstration

"Akka Anna please read this story for me"

Children themselves came up with an action plan that they would at least make one younger child to read and narrate a story in next one month and to visit the library every day to read the books.

Few librarians also started to read the books to children.

Librarian reading the books to children

"I have forgotten to read Teacher now I will learn through these books" said one boy of class 4th.

"Are you going to come and give us these books every day?" was the question asked by most of them to which I used to reply that they can come and read it in their library. Next question of theirs is "Where is the library? What time is it open?"

Thanks to the ones who had thought of this idea and implemented it! It's a great way to get children back to learning, proved by this pic just shared by one of the teacher. Her students were happily reading our books in their Gram panchayat library.

Bayalu 100th Issue's Core Team

Karnataka	Umashankar Periodi
Bangalore	Gururaja Budhya, Raghavendra Herle, Hanumantha Raju
Gulbarga	Bharath
Raichur	Srinivas
Bidar	Manjunath K N
Vijayapura	Mahantesh
Bagalkot	Shivakumar CS
Koppal	Akshatha Belludi, Hameed Manjeshwar
Ballari	Ravi Kumar Dharavathu
Mandya	Ravindra
Yadgir	Archana, Ranganath, Divyashri C, Nishanth

Also Read & Watch...

You can watch Bayalu The Film here:

https://azimpremjifoundation-my.sharepoint.com/:v:/g/personal/bayalu_emagazine_azimpremjifoundation_org/ERuQLREL4lBPsQX5jXfJ5GQB1XAKAMd6-jrooAU1FmLIDQ